# ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 1 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 16 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



# ಪಹಲ್ಗಾಮ್ ಉಗ್ರರ ಜೀವಂತ ಹಿಡಿಯಿರಿ: ಪ್ರಧಾನಿ ಮೋದಿ ಖಡಕ್ ಸೂಚನೆ

ನವದೆಹಲಿ, ಏ.30– ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನವದೆಹಲಿಯಲ್ಲಿ ಭದ್ರತಾ ಸಂಪುಟ ಸಮಿತಿಯ ಪ್ರಮುಖ ಸಭೆ ನಡೆಯಿತು. ಜಮ್ಮು ಕಾಶ್ಮೀರದ ಪಹಲ್ಗಾಮ್‌ನ ಬೈಸರನ್‌ನಲ್ಲಿ 27 ಪ್ರವಾಸಿಗರು ಹಾಗೂ ಒಬ್ಬ ಕಾಶ್ಮೀರಿ ನಾಗರಿಕರನ್ನು ಉಗ್ರರು ದಾರುಣವಾಗಿ ಹತ್ಯೆ ಮಾಡಿದ ಬಳಿಕ ನಡೆದ 2ನೇ ಸಿಸಿಎಸ್ ಸಭೆ ಇದಾಗಿತ್ತು.

ಪ್ರಧಾನಿ ಮೋದಿಯವರ 7, ಲೋಕ ಕಲ್ಯಾಣ್ ಮಾರ್ಗ ನಿವಾಸದಲ್ಲಿ ನಡೆದ ಸಭೆಯ ನಂತರ ಭದ್ರತಾ ಸಂಸ್ಥೆಗಳಿಗೆ ಪ್ರಮುಖ ಮಾಹಿತಿ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಏಜೆನ್ಸಿಗಳಿಗೆ ರವಾನಿಸಲಾದ ಪ್ರಮುಖ ಸಂದೇಶಗಳಲ್ಲಿ ಒಂದು ಪಹಲ್ಗಾಮ್ ಭಯೋತ್ಪಾದಕರನ್ನು ಜೀವಂತವಾಗಿ ಹಿಡಿಯಿರಿ ಎನ್ನುವುದಾಗಿದೆ.



ಬೈಸರನ್ ಹತ್ಯಾಕಾಂಡದ ಸತ್ಯವನ್ನು ಬಹಿರಂಗಪಡಿಸುವುದು ಈ ಸೂಚನೆಗೆ ಕಾರಣ ಎಂದು ಮೂಲಗಳು ಹೇಳುತ್ತವೆ. ದಾಳಿಯಲ್ಲಿ ಪಾಕಿಸ್ತಾನದ ಸ್ಪಷ್ಟ ಪಾತ್ರವನ್ನು ತೋರಿಸುವ ಸಾಕಷ್ಟು ಪುರಾವೆಗಳಿವೆ ಎಂದು ಆರಂಭಿಕ ಗುಪ್ತಚರ ವರದಿಗಳು ಹೇಳಿವೆ.

ಏಜೆನ್ಸಿಗಳಿಗೆ ತಿಳಿಸಲಾದ ಇನ್ನೊಂದು ಅಂಶವೆಂದರೆ, ಸ್ಥಳೀಯ ಸಹ–ಸಂಚುಕೋರರು ಮತ್ತು ಭಯೋತ್ಪಾದಕರಿಗೆ ಸಹಾಯ ಮಾಡಿದ ಎಲ್ಲರನ್ನು ಮಟ್ಟಹಾಕಿ ಎನ್ನುವುದಾಗಿದೆ. ದಾಳಿಯಲ್ಲಿ ಸುಮಾರು ನಾಲ್ವರು ಭಯೋತ್ಪಾದಕರು ಭಾಗಿಯಾಗಿದ್ದಾರೆ ಎಂದು ಹಲವು ವರದಿಗಳು ಬಂದಿವೆ. ಆದರೆ, ದಾಳಿಕೋರರ ನಿಖರವಾದ ಸಂಖ್ಯೆಯನ್ನು ಇಲ್ಲಿವರೆಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಹೆಚ್ಚಿನ ಪ್ರತ್ಯಕ್ಷದರ್ಶಿಗಳು ತೀವ್ರ ಆಘಾತಕ್ಕೊಳಗಾಗಿದ್ದಾರೆ ಮತ್ತು ಸಾಕ್ಷ್ಯ ನೀಡುವ ಸ್ಥಿತಿಯಲ್ಲಿಲ್ಲದ ಕಾರಣ ಇದು ಸಂಭವಿಸಿದೆ ಎಂದು ಮೂಲಗಳು ತಿಳಿಸಿವೆ. ಸ್ಥಳೀಯ ಪೊಲೀಸರು ಬಿಡುಗಡೆ ಮಾಡಿದ ರೇಖಾಚಿತ್ರಗಳಲ್ಲಿ ಒಂದು, ಹಾಶಿಮ್ ಎಂಬ ವಿದೇಶಿ ಭಯೋತ್ಪಾದಕನಿಗೆ ಹೋಲುತ್ತದೆ. ಮೂಲಗಳ ಪ್ರಕಾರ, ಇಲ್ಲಿವರೆಗೆ ತನಿಖೆಯಿಂದ ಹೊರಹೊಮ್ಮಿರುವ ಮತ್ತೊಂದು ನಿರ್ಣಾಯಕ ಅಂಶವೆಂದರೆ ಗುಂಡಿನ ದಾಳಿ ನಡೆದ ಮಾದರಿ. ಗುಂಡಿನ ದಾಳಿಯ ನಿಖರವಾದ ಮಾದರಿಯು ಭಯೋತ್ಪಾದಕರಿಗೆ ಪಾಕಿಸ್ತಾನದಲ್ಲಿ ತರಬೇತಿ ನೀಡಲಾಗಿದೆ ಎಂದು ತೋರಿಸುತ್ತದೆ ಎಂದು ಮೂಲಗಳು ತಿಳಿಸಿವೆ. ಭಯೋತ್ಪಾದಕರನ್ನು ಹಿಡಿಯಲು ವಿವಿಧ ಏಜೆನ್ಸಿಗಳ ನಡುವೆ ಹಲವಾರು ಸಭೆಗಳು ನಡೆಯುತ್ತಿವೆ.

## 24–36 ತಾಸಿನೊಳಗೆ ಭಾರತದಿಂದ ದಾಳಿ

### ರಾತ್ರೋರಾತ್ರಿ ಪಾಕ್ ಮಾಹಿತಿ ಸಚಿವ ಅತಾವುಲ್ಲಾ ತರಾರ್ ಹೇಳಿಕೆ

**ಇಸ್ಲಾಮಾಬಾದ್:** ಭಾರತವು ಮುಂದಿನ 24ರಿಂದ 36 ಗಂಟೆಗಳಲ್ಲಿ ತನ್ನ ವಿರುದ್ಧ ಮಿಲಿಟರಿ ಕಾರ್ಯಾಚರಣೆ ನಡೆಸಲು ಯೋಜನೆ ರೂಪಿಸಿರುವುದು ಗುಪ್ತಚರ ಮೂಲಗಳಿಂದ ತಿಳಿದು ಬಂದಿದೆ ಎಂದು ರಾತ್ರೋರಾತ್ರಿ ಪಾಕಿಸ್ತಾನ ಹೇಳಿದೆ. ಒಂದು ವೇಳೆ ಸೇನಾ ಕಾರ್ಯಾಚರಣೆ ನಡೆಸಿದ್ದೇ ಆದರೆ, ತಕ್ಕ ಪರಿಣಾಮ ಎದುರಿಸಬೇಕು ಎಂದು ಭಾರತಕ್ಕೆ ಎಚ್ಚರಿಕೆ ನೀಡಿದೆ. ಪಹಲ್ಗಾಮ್ ಭಯೋತ್ಪಾದಕರ ದಾಳಿಗೆ ಪ್ರತ್ಯುತ್ತರ ನೀಡಲು ದಾಳಿಯ ಮಾದರಿ, ಗುರಿ ಹಾಗೂ ಸಮಯ ನಿರ್ಧರಿಸಲು ಸಶಸ್ತ್ರ ಪಡೆಗಳಿಗೆ ಸಂಪೂರ್ಣ ಕಾರ್ಯಾಚರಣೆ ಸ್ವಾತಂತ್ರ್ಯ ಇದೆ ಎಂದು ಪ್ರಧಾನಿ ಮೋದಿ ಅವರು ಸೇನೆಗಳ ಮುಖ್ಯಸ್ಥರಿಗೆ ಸೂಚಿಸಿದ ಕೆಲವೇ ಗಂಟೆಗಳ ಬಳಿಕ ಪಾಕಿಸ್ತಾನದ ಹೇಳಿಕೆ ಹೊರಬಿದ್ದಿದೆ. ಪಹಲ್ಗಾಮ್ ದಾಳಿಯಲ್ಲಿ ಪಾಕಿಸ್ತಾನದ ಕೈವಾಡದ ಬಗ್ಗೆ ಹುಸಿ ಆರೋಪಗಳ ಆಧಾರದ ಮೇಲೆ ಭಾರತವು ■6ನೇ ಪುಟಕ್ಕೆ


ಅತಾವುಲ್ಲಾ ತರಾರ್



## ಬಿಡುವು

ಕಾರ್ಮಿಕ ದಿನಾಚರಣೆ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 2.5.2025ರ ಶುಕ್ರವಾರದ ಸಂಚಿಕೆ ಪ್ರಕಟವಾಗುವುದಿಲ್ಲ. –ವ್ಯವಸ್ಥಾಪಕರು



## ಉಗ್ರರ ಮನೆ ನೆಲಸಮ; ಪ್ರತೀಕಾರಕ್ಕೆ ಕಾಶ್ಮೀರಿ ಪಂಡಿತರು, ಮುಸ್ಲಿಮೇತರ ವಲಸೆ ಕಾರ್ಮಿಕರ ಮೇಲೆ ದಾಳಿಗೆ ಟಿಆರ್‌ಎಫ್ ಸಂಚು

### ಗುಪ್ತಚರ ದಳ ಎಚ್ಚರಿಕೆ

ನವದೆಹಲಿ,ಏ.30–ಪಹಲ್ಗಾಮ್ ಉಗ್ರರ ದಾಳಿ ಬೆನ್ನಲ್ಲೇ ಉಗ್ರರ ಮನೆಗಳನ್ನು ಕೆಡವಿ ಭಾರತೀಯ ಸೇನೆ ಕೈಗೊಂಡ ದಿಟ್ಟ ಕ್ರಮ ಉಗ್ರರ ಕಣ್ಣು ಕೆಂಪಾಗುವಂತೆ ಮಾಡಿದ್ದು, ಪ್ರತೀಕಾರವಾಗಿ ಕಾಶ್ಮೀರಿ ಪಂಡಿತರು–ಮುಸ್ಲಿಮೇತರ ವಲಸೆ ಕಾರ್ಮಿಕರ ಮೇಲೆ ದಾಳಿ ಮಾಡಲು ಸಂಚು ರೂಪಿಸಿದ್ದಾರೆಂದು ಗುಪ್ತಚರ ದಳ ಎಚ್ಚರಿಕೆ ನೀಡಿದೆ.

ಪಹಲ್ಗಾಮ್ ಉಗ್ರರ ದಾಳಿ ಬಳಿಕ ಸಕ್ರಿಯ ಭಯೋತ್ಪಾದಕರಿಗೆ ಸಂಬಂಧಿಸಿದ 9 ಮನೆಗಳನ್ನು ಭಾರತೀಯ ಸೇನಾಪಡೆ ಧ್ವಂಸಗೊಳಿಸಿತ್ತು. ಇದಕ್ಕೆ ಪಾಕಿಸ್ತಾನ ಮೂಲದ ನಿಷೇಧಿತ ಸಂಘಟನೆ ಲಷ್ಕರ್–ಇ–ತೊಯ್ಬಾ (ಎಲ್‌ಇಟಿ)ದ ಅಂಗ ಸಂಘಟನೆಯಾಗಿರುವ 'ದಿ ರೆಸಿಸ್ಟೆನ್ಸ್ ಫ್ರಂಟ್' (ಟಿಆರ್‌ಎಫ್) ಪ್ರತೀಕಾರ ತೀರಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಉಗ್ರರ ಈ ಗುಂಪಿನಲ್ಲಿ ಅಫ್ಘಾನಿಸ್ತಾನದಲ್ಲಿ ಯುದ್ಧ ಭೂಮಿ ಅನುಭವ ■6ನೇ ಪುಟಕ್ಕೆ

# ಕೇಂದ್ರ ಸರ್ಕಾರದ ಮಹತ್ವದ ನಿರ್ಧಾರ

# ಜನಗಣತಿಯಲ್ಲಿ ಜಾತಿ ಗಣತಿ

**ನವದೆಹಲಿ,ಏ.30–ಮುಂದಿನ ರಾಷ್ಟ್ರೀಯ ಜನಗಣತಿಯಲ್ಲಿ, ಜಾತಿ ಜನಗಣತಿಯನ್ನು ಪಾರದರ್ಶಕ ರೀತಿಯಲ್ಲಿ ಸೇರಿಸಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಬುಧವಾರ ಘೋಷಿಸಿದರು.**


ಅಶ್ವಿನಿ ವೈಷ್ಣವ್

ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿಯು ಮುಂಬರುವ ಜನಗಣತಿಯಲ್ಲಿ ಜಾತಿ ಎಣಿಕೆಯನ್ನು ಸೇರಿಸಲು ನಿರ್ಧರಿಸಿದೆ ಎಂದು ಕೇಂದ್ರ ಸಚಿವರು, ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

ಜನಗಣತಿ ಕಾರ್ಯ ಏಪ್ರಿಲ್ 2020ರಲ್ಲಿ ಪ್ರಾರಂಭವಾಗಬೇಕಿತ್ತು. ಆದರೆ ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ವಿಳಂಬವಾಯಿತು. 10 ವರ್ಷಗಳ ವೇಳಾಪಟ್ಟಿ ಪ್ರಕಾರ ಈ ಕಾರ್ಯ ನಡೆದಿದ್ದರೆ, ವರದಿಯು 2021ರಲ್ಲಿ ಪ್ರಕಟವಾಗುತ್ತಿತ್ತು.

ಸಂಪುಟದ ದೊಡ್ಡ ನಿರ್ಧಾರವನ್ನು ಘೋಷಿಸುವಾಗ ವೈಷ್ಣವ್, ಕಾಂಗ್ರೆಸ್ ವಿರುದ್ಧ



ವಾಗ್ದಾಳಿ ನಡೆಸಿದ್ದಾರೆ. ಇಂಡಿ ಬ್ಲಾಕ್ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಜಾತಿ ಆಧಾರಿತ ಜನಸಂಖ್ಯಾ ಎಣಿಕೆಯನ್ನು ಬಳಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

**ಕಾಂಗ್ರೆಸ್ ವಿರುದ್ಧ ವಾಗ್ದಾಳಿ:** ಕಾಂಗ್ರೆಸ್ ಸರ್ಕಾರಗಳು ಯಾವಾಗಲೂ ಜಾತಿ ಜನಗಣತಿಯನ್ನು ವಿರೋಧಿಸಿವೆ. 2010ರಲ್ಲಿ, ಮಾಜಿ ಪ್ರಧಾನಿ ದಿವಂಗತ ಡಾ.ಮನಮೋಹನ್ ಸಿಂಗ್ ಜಾತಿ ಜನಗಣತಿಯ ವಿಷಯವನ್ನು ಸಚಿವ ಸಂಪುಟದಲ್ಲಿ ಪರಿಗಣಿಸಬೇಕು ಎಂದು ಸಂಸತ್ತಿನಲ್ಲಿ ಹೇಳಿದ್ದರು. ಈ ವಿಷಯವನ್ನು ಪರಿಗಣಿಸಲು ಸಚಿವರ ಗುಂಪನ್ನು ರಚಿಸಲಾಯಿತು. ಹೆಚ್ಚಿನ ರಾಜಕೀಯ ಪಕ್ಷಗಳು ಜಾತಿ ಜನಗಣತಿಯನ್ನು ■6ನೇ ಪುಟಕ್ಕೆ

## ಯಾವಾಗ ಮಾಡ್ತೀರಾ ಹೇಳಿ...

### ಕೇಂದ್ರ ಸರ್ಕಾರದ ನಿರ್ಧಾರಕ್ಕೆ ರಾಹುಲ್ ಗಾಂಧಿ ಸ್ವಾಗತ



**ನವದೆಹಲಿ:** ಮುಂಬರುವ ಜನಗಣತಿ ಪ್ರಕ್ರಿಯೆಯಲ್ಲಿ ಜಾತಿ ಗಣತಿಯನ್ನು ಪಾರದರ್ಶಕ ರೀತಿಯಲ್ಲಿ ಸೇರಿಸಲಾಗುವುದು ಎಂದು ಮೋದಿ ಸರ್ಕಾರ ಘೋಷಿಸಿದೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಜಾತಿ ಜನಗಣತಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ. ಆದರೆ ಅದಕ್ಕೆ ಸ್ಪಷ್ಟ ಸಮಯದ ಸೂಚಿಯ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಯಾವಾಗ ಜಾತಿ ಗಣತಿ ನಡೆಸುತ್ತೀರೆಂದು ಟೈಮ್‌ಲೈನ್ ನೀಡಿ ಎಂದು ರಾಹುಲ್ ಗಾಂಧಿ ಆಗ್ರಹಿಸಿದ್ದಾರೆ. ಇಂದು ರಾಜಕೀಯ ವ್ಯವಹಾರಗಳ ಕುರಿತಾದ ಸಂಪುಟ ಸಮಿತಿ ತೆಗೆದುಕೊಂಡ ನಿರ್ಧಾರಗಳನ್ನು ಪ್ರಕಟಿಸಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ಜನಗಣತಿ ಕೇಂದ್ರದ ವ್ಯಾಪ್ತಿಗೆ ಬರುತ್ತದೆ. ಆದರೆ ಕೆಲವು ರಾಜ್ಯಗಳು ಸಮೀಕ್ಷೆಗಳ ಹೆಸರಿನಲ್ಲಿ ಜಾತಿ ಗಣತಿ ಮಾಡಿವೆ ಎಂದು ಟೀಕಿಸಿದ್ದರು. ನಾವು ಜಾತಿ ಜನಗಣತಿ ನಡೆಸುತ್ತೇವೆ ಎಂದು ಸಂಸತ್ತಿನಲ್ಲಿ ಹೇಳಿದ್ದೆವು. ಇದೀಗ ಇದ್ದಕ್ಕಿದ್ದಂತೆ 11 ವರ್ಷಗಳ ನಂತರ ಜಾತಿ ಜನಗಣತಿ ಘೋಷಿಸಲಾಗಿದೆ. ನಾವು ಅದನ್ನು ಸಂಪೂರ್ಣ ಬೆಂಬಲಿಸುತ್ತೇವೆ. ಆದರೆ ನಮಗೆ ಒಂದು ಕಾಲಮಿತಿ ಬೇಕು. ಜಾತಿ ಗಣತಿ ಯಾವಾಗ ನಡೆಯುತ್ತದೆ ಎಂದು ನಾವು ತಿಳಿದುಕೊಳ್ಳಲು ಬಯಸುತ್ತೇವೆ. ಇದು ಮೊದಲ ಹೆಜ್ಜೆ ಜಾತಿ ಜನಗಣತಿಯಲ್ಲಿ ತೆಲಂಗಾಣವು ಮಾದರಿಯಾಗಿದೆ. ಜಾತಿ ಜನಗಣತಿಯನ್ನು ವಿನ್ಯಾಸಗೊಳಿಸುವಲ್ಲಿ ನಾವು ಸರ್ಕಾರಕ್ಕೆ ನಮ್ಮ ಬೆಂಬಲ ನೀಡುತ್ತೇವೆ ಎಂದು ರಾಹುಲ್ ಗಾಂಧಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಜನಗಣತಿಗೆ ತಮ್ಮ ಪಕ್ಷದ ಬದ್ಧತೆಯನ್ನು ಪುನರುಚ್ಚರಿಸಿದ ಅವರು, ಜಾತಿ ಗಣತಿ ನಡೆಸುವುದನ್ನು ಮತ್ತು ಮೀಸಲಾತಿಯ ಮೇಲಿನ 50% ಮಿತಿಯನ್ನು ತೆಗೆದು ಹಾಕುವುದನ್ನು ಖಚಿತಪಡಿಸಿಕೊಳ್ಳುವುದಾಗಿ ಹೇಳಿದರು. ಹಾಗೇ, ಮೋದಿ ಹೇಳಿದಂತೆ ಕೇವಲ 4 ವಿಶಾಲ ಜಾತಿ ವರ್ಗಗಳನ್ನು ಗುರುತಿಸುವ ಕಲ್ಪನೆಯನ್ನು ಕಾಂಗ್ರೆಸ್ ಬೆಂಬಲಿಸುತ್ತದೆ. ಆದರೆ ಜನಗಣತಿ ಯಾವಾಗ ನಡೆಸಲಾಗುತ್ತದೆ ಎಂಬುದರ ಕುರಿತು ಸ್ಪಷ್ಟತೆ ಬೇಕು ಎಂದರು. ನಾವು ಸರ್ಕಾರವನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇವೆ. ತೆಲಂಗಾಣದ ಮಾದರಿಗಳನ್ನು ಬಳಸಿಕೊಂಡು ಜಾತಿ ಜನಗಣತಿ ವಿನ್ಯಾಸಗೊಳಿಸಲು ಸಹಾಯ ಮಾಡಲು ಸಿದ್ಧರಿದ್ದೇವೆ. ಆದರೆ ಸರ್ಕಾರವು ಒಂದು ಸಮಯ ನೀಡಬೇಕು ಎಂದರು.

## ಹಾಸನ ಮಿತ್ರ

## ಬೇಡಿಕೆಗಳ ಈಡೇರಿಕೆಗಾಗಿ ಪೌರ ನೌಕರರಿಂದ ಕೈಗೆ ಕಪ್ಪುಪಟ್ಟಿ ಧರಿಸಿ, ತಮಟೆ ಚಳುವಳಿ



ಹಾಸನ, ಏ.30– ಸಮಸ್ತ ಪೌರ ನೌಕರರು ನ್ಯಾಯಸಮ್ಮತವಾದ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಪೌರ ನೌಕರರ ಸಂಘದಿಂದ ತಮಟೆ ಚಳುವಳಿ ಜೊತೆಗೆ ಕೈತೋಳಿಗೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಹೊರಟ ಪ್ರತಿಭಟನಾ ಮೆರವಣಿಗೆಯು ಎನ್.ಆರ್.ವೃತ್ತದ ಮೂಲಕ ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ತಲುಪಿತು. ಇದೆ ವೇಳೆ ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲೋಕೇಶ್ ಮಾಧ್ಯಮದೊಂದಿಗೆ ಮಾತನಾಡಿ, ಸಂಘಟನೆಯ ಹಾಸನ ಶಾಖೆ ಮತ್ತು ಜಿಲ್ಲಾ ಶಾಖೆ ಇವರ ವತಿಯಿಂದ ರಾಜ್ಯದ ಸಮಸ್ತ ಪೌರ ನೌಕರರ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಮುಂದಿಟ್ಟುಕೊಂಡು ತಮಟೆ ಚಳುವಳಿ ಮತ್ತು ಮೆರವಣಿಗೆ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಪ್ರಮುಖವಾದ ನ್ಯಾಯಸಮ್ಮತ ಬೇಡಿಕೆಗಳು ಎಂದರೇ, ರಾಜ್ಯ ನಗರ ಸ್ಥಳೀಯ ಸಂಸ್ಥೆಯ ನೌಕರರನ್ನು ರಾಜ್ಯ ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಕೆಜಿಐಡಿ, ಜ್ಯೋತಿ ಸಂಜೀವಿನಿ ಸೇರಿದಂತೆ ಸರ್ಕಾರಿ ನೌಕರರು ಪಡೆಯುವ ಎಲ್ಲಾ ಸೌಲಭ್ಯಗಳನ್ನು ನಮಗೂ ವಿಸ್ತರಿಸಬೇಕು ಎಂದರು. ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ನೀರು ಸರಬರಾಜು ಸಹಾಯಕರು, ವಾಹನ ಚಾಲಕರು, ಒಳಚರಂಡಿ ವಿಭಾಗದ ನೌಕರರು, ಬೀದಿ ದೀಪ ಸಹಾಯಕರು, ಲೋಡರ್ಸ್, ಪಾರ್ಕ್ ಗಾರ್ಡನರ್, ಸ್ಯಾನಿಟರಿ ಸೂಪರ್ ವೈಸರ್, ಡಾಟಾ ಎಂಟ್ರಿ ಆಪರೇಟರ್ಸ್, ವಾಹನ ಸಹಾಯಕರು ಇವರುಗಳನ್ನು ನೇರ ಪಾವತಿ ಯೋಜನೆಯಲ್ಲಿ ಪರಿಗಣಿಸಬೇಕು. ಪ್ರತಿಭಟನೆಯಲ್ಲಿ ರಾಜ್ಯ ಪೌರ ನೌಕರರ ಶಾಖಾ ಸಂಘದ ಅಧ್ಯಕ್ಷ ವೆಂಕಟೇಶ್, ಉಪಾಧ್ಯಕ್ಷ ರಮೇಶ್, ಸಂಘಟನಾ ಕಾರ್ಯದರ್ಶಿ ಪರಶುರಾಮು ಸೇರಿದಂತೆ ಸದಸ್ಯರು ಉಪಸ್ಥಿತರಿದ್ದರು.

## ನಗರಸಭೆ ಅಧ್ಯಕ್ಷರ ಅವಿಶ್ವಾಸ ನಿರ್ಣಯದ ಮುಖಭಂಗ ನನಗಲ್ಲ, ಬಿಜೆಪಿ ರಾಜ್ಯಾಧ್ಯಕ್ಷರಿಗೆ

### ಮಾಜಿ ಸಚಿವ ಹೆಚ್.ಡಿ.ರೇವಣ್ಣ ಗುಡುಗು



ಹಾಸನ, ಏ.30–ನಗರಸಭೆ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯದ ಮುಖಭಂಗ ಬಿಜೆಪಿ ರಾಜ್ಯಾಧ್ಯಕ್ಷರಿಗೆ ಹೊರತು ನನಗಲ್ಲ. ಜಿಲ್ಲೆಯಲ್ಲಿ ಬಿಜೆಪಿಯನ್ನು ಕಾಂಗ್ರೆಸ್‌ಗೆ ಅಡ ಇಟ್ಟಿದ್ದಾರೆ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಗುಡುಗಿದರು.

ನಗರದ ಪ್ರವಾಸಿ ಮಂದಿರದಲ್ಲಿ ಮಾಧ್ಯಮದೊಂದಿಗೆ ಮಾತನಾಡಿ, ಅವಿಶ್ವಾಸ ನಿರ್ಣಯವನ್ನು ಯಾವ ಉದ್ದೇಶಕ್ಕಾಗಿ ತಂದಿದ್ದೇನೆ ಎಂಬ ಬಗ್ಗೆ ನಮ್ಮ ಪಾರ್ಟಿಯ ಎಲ್ಲರು ಚರ್ಚಿಸಿ ತೀರ್ಮಾನಿಸಿದ್ದೇವೆ. ಈಗಿನ ಅಧ್ಯಕ್ಷರು ನನಗೆ ಮೂರೇ ತಿಂಗಳು ಸಾಕು ಅಂದಿದ್ದರು. ಆದರೆ ಮೂರು ಹೋಗಿ ಆರು ತಿಂಗಳು ಕಳೆದರೂ ಅಧಿಕಾರ ಬಿಡಲಿಲ್ಲ. ಬೇಕಾದರೆ ಹಾಸನಾಂಬೆ ಮುಂದೆ ಸತ್ಯದ ಬಗ್ಗೆ ಆಣೆ ಮಾಡಲಿ. ನಾವು ಮುಸಲ್ಮಾನ್ ಸದಸ್ಯರಿಗೆ ಅವಕಾಶ ಕೊಡಬೇಕು ಎಂದಿದ್ದೆವು. ಆದರೆ ನನಗೇ ಮೊದಲ ಅವಕಾಶ ಕೊಡಿ ಎಂದು ಕೇಳಿದ್ದರು. ಹಿಂದೆ ಎನ್‌ಡಿಎ ಜೊತೆ ಮೈತ್ರಿ ಇದೆ ಅಂಥ ಉಪಾಧ್ಯಕ್ಷ ಸ್ಥಾನ ಕೊಟ್ಟಿದ್ದೆವು. ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷರಿಗೂ ತಿಳಿಸಿದ್ದೇನೆ. ನನಗೆ ಮುಖಭಂಗ ಆಗಿಲ್ಲ. ಬಿಜೆಪಿ ರಾಜ್ಯಾಧ್ಯಕ್ಷರಿಗೆ ಮುಖಭಂಗ ಆಗಿರುವುದು. ಕಳೆದ ಒಂದು ವರ್ಷದಿಂದ ಜಿಲ್ಲೆಯಲ್ಲಿ ಏನು ನಡೆಯುತ್ತಿದೆ ಬಿಜೆಪಿ ರಾಜ್ಯಾಧ್ಯಕ್ಷರಿಗೆ ಗೊತ್ತಾಗಬೇಕು. ಹಾಸನದಲ್ಲಿ ಬಿಜೆಪಿ–ಕಾಂಗ್ರೆಸ್ ಎರಡು ಸೇರಿ ಪ್ರಾದೇಶಿಕ ಪಕ್ಷದ ಮೇಲೆ ಸವಾಲು ಒಡ್ಡಿವೆ. ಆ ಸವಾಲನ್ನು ನಾವು ಸ್ವೀಕರಿಸುತ್ತೇವೆ. ನಮ್ಮ ಸದಸ್ಯರು ನಮ್ಮ ಪಕ್ಷದ ಗೌರವ ಉಳಿಸಿದ್ದಾರೆ ಎಂದರು. ರಾಜ್ಯದಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿ ಇದ್ದರೇ ಹಾಸನದಲ್ಲಿ ಮಾತ್ರ ಬಿಜೆಪಿ ಕಾಂಗ್ರೆಸ್ ಅಲೆಯನ್ಸ್ ಇದೆ ಎಂದು ಹಾಸನದಲ್ಲಿ ಅವಿಶ್ವಾಸ ಮಂಡನೆ ಸೋತ ಬಗ್ಗೆ ರೇವಣ್ಣ ಆಕ್ರೋಶ ವ್ಯಕ್ತಪಡಿಸಿದರು.

## ಉಚಿತ ಕುಡಿಯುವ ನೀರಿನ ಘಟಕಕ್ಕೆ ಚಾಲನೆ



ಹಾಸನ, ಏ.30– ಬೇಸಿಗೆ ಹಿನ್ನೆಲೆಯಲ್ಲಿ ಎರಡು ತಿಂಗಳ ಕಾಲ ಉಚಿತ ಕುಡಿಯುವ ನೀರನ್ನು ನಗರದ ಸಂತೇಪೇಟೆ ವೃತ್ತದಲ್ಲಿ ಸಫಾ ಬೈತುಲ್ ಮಾಲ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಕಲ್ಪಿಸಿದ್ದು, ಇದಕ್ಕೆ ಪೊಲೀಸ್ ಅಧಿಕಾರಿ ಕೃಷ್ಣನಾಯಕ್ ಚಾಲನೆ ನೀಡಿದರು.

ಈ ವೇಳೆ ಟ್ರಸ್ಟ್ ಕಾರ್ಯಕರ್ತ ಅಮೀರ್ ಜಾನ್ ಮಾಧ್ಯಮದೊಂದಿಗೆ ಮಾತನಾಡಿ, ಸಫಾ ಬೈತುಲ್ ಮಾಲ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ನಿರಂತರ'ವಾಗಿ ಸುಮಾರು 14 ವರ್ಷಗಳಿಂದ ಬೇಸಿಗೆ ವೇಳೆ ಹಾಸನದ ನಾಗರಿಕರಿಗೆ ಉಚಿತ ಕುಡಿಯುವ ನೀರನ್ನು ಕಲ್ಪಿಸಲಾಗುತ್ತಿದೆ. ಈ ವರ್ಷ ಕೂಡ ಉಚಿತ ಶುದ್ಧ ಕುಡಿಯುವ ನೀರನ್ನು ನಮ್ಮ ಸಂಘಟನೆ ವತಿಯಿಂದ ಕಲ್ಪಿಸಲಾಗುತ್ತಿದೆ. ಸಂತೇಪೇಟೆ ವೃತ್ತ ಮತ್ತು ಸರಕಾರಿ ಆಸ್ಪತ್ರೆ ಬಳಿ ಉಚಿತ ಕುಡಿಯುವ ನೀರಿನ ಘಟಕ ತೆರೆಯಲಾಗಿದೆ ಎಂದರು.

ಸಫಾ ಬೈತುಲ್ ಮಾಲ್ ಚಾರಿಟೆಬಲ್ ಟ್ರಸ್ಟ್ ಹಾಸನ ಘಟಕದ ಅಧ್ಯಕ್ಷ ಮುಕ್ತಾರ್ ಅಹಮದ್, ಜಾಫರ್ ಸಾದೀಕ್, ಅಬ್ದುಲ್ ಮಾದಿದ್, ಆದೀಲ್ ಪಾಷಾ ಇತರರು ಉಪಸ್ಥಿತರಿದ್ದರು.

## ಆಸ್ತಿ ತೆರಿಗೆ ರಿಯಾಯಿತಿ ಇನ್ನು 2 ತಿಂಗಳು ವಿಸ್ತರಿಸಲು ಪಾಲಿಕೆ ಪ್ರಸ್ತಾವನೆ

ಮೈಸೂರು, ಏ.30(ಆರ್‌ಕೆ)– ಆಸ್ತಿ ತೆರಿಗೆ ಪಾವತಿಸಲು ನೀಡಲಾಗಿದ್ದ ಶೇ.5ರ ರಿಯಾಯಿತಿಯನ್ನು ಮತ್ತೆ ಎರಡು ತಿಂಗಳು ವಿಸ್ತರಿಸುವಂತೆ ಕೋರಿ ಮೈಸೂರು ಮಹಾನಗರ ಪಾಲಿಕೆಯು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

2025ರ ಏಪ್ರಿಲ್ 1ರಿಂದ ಶೇ.5ರ ರಿಯಾಯಿತಿಯಡಿ ಆಸ್ತಿ ತೆರಿಗೆ ಪಾವತಿಗೆ ಅವಕಾಶ ನೀಡಲಾಗಿತ್ತು. ಈ ಅವಕಾಶ ಬಳಸಿಕೊಂಡು ಸಾರ್ವಜನಿಕರು ತಮ್ಮ ಆಸ್ತಿಗಳ ಮೇಲೆ ತೆರಿಗೆಯನ್ನು ಆಯಾ ವಲಯ ಕಚೇರಿಗಳಲ್ಲಿ ಪಾವತಿಸಿದ್ದಾರೆ. ಕಡೇ ದಿನವಾದ ಇಂದು ಸರ್ಕಾರಿ ರಜೆ ಇದ್ದಾಗ್ಯೂ ನಗದು ಕೌಂಟರ್‌ಗಳನ್ನು ತೆರೆದಿದ್ದರಿಂದ ಜನರು ತೆರಿಗೆ ಪಾವತಿಸಲು ಸಂಜೆ 6.30 ಗಂಟೆವರೆಗೂ ಮುಗಿ ಬಿದ್ದರು.

ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವುದರಿಂದ ಜೂನ್ 30ರವರೆಗೆ ಎರಡು ತಿಂಗಳ ಕಾಲ ಶೇ.5ರ ರಿಯಾಯಿತಿಯನ್ನು ವಿಸ್ತರಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಪಾಲಿಕೆ ಉಪ ಆಯುಕ್ತ (ಕಂದಾಯ) ಸೋಮಶೇಖರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಈಗಾಗಲೇ ಬಿಬಿಎಂಪಿಗೆ 1 ತಿಂಗಳ ಕಾಲ ರಿಯಾಯಿತಿ ವಿಸ್ತರಿಸಿರುವುದರಿಂದ ನಮಗೂ ಅವಕಾಶ ನೀಡಬಹುದೆಂದು ನಿರೀಕ್ಷಿಸಲಾಗಿದೆ. ಅನುಮತಿ ನೀಡಿದರೆ ಸಾರ್ವಜನಿಕರಿಗೆ ಅನುಕೂಲವಾಗಲಿದ್ದು, ಪಾಲಿಕೆಗೂ ಸಂಪನ್ಮೂಲ ಕ್ರೋಢೀಕರಣವಾಗಲಿದೆ ಎಂದು ತಿಳಿಸಿದರು.

## ನಿಧನ



### ಎ.ಎಸ್.ನಂಜರಾಜೇ ಅರಸ್

ಮೈಸೂರು, ಏ.30–ಮೈಸೂರಿನ ತ್ಯಾಗರಾಜ ರಸ್ತೆಯ 5ನೇ ಕ್ರಾಸ್ ನಿವಾಸಿ ಎ.ಎಸ್.ನಂಜರಾಜೇ ಅರಸ್(ಚಿಕ್ಕ ಅಣ್ಣಯ್ಯ)(93) ಬುಧವಾರ ನಿಧನರಾದರು. ಮೃತರು ಮೂವರು ಪುತ್ರರು ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಅರಸು ಸಮುದಾಯದ ರುದ್ರಭೂಮಿಯಲ್ಲಿ ಬುಧವಾರ ಮಧ್ಯಾಹ್ನ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಒಳ ಮೀಸಲಾತಿ ಸಮೀಕ್ಷೆ ವೇಳೆ ಆದಿಜಾಂಬವರು 'ಮಾದಿಗ' ಎಂದು ಬರೆಸಿ

### ವಿಧಾನಪರಿಷತ್ ಸದಸ್ಯ ಡಿ.ತಿಮ್ಮಯ್ಯ ಸೂಚನೆ



ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಆದಿಜಾಂಬವ ಮುಖಂಡರ ಸಭೆ ನಡೆಸಿದರು.

ಮೈಸೂರು, ಏ.30–ಒಳಮೀಸಲಾತಿ ಸಮೀಕ್ಷೆ ವೇಳೆ ಪರಿಶಿಷ್ಟಜಾತಿಯ ಉಪ ಜಾತಿ ಮಾದಿಗ ಎಂದು ಬರೆಸುವಂತೆ ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಕರೆ ನೀಡಿದರು.

ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ಆದಿಜಾಂಬವ ಮುಖಂಡರ ಸಭೆ ನಡೆಸಿದ ಅವರು ಒಳ ಮೀಸಲಾತಿ ಕುರಿತು ತಿಳುವಳಿಕೆ ನೀಡಿ, ಮೇ 5ರಿಂದ ಪ್ರಾರಂಭವಾಗುವ ಒಳಮೀಸಲಾತಿ ಸಮೀಕ್ಷೆ ಮೇ 7ರವರೆಗೆ ನಡೆಯಲಿದ್ದು, ಈ ವೇಳೆ ಸಮೀಕ್ಷೆಗಾರರು ಪ್ರತಿ ಮನೆಮನೆಗೆ ಬಂದು ಸಮೀಕ್ಷೆ ಮಾಡುವರು. ಆ ಸಂದರ್ಭದಲ್ಲಿ ನಮ್ಮ ಮುಖಂಡರು ತಂಡ ಕಟ್ಟಿಕೊಂಡು ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಪ್ರತಿ ಕುಟುಂಬದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಜೊತೆಗೆ ರಾಜಕೀಯ ಮತ್ತು ಉದ್ಯೋಗ ಪ್ರಾತಿನಿಧ್ಯ ದೊರಕಿರುವ ಬಗ್ಗೆ ನಿಖರವಾದ ಮಾಹಿತಿ ನೀಡಬೇಕು ಹಾಗೂ ಜಾತಿ ಕಾಲಂನಲ್ಲಿ 'ಮಾದಿಗ' ಕೋಡ್–ನಂ.61 ಎಂದು ಬರೆಸಬೇಕು ಎಂದು ಡಾ.ತಿಮ್ಮಯ್ಯ ತಿಳಿಸಿದರು.

ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ಏಕ ಸದಸ್ಯ ಆಯೋಗವು ಮೊಬೈಲ್ ಆ್ಯಪ್ ಆಧಾರಿತ ಸಮೀಕ್ಷೆ ಕೈಗೊಂಡಿದ್ದು, ಈ ಸಂದರ್ಭದಲ್ಲಿ ಮಾಹಿತಿ ನೀಡಲು ಸಾಧ್ಯವಾಗದಿದ್ದವರು ಅಥವಾ ಕಾರ್ಯ ನಿಮಿತ್ತ ಹೊರಗಡೆ ಹೋಗಿದ್ದವರು ಅಂತಹ ಕುಟುಂಬ ಅಥವಾ ವ್ಯಕ್ತಿಗಳು ಮೇ 19ರಿಂದ 21ರವರೆಗೆ ವಿಶೇಷ ಶಿಬಿರಗಳಲ್ಲಿ ಮಾಹಿತಿ ನೀಡಬಹುದು. ಅಲ್ಲಲ್ಲಿ ಚದುರಿ ಹೋಗಿರುವ ಉದ್ಯೋಗಿಗಳು ಮತ್ತು ಅವರ ಕುಟುಂಬಸ್ಥರು ಆನ್‌ಲೈನ್ ಮೂಲಕ ಮಾಹಿತಿ ನೀಡಬಹುದು ಎಂದು ಹೇಳಿದರು.

ಸಭೆಯಲ್ಲಿ ಆದಿದ್ರಾವಿಡ ಸಂಘದ ರಾಜ್ಯಾಧ್ಯಕ್ಷ ಶ್ರೀನಿವಾಸ್, ಡಿಎಸ್‌ಎಸ್ ಸಂಘಟನಾ ಸಂಚಾಲಕ ನಂಜಪ್ಪ, ಆದಿ ಜಾಂಬವ ಸಂಘದ ವಿಭಾಗೀಯ ಅಧ್ಯಕ್ಷ ಎಡತೊರೆ ನಿಂಗರಾಜ್, ಜಿಲ್ಲಾ ಕಾರ್ಯದರ್ಶಿ ಡಿ.ಕುಮಾರ್, ಹುಣಸೂರು ಉಪವಿಭಾಗದ ಅಧ್ಯಕ್ಷ, ಕೆ.ಆರ್.ನಗರ ತಾಲೂಕು ಅಧ್ಯಕ್ಷ ಎಂ. ಲೋಕೇಶ್, ಹುಣಸೂರು ಅಧ್ಯಕ್ಷ ಶಿವಣ್ಣ, ಹೆಚ್.ಡಿ.ಕೋಟೆ ತಾಲೂಕಿನ ಶಿವಪ್ರಕಾಶ್ ಹಿರೇಹಳ್ಳಿ, ಎಡತೊರೆ ಸಿಂಗಯ್ಯ, ಜಾಬಗೆರೆ ಮಹೇಶ್, ಅಲ್ಲದೆ ಮೈಸೂರು ನಗರದ ಗಾಂಧಿನಗರ ಮತ್ತು ಕೈಲಾಸ್‌ಪುರಂ ಮುಖಂಡರಾದ ಕೆ.ಆರ್.ರಾಚಯ್ಯ, ದುರ್ಗೇಶ್, ಮಂಜುನಾಥ್ ಬಂಗಾರಯ್ಯ, ಡಿ.ಎಸ್.ಎಸ್. ನಗರಾಧ್ಯಕ್ಷ ಮಂಜು, ಗೌರವಾಧ್ಯಕ್ಷ ರಾಚಯ್ಯ, ಸುರೇಶ್ ಸುಂಡವಾಳು, ಹುಳಿಮಾವು ಸ್ವಾಮಿ, ಸಣ್ಣಮಾದಯ್ಯ, ದುದ್ದಗೆರೆ ರಾಮು, ರಂಗಚಾರಿಹುಂಡಿ ಸುನೀಲ್, ಸಿದ್ದಯ್ಯನಹುಂಡಿ ರವಿ, ಮಾರ್ಬಳ್ಳಿ ಶೇಖರ್, ಕೋಟೆಹುಂಡಿ ವೆಂಕಟರಾಮ್ ಇನ್ನಿತರ ಮುಖಂಡರು ಪಾಲ್ಗೊಂಡಿದ್ದರು.

## ಉಗ್ರರ ದಾಳಿ: ಪ್ರಧಾನಿಗಳು ಕೈಗೊಳ್ಳುವ ತೀರ್ಮಾನಕ್ಕೆ ಬೆಂಬಲ

### ಮೈಸೂರಲ್ಲಿ ಸಚಿವ ಸಂತೋಷ್‌ಲಾಡ್ ಪ್ರತಿಕ್ರಿಯೆ



ಮೈಸೂರು,ಏ.30(ಆರ್‌ಕೆ)– ಕಾಶ್ಮೀರದಲ್ಲಿ ಪಾಕಿಸ್ತಾನ ಭಯೋತ್ಪಾದಕರ ದಾಳಿ ಸಂಬಂಧ ಪ್ರಧಾನಿಗಳು ತೆಗೆದುಕೊಳ್ಳುವ ನಿರ್ಧಾರಕ್ಕೆ ನಮ್ಮ ಬೆಂಬಲವಿದೆ ಎಂದು ಸಚಿವ ಸಂತೋಷ್ ಲಾಡ್ ತಿಳಿಸಿದ್ದಾರೆ.

ಕುಶಾಲನಗರದಲ್ಲಿ ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಹಿಂದಿರುಗಿದ ಬಳಿಕ ಹುಬ್ಬಳ್ಳಿಗೆ ಪ್ರಯಾಣ ಬೆಳೆಸುವ ಮುನ್ನ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೇಕಿದ್ದರೆ ಪಾಕಿಸ್ತಾನ ಒಳಗೆ ನುಗ್ಗಿ ಹೊಡೆಯಿರಿ ನಮ್ಮ ಅಭ್ಯಂತರವೇನೂ ಇಲ್ಲ. 1971ರಲ್ಲಿ ಇಂದಿರಾ ಗಾಂಧಿ ಪಾಕಿಸ್ತಾನದವರನ್ನು ಮಂಡಿಯೂರಿಸಿದ್ದರು. ಈಗ ಲಕ್ಷಾಂತರ ಮಂದಿಯನ್ನು ಮಂಡಿಯೂರಿಸಬೇಕಾಗಿದೆ ಎಂದು ಹೇಳಿದರು.

ಪಾಕಿಸ್ತಾನದವರ ಮನೆಗೆ ನುಗ್ಗಿ ಹೊಡೆಯಬೇಕೆಂದು ಕೇಂದ್ರ ರಕ್ಷಣಾ ಸಚಿವ ಅಮಿತ್ ಶಾ ಅವರಿಗೂ ಹೇಳಿದ್ದೇನೆ. ಈಗಲೂ ನಾನು ಅದಕ್ಕೆ ಬದ್ಧನಾಗಿದ್ದೇನೆ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ ಎಂದ ಸಚಿವರು, ಪ್ರಧಾನ ಮಂತ್ರಿಗಳು 'ಗಾಯಬ್' ಟ್ವೀಟ್ ವಾಪಸ್ ಪಡೆದ ವಿಚಾರ ನನಗೆ ಗೊತ್ತಿಲ್ಲ ಎಂದರು.

ಕರ್ನಾಟಕದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಕೂಗುತ್ತಿರುವುದಕ್ಕೆ ಹಲವು ಕಾರಣಗಳಿರಬಹುದು. ಕರ್ನಾಟಕದಲ್ಲಿ ಮಾತ್ರವಲ್ಲದೇ ದೇಶದ ನಾನಾ ಭಾಗಗಳಲ್ಲೂ ಈ ಬಗೆಯ ಘಟನೆಗಳು ನಡೆದಿವೆ. ಅದು ಏಕೆ ನಡೆಯುತ್ತಿದೆ ಎಂಬುದಕ್ಕೆ ನಾನು ಹೇಗೆ ಪ್ರತಿಕ್ರಿಯೆ ನೀಡಲಿ ಎಂದ ಸಂತೋಷ್ ಲಾಡ್, ಹಾಗೆಂದ ಮಾತ್ರಕ್ಕೆ ಘೋಷಣೆ ಕೂಗಿದವರನ್ನು ಬೆಂಬಲಿಸುತ್ತೇವೆಂದು ಅರ್ಥವಲ್ಲ. ನನ್ನ ಮನೆಯವರೇ ಆ ರೀತಿ ಕೂಗಿದರೂ ಅವರ ವಿರುದ್ಧ ಕ್ರಮವಾಗಬೇಕು ಎಂದು ಹೇಳಿದರು.




ಅತ್ಯುತ್ತಮ ಶಿಕ್ಷಕ ರಾಜ್ಯ ಪ್ರಶಸ್ತಿ ಪುರಸ್ಕೃತ ಮಂಡಕಳ್ಳಿ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ನಿಂಗೇಗೌಡ ಹಾಗೂ ಅವರ ಪತ್ನಿ ಶ್ರೀಮತಿ ಪ್ರೇಮ ನಿಂಗೇಗೌಡ ಅವರನ್ನು ಮೈಸೂರಿನ ಜೆ.ಪಿ.ನಗರದ ಅವರ ನಿವಾಸದಲ್ಲಿ ಅಭಿನಂದಿಸಲಾಯಿತು. ಈ ವೇಳೆ ಮಾಜಿ ಮೇಯರ್ ಬಿ.ಭೈರಪ್ಪ, ಒಕ್ಕಲಿಗ ಸಂಘದ ನಿರ್ದೇಶಕ ಎಂ.ಬಿ.ಮಂಚೇಗೌಡ, ಮಾಜಿ ಕಾರ್ಪೋರೇಟರ್ ಪ್ರಶಾಂತ್ ಗೌಡ, ಜ್ಞಾನ ಬುತ್ತಿ ಸಂಸ್ಥೆಯ ಜೈನಹಳ್ಳಿ ಸತ್ಯನಾರಾಯಣಗೌಡ, ಚಲನಚಿತ್ರ ನಿರ್ದೇಶಕ ಸಿದ್ದೇಗೌಡ ಜಿಬಿಎಸ್ ಉಪಸ್ಥಿತರಿದ್ದರು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**01.05.2025 ಗುರುವಾರ, ಮಳೆ ನಕ್ಷತ್ರ: ಭರಣಿ 27.04.2025 ರಿಂದ 10.05.2025**
**ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,**
**ತಿಥಿ: ಚೌತಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ**

■ **ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನಮ್ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಶೃಂಗೇರಿ, ಅಭಿನವ ಶಂಕರಾಲಯ:** ಶ್ರೀ ಶಂಕರ ಜಯಂತ್ಯುತ್ಸವ–2025, ಬೆಳಗ್ಗೆ 7 ಗಂಟೆಯಿಂದ ಶ್ರೀ ಶಂಕರ ಸನ್ನಿಧಿಯಲ್ಲಿ ಮಹಾನ್ಯಾಸ ಪೂರ್ವಕ ಏಕದಶವಾರ, ರುದ್ರಾಭಿಷೇಕ, ರುದ್ರಕ್ರರೂರ್ಚನೆ, ವೇದ ಪಾರಾಯಣಗಳು, ಭಾಷ್ಯಾ ಪಾರಾಯಣಗಳು, ಶ್ರೀ ಶಂಕರ ವಿಜಯ ಪಾರಾಯಣ, ವಿಷ್ಣು ಸಹಸ್ರನಾಮ ಪಾರಾಯಣ ಮತ್ತು ನವಗ್ರಹ ಜಪ, ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ, ಸಂಜೆ 6ರಿಂದ ಉಪನ್ಯಾಸ ಮಾಲಿಕೆ, ಬೆಂಗಳೂರಿನ ಜಿ.ಬಿ. ಹರೀಶ್ ಅವರಿಂದ ಶಂಕರರು ಮತ್ತು ಆಧುನಿಕ ವಾದಜಾಲ ಕುರಿತು ಪ್ರವಚನ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಫೋರ್ಟ್ ಮೊಹಲ್ಲಾ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಆರ್ಟಿಸ್ಟ್ರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್.ರಸ್ತೆ, ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ.

■ **ಸೋಷಿಯಲ್ ಡೆಮಾಕ್ರೆಟಿಕ್ ಟ್ರೇಡ್ ಯೂನಿಯನ್:** ಅಸಂಘಟಿತ ಕಾರ್ಮಿಕರ ಸ್ನೇಹ ಸಮ್ಮಿಲನ, ಸ್ಮಾರ್ಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸುವ ಅಭಿಯಾನ, ಉಪಸ್ಥಿತರು: ಜಿಲ್ಲಾಧ್ಯಕ್ಷ ಅಲ್ತಾಫ್ ಖಾನ್, ಅಮೀನ್ ಸೇಠ್, ಮುಜ್ಜುಬಾಯಿ, ವಸೀಮ್ ಬಾಯಿ, ಸ್ಥಳ: ಹೋಟೆಲ್ ನಳಪಾಡ್ ಹೋಟೆಲ್, ಹೈವೇ ವೃತ್ತ, ಬೆಳಗ್ಗೆ 10.30ಕ್ಕೆ.

■ **ಸಂಗೀತ ನಾಟಕ ಅಕಾಡೆಮಿ, ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ :** ವಿಶ್ವ ನೃತ್ಯ ದಿನಾಚರಣೆ ಅಂಗವಾಗಿ ಎಸ್.ಎನ್.ಎ. ಫೆಲೋಗಳು ಮತ್ತು ಪ್ರಶಸ್ತಿ ಪುರಸ್ಕೃತರ ಸಂಗೀತ ಮತ್ತು ನೃತ್ಯೋತ್ಸವ, ಬೆಳಗ್ಗೆ 11ಕ್ಕೆ ಬೆಂಗಳೂರಿನ ಶ್ರೀಮತಿ ಪುಸ್ತಕಂರಮಾ ಮತ್ತು ಮಣಿಪುರ ಸಪಂ ಕುಲ್ಲಾಬಿ ಸಿಂಗ್ ಅವರಿಂದ ನೃತ್ಯ ಕಾರ್ಯಕ್ರಮ, ಸಂಜೆ 4 ರಿಂದ ಸುಬ್ರಹ್ಮಣಿಯಂ ಶೇಖರ್ ಅವರಿಂದ ಸೃಜನಾತ್ಮಕ ಮತ್ತು ಪ್ರಾಯೋಗಿಕ ಸಂಗೀತ, ಶ್ರೀಮತಿ ಊರ್ಮಿಳಾ ಸತ್ಯನಾರಾಯಣನ್ ಅವರಿಂದ ಭರತನಾಟ್ಯ ನೃತ್ಯ, ಪ್ರಕಾಶ್ ದುಂಪೆಟಿ ಅವರಿಂದ ಪೆರಿನಿಯಾಟ್ಟಂ ಸಂಗೀತ, ನೃತ್ಯ ನಾಟಕ ಪರಂಪರೆ, ಜಗದೀಶ್ ಸುಂದರಲಾಲ್ ಗಂಗನಿ–ಕಥಕ್ ನೃತ್ಯ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ.

■ **ಕರ್ನಾಟಕ ಸರ್ಕಾರಿ ದಿನಗೂಲಿ ಮತ್ತು ವಿವಿಧ ಕಾರ್ಮಿಕ ಸಂಘಗಳ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ :** ಕಾರ್ಮಿಕ ದಿನಾಚರಣೆಯ ಅಂಗವಾಗಿ ಕಾರ್ಮಿಕರ ಸಮಾವೇಶ, ಅಧ್ಯಕ್ಷತೆ : ಅಪರ ಕಾರ್ಮಿಕ ಆಯುಕ್ತ ಡಾ. ಎಸ್.ಬಿ.ರವಿಕುಮಾರ್, ಉದ್ಘಾಟನೆ : ಹಿರಿಯ ಸಿವಿಲ್ ನ್ಯಾಯಾಧೀಶ ಸಿ.ಬಿ. ದಿನೇಶ್, ಮುಖ್ಯ ಅತಿಥಿಗಳು : ಉಪ ಕಾರ್ಮಿಕ ಆಯುಕ್ತ ಡಿ.ಜಿ. ನಾಗೇಶ್, ಮೈಸೂರು ಜಿಲ್ಲಾ ಸಹಕಾರಿ ಒಕ್ಕೂಟ ಅಧ್ಯಕ್ಷ ರಾಜು, ಸಹಾಯಕ ಕಾರ್ಮಿಕ ಆಯುಕ್ತರಾದ ಶ್ರೀಮತಿ ವೀಣಾ, ಚೇತನ್ ಕುಮಾರ್, ಶ್ರೀಮತಿ ಮಂಜುಳಾದೇವಿ, ಸ್ಥಳ: ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ :** ಕಾರ್ಮಿಕರ ದಿನಾಚರಣೆ ಹಾಗೂ ಉಚಿತ ಆರೋಗ್ಯ ತಪಾಸಣೆ, ಔಷಧಿ ವಿತರಣಾ ಕಾರ್ಯಕ್ರಮ, ಉದ್ಘಾಟನೆ: ಸುಯೋಗ್ ಆಸ್ಪತ್ರೆ ಮುಖ್ಯಸ್ಥ ಡಾ.ಎಸ್.ಪಿ. ಯೋಗಣ್ಣ, ಅಧ್ಯಕ್ಷತೆ: ವೇದಿಕೆ ಗೌರವಾಧ್ಯಕ್ಷ ಹೆಚ್.ಕೆ.ರಾಮು, ಪ್ರಾಸ್ತಾವಿಕ ನುಡಿ : ವೇದಿಕೆ ರಾಜ್ಯಾಧ್ಯಕ್ಷರಾದ ಹೆಚ್.ಎಲ್.ಯಮುನಾ, ವಿಶೇಷ ಆಹ್ವಾನಿತರು: ಡಾ.ಪಿ.ಶಿವರಾಜು, ಪಾಲಿಕೆ ಆಯುಕ್ತ ತನ್ವೀರ್ ಆಸಿಫ್, ಹೆಚ್ಚುವರಿ ಆಯುಕ್ತರಾದ ಶ್ರೀಮತಿ ಕುಸುಮ ಕುಮಾರಿ, ಶ್ರೀಮತಿ ಎಂ.ಎಸ್.ಪ್ರತಿಭ, ಡಾ.ಕಾಂತರಾಜು, ಸ್ಥಳ: ನಗರ ವಸತಿರಹಿತರ ಆಶ್ರಯ ಕೇಂದ್ರ, ವಿದ್ಯಾವರ್ಧಕ ಕಾಲೇಜು ಎದುರು, ಬೆಳಗ್ಗೆ 11.30ಕ್ಕೆ.

■ **ಶ್ರೀ ಶಂಕರ ಜಯಂತಿ ಸಭಾ:** ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವ ಹಾಗೂ 46ನೇ ವಾರ್ಷಿಕೋತ್ಸವ, ಬೆಳಗ್ಗೆ 9.30 ರಿಂದ ಶ್ರೀಮದ್ ಭಗವತ್ಪಾದರಿಗೆ ರುದ್ರಾಭಿಷೇಕ, ಷೋಡಶೋಪಚಾರ ಪೂಜೆ, ಸಹಸ್ರ ನಾಮಾರ್ಚನೆ, 11.30 ರಿಂದ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5 ರಿಂದ ವಿದುಷಿ ಡಾ. ಶ್ರೀಮತಿ ಕೃಪಾ ಫಡ್ಕೆ ಅವರ ಶಿಷ್ಯರಾದ ಪೂಜಾ ಸುಗಮ್ ಹಾಗೂ ತಂಡದವರಿಂದ ಭರತನಾಟ್ಯ, ಸ್ಥಳ: ಶ್ರೀ ಶಂಕರ ಜಯಂತಿ ಸಭಾ ಸಮುದಾಯ ಭವನ, ತೆಂಗಿನ ತೋಪು, ಸರಸ್ವತಿಪುರಂ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ.ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಆರ್.ಎನ್.ಶ್ರೀಲತಾ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ: ಜಿ.ಶಾಂತಕುಮಾರ್ **ಮಧ್ಯಾಹ್ನ:** 12.35–ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಉರ್ದು ಕಾರ್ಯಕ್ರಮ, 4.00 ಜನಪದ ಸಂಗೀತ, 4.30 ಸಂಧ್ಯಾರಾಗ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ, ಚಿಯಾ ಹಾಗೂ ಬೇಳೆ ಕಾಳುಗಳ ಮಾರಾಟ ಈ ಕುರಿತು ಕೊಳ್ಳೇಗಾಲ ತಾಲೂಕು ತಿಲಕವಾಡಿ ಗ್ರಾಮದ ಶಂಭುಲಿಂಗೇಶ್ವರ ರೈತ ಉತ್ಪಾದಕ ಕಂಪನಿ ಅಧ್ಯಕ್ಷರಾದ ಪಿ.ಶಿವಣ್ಣ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಆರ್ಮುಗಂ ಅವರೊಂದಿಗೆ ಸಂವಾದ. ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಭರತ್‌ಸುಂದರ್–ಹಾಡುಗಾರಿಕೆ, 10.00 ರಾಷ್ಟ್ರೀಯ ಪ್ರಾದೇಶಿಕ ಲಘು ಹಾಗೂ ಜನಪದ ಸಂಗೀತ ಕಾರ್ಯಕ್ರಮ, ಮೇನಕಾ ಮಿಶ್ರ–ಲಘು ಗೀತ್ ಭಜನ್, ಸುಮನ್ ಭಟ್ಟಿ–ಜನಪದ– ಪಂಜಾಬಿ

## ಮೈಸೂರು ಹಾಗೂ ಸುತ್ತಮುತ್ತ ನಾಳೆ...



### ನಾಳಿನ ಪಂಚಾಂಗ

**02.05.2025 ಶುಕ್ರವಾರ, ಮಳೆ ನಕ್ಷತ್ರ: ಭರಣಿ 27.04.2025 ರಿಂದ 10.05.2025**
**ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,**
**ತಿಥಿ: ಪಂಚಮಿ, ನಕ್ಷತ್ರ: ಆರ್ದ್ರಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ**

■ **ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನಮ್ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಶೃಂಗೇರಿ, ಅಭಿನವ ಶಂಕರಾಲಯ:** ಶ್ರೀ ಶಂಕರ ಜಯಂತ್ಯುತ್ಸವ–2025, ಬೆಳಗ್ಗೆ 8 ಗಂಟೆಯಿಂದ ಶ್ರೀ ಶಂಕರ ಭಗವತ್ಪಾದಾಚಾರ್ಯರಿಗೆ ಮಹಾನ್ಯಾಸಪೂರ್ವಕ, ಶತರುದ್ರಾಭಿಷೇಕ, ಅಭಿಷೇಕ, ವಿಶೇಷ ಪೂಜೆ, ಅಲಂಕಾರ, ಮಧ್ಯಾಹ್ನ 12 ರಿಂದ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30 ರಿಂದ ನಾದಸ್ವರ ಮತ್ತು ವೇದಘೋಷಗಳೊಂದಿಗೆ ರಥೋತ್ಸವ, ಧರ್ಮೋಪನಯನ, ರಾತ್ರಿ 9ಕ್ಕೆ ಮಹಾಮಂಗಳಾರತಿ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಫೋರ್ಟ್ ಮೊಹಲ್ಲಾ.

■ **ಆದರ್ಶ ಸೇವಾ ಸಂಘ :** ಆಚಾರ್ಯತ್ರಯ ಜಯಂತಿ ಹಾಗೂ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಋಗ್ವೇದ ಪುರಸ್ಸರವಾಗಿ ಸಾಮೂಹಿಕ ಬ್ರಹ್ಮೋಪದೇಶ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ಧರ್ಮಶಾಲಾ, ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ, ಬೆಳಗ್ಗೆ 9 ರಿಂದ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಆರ್ಟಿಸ್ಟ್ರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್. ರಸ್ತೆ, ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ.


■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಶ್ರೀ ಶಂಕರ ಜಯಂತಿ, ಬೆಳಗ್ಗೆ 8ರಿಂದ ನೂತನ ಪಂಚಲೋಹ ಮೂರ್ತಿಯೊಂದಿಗೆ ಶ್ರೀ ಶಂಕರ ಭಗವತ್ಪಾದರಿಗೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ಆವರಣ, ಶ್ರೀರಾಮಪೇಟೆ, ವಿನೋಬಾ ರಸ್ತೆ

■ **ಸಂಗೀತ ನಾಟಕ ಅಕಾಡೆಮಿ, ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ:** ವಿಶ್ವ ನೃತ್ಯ ದಿನಾಚರಣೆ ಅಂಗವಾಗಿ ಎಸ್.ಎನ್.ಎ. ಫೆಲೋಗಳು ಮತ್ತು ಪ್ರಶಸ್ತಿ ಪುರಸ್ಕೃತರ ಸಂಗೀತ ಮತ್ತು ನೃತ್ಯೋತ್ಸವ, ಬೆಳಗ್ಗೆ 11ರಿಂದ ಸೀತಾರಾಮ್ ಸಿಂಗ್, ಪಾಟ್ನ ಅವರಿಂದ ಸುಗಮ ಸಂಗೀತ, ಎಲ್.ವಿ.ಗಂಗಾಧರ ಶಾಸ್ತ್ರಿ ಅವರಿಂದ ಸಂಗೀತ ಪರಂಪರೆ, ಭಬೇನ್ ಬೋರ್ಬಯನ್ ಅವರಿಂದ ಸತ್ತರಿಯ ನೃತ್ಯ, ಸಂಜೆ 4ರಿಂದ ಶ್ರೀಮತಿ ಮಂದ ಸುಧಾರಾಣಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿನೋದ್‌ಕುಮಾರ್ ದ್ವಿವೇದಿ, ಕಾನ್ಪುರ್ ಅವರಿಂದ ಹಿಂದೂಸ್ಥಾನಿ ಸಂಗೀತ ಗಾಯನ–ದ್ರುಪದ್, ಶ್ರೀಮತಿ ಲತಾಸನದೇವಿ ಅವರಿಂದ ಮಣಿಪುರಿ ನೃತ್ಯ, ಸ್ನೇಹಪ್ರವ ಸಮಂತ್‌ರೇ ಅವರಿಂದ ಒಡಿಸ್ಸಿ ನೃತ್ಯ, ಮಾರ್ಗಿ ವಿಜಯಕುಮಾರ್ ಅವರಿಂದ ಕಥಕಳಿ ನೃತ್ಯ, ಶ್ರೀಮತಿ ನಳಿನಿ ಮತ್ತು ಕಮಲಿನಿ ಅವರಿಂದ ಕಥಕ್ ನೃತ್ಯ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ.

■ **ಶ್ರೀ ಶಂಕರ ಜಯಂತಿ ಸಭಾ:** ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವ, 46ನೇ ವಾರ್ಷಿಕೋತ್ಸವ, ಬೆಳಗ್ಗೆ 9.30ರಿಂದ ಶ್ರೀಮದ್ ಭಗವತ್ಪಾದರಿಗೆ ರುದ್ರಾಭಿಷೇಕ, ಷೋಡಶೋಪಚಾರ ಪೂಜೆ, ಸಹಸ್ರ ನಾಮಾರ್ಚನೆ, 11.30ರಿಂದ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5ರಿಂದ ವಿದುಷಿ ತೇಜಶ್ರೀ ಮತ್ತು ಸಂಗಡಿಗರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ಶಂಕರ ಜಯಂತಿ ಸಭಾ ಸಮುದಾಯ ಭವನ, ತೆಂಗಿನ ತೋಪು, ಸರಸ್ವತಿಪುರಂ.

■ **ಮೈಸೂರು ವಕೀಲರ ಸಂಘ :** ಸಂಪೂರ್ಣ ರಾಮಾಯಣ ಪೌರಾಣಿಕ ನಾಟಕ ಪ್ರದರ್ಶನ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ: ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಸ್ಥಳ: ಕಲಾಮಂದಿರ, ಬೆಳಗ್ಗೆ 10ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ–ಶೋಧನ–ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ: ಡಾ.ಎಂ.ಎನ್.ಚಿಕ್ಕಮಾದು, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎಸ್.ಸುನಿಲ್–ನಾಗಸ್ವರ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸೈಕಲ್ ಸವಾರಿ ಮಾತಿನ ಲಹರಿ, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್ **ಮಧ್ಯಾಹ್ನ:** 12.35 ದೇವರನಾಮ, 12.45 ಕಾದಂಬರಿ ವಿಹಾರ–ಎಂ.ಆರ್.ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್.ಎಸ್.ಎಸ್., 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಇಮಾನಿ ಶಂಕರಶಾಸ್ತ್ರಿ–ವೀಣಾ ವಾದನ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ: ವಿದೇಶಿ ಕೃಷಿ ಪದ್ಧತಿಗಳ ಪರಿಚಯ. ಈ ಕುರಿತು ಮೈಸೂರಿನ ಸಿ.ಎಸ್.ಮಹೇಶ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಹರಿಹರನ್. ಎಂ.ಬಿ ಮತ್ತು ಆರ್. ಅಶೋಕ್–ಯುಗಳ ಹಾಡುಗಾರಿಕೆ, 10.00–ಜನಪದ ಸಂಗೀತ, 10.30–ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

# ಅಕ್ಷಯ ತೃತೀಯ: ಮೈಸೂರಲ್ಲಿ ಚಿನ್ನಾಭರಣ ಖರೀದಿ ಬಲು ಜೋರು



ಎ. ಶಂಕರಶೆಟ್ಟಿ ಅಂಡ್ ಸನ್ಸ್



ತೊಳಸಿ ಜುವೆಲರ್ಸ್



ಜೊಯಲುಕ್ಕಾಸ್



ಜೋಸ್ ಅಲುಕ್ಕಾಸ್

ಮೈಸೂರು, ಏ.30(ಆರ್‌ಕೆ)– ಮೈಸೂರಲ್ಲಿ ಅಕ್ಷಯ ತೃತೀಯ ಹಬ್ಬವನ್ನು ಇಂದು ಸಡಗರದಿಂದ ಆಚರಿಸಲಾಯಿತು. ಅದರಲ್ಲೂ ಆಭರಣಪ್ರಿಯರಂತೂ ಸಂಭ್ರಮಪಟ್ಟರು.

ಮೈಸೂರು ನಗರದಾದ್ಯಂತ ಆಭರಣ ಅಂಗಡಿಗಳಲ್ಲಿ ಚಿನ್ನ, ವಜ್ರ ಹಾಗೂ ಬೆಳ್ಳಿ ಖರೀದಿ ಬಲು ಜೋರಾಗಿದ್ದು, ಆಕರ್ಷಕ ರಿಯಾಯಿತಿ ದರದಲ್ಲಿ ಆಭರಣಗಳು ಭರ್ಜರಿಯಾಗಿ ಮಾರಾಟವಾದವು. ಬಸವ ಜಯಂತಿಯಾದ್ದರಿಂದ ಮದುವೆ, ಗೃಹ ಪ್ರವೇಶಗಳಂತಹ ಶುಭ ಸಮಾರಂಭಗಳು ಹೆಚ್ಚಾಗಿ ನಿಗದಿಯಾಗಿದ್ದವು. ಆದ ಕಾರಣ ಬೆಳಗ್ಗೆ ಚಿನ್ನಾಭರಣ ಖರೀದಿ ಸಾಧಾರಣವಾಗಿತ್ತಾದರೂ, ಮಧ್ಯಾಹ್ನದ ನಂತರ ರಾತ್ರಿವರೆಗೆ ಅಂಗಡಿಗಳಲ್ಲಿ ನೂಕು ನುಗ್ಗಲು ಉಂಟಾಗಿತ್ತು.

ಅಕ್ಷಯ ತೃತೀಯ ದಿನದಂದು ಚಿನ್ನ, ಬೆಳ್ಳಿ ಹಾಗೂ ವಜ್ರಾಭರಣ ಖರೀದಿಸಿ ಮನೆಗೆ ಕೊಂಡೊಯ್ದರೆ ಮನೆಗೆ ಶ್ರೇಯಸ್ಸು ಮತ್ತು ಸಂಪತ್ತು ಪ್ರಾಪ್ತವಾಗುತ್ತದೆ ಎಂಬ ನಂಬಿಕೆ ಇರುವುದರಿಂದ ಇಂದು ಜನರು ಆಭರಣ ಖರೀದಿಸಲು ಮುಂದಾದರು.

ಆಭರಣ ಶೋ ರೂಂಗಳು ಇಂದು ಬೆಳಗ್ಗೆ 9 ಗಂಟೆಗೆ ತೆರೆದು ರಾತ್ರಿ 9 ಗಂಟೆವರೆಗೂ ವ್ಯಾಪಾರ ನಡೆಸಿದ ಕಾರಣ, ಖರೀದಿ ಜೋರಾಗಿತ್ತು. ಮೈಸೂರಲ್ಲಿ ಇಂದು 22 ಕ್ಯಾರೆಟ್ ಚಿನ್ನದ ಬೆಲೆ ಗ್ರಾಂಗೆ 8,980 ರೂ. ಇತ್ತು. ಕಳೆದ ವರ್ಷ ಇದೇ ಅಕ್ಷಯ ತೃತೀಯ ದಿನದಂದು ಚಿನ್ನದ ಬೆಲೆ ಗ್ರಾಂಗೆ 6,700 ರೂ. ಇದ್ದುದನ್ನು ಇಲ್ಲಿ ಸ್ಮರಿಸಬಹುದು. ಕಳೆದ ವರ್ಷಕ್ಕೆ ಹೋಲಿಸಿದರೆ, ಈ ವರ್ಷ ಗ್ರಾಂ ಚಿನ್ನಕ್ಕೆ 2,280 ರೂ. ಏರಿಕೆಯಾಗಿದೆ.

ಬಿಎನ್ ರಸ್ತೆಯ ಜೋಸ್ ಅಲುಕ್ಕಾಸ್, ಜೋಯಲುಕ್ಕಾಸ್, ವಿವಿ ಮೊಹಲ್ಲಾ, ಅಶೋಕ ರಸ್ತೆ ಮತ್ತು ನಂಜನಗೂಡಿನ ತೊಳಸಿ ಜುವೆಲ್ಸ್, ಕೆ.ಆರ್.ಸರ್ಕಲ್‌ನ ಎ. ಶಂಕರಶೆಟ್ಟಿ ಅಂಡ್ ಸನ್ಸ್, ನೆಕ್ಸ್ ಮಾಲ್‌ನ ಕ್ಯಾರಟ್‌ಲೇನ್, ಡಿ.ದೇವರಾಜ ಅರಸು ರಸ್ತೆಯ ತನಿಷ್ಕಾ, ಸೆಂಟ್ ಫಿಲೋಮಿನಾಸ್ ಚರ್ಚ್ ಬಳಿಯ ಸುಲ್ತಾನ್ ಡೈಮಂಡ್ ಅಂಡ್ ಗೋಲ್ಡ್, ವಿನೋಬಾ ರಸ್ತೆಯ ಪ್ರಕಾಶ್ ಜುವೆಲರ್ಸ್, ಬಿಎನ್ ರಸ್ತೆಯ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್, ಲಷ್ಕರ್ ಮೊಹಲ್ಲಾದ ಕಲ್ಯಾಣ್ ಜುವೆಲರ್ಸ್, ಶ್ರೀ ಕುಮಾರನ್ ಜುವೆಲರ್ಸ್, ಅಶೋಕ ರಸ್ತೆಯ ಲಲಿತ ಜುವೆಲರಿ ಮಾರ್ಟ್ ಸೇರಿದಂತೆ ಮೈಸೂರು ನಗರದಾದ್ಯಂತ ಎಲ್ಲಾ ಅಂಗಡಿಗಳಲ್ಲಿ ಇಂದು ಆಭರಣದ ಭರ್ಜರಿ ವ್ಯಾಪಾರ ನಡೆಯಿತು.

ಬಹುತೇಕ ಅಂಗಡಿಗಳಲ್ಲಿ ತರಾವರಿ ರಿಯಾಯಿತಿ ಇದ್ದ ಕಾರಣ ಚಿನ್ನ, ಬೆಳ್ಳಿ ಹಾಗೂ ವಜ್ರ ಖರೀದಿಸಲು ಗ್ರಾಹಕರು ಮುಗಿ ಬೀಳುತ್ತಿದ್ದುದು ಕಂಡುಬಂದಿತು. ಈ ಹಿನ್ನೆಲೆಯಲ್ಲಿ ಗ್ರಾಹಕರು, ಸಾರ್ವಜನಿಕರಿಗೆ ರಕ್ಷಣೆ ನೀಡುವ ಸಲುವಾಗಿ ಆಯಾ ಠಾಣಾ ವ್ಯಾಪ್ತಿಯಲ್ಲಿ ಪಿಸಿಆರ್, ಗರುಡ ವಾಹನಗಳು ಗಸ್ತು ತಿರುಗಿ ಸೂಕ್ತ ಭದ್ರತೆ ವಹಿಸಲಾಗಿತ್ತು.



ತನಿಷ್ಕಾ



ಕಲ್ಯಾಣ್ ಜುವೆಲರ್ಸ್



ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್



ಶ್ರೀ ಕುಮಾರನ್ ಜುವೆಲರ್ಸ್



ಕ್ಯಾರೆಟ್‌ಲೇನ್



ಸುಲ್ತಾನ್ ಗೋಲ್ಡ್ ಅಂಡ್ ಡೈಮಂಡ್ಸ್



ಭೀಮಾ ಜುವೆಲರ್ಸ್



ಪ್ರಕಾಶ್ ಜುವೆಲರ್ಸ್



ಲಲಿತ ಜುವೆಲರಿ ಮಾರ್ಟ್

# ಮನಸೂರೆಗೊಂಡ ಕೂಚಿಪುಡಿ ನೃತ್ಯ ಸೊಬಗು

## ಹರಿದ ಗಾನ–ಸಂಗೀತದ ಹೊನಲು

ಮೈಸೂರು, ಏ.30(ಪಿಎಂ)– ಕೂಚಿಪುಡಿ ನೃತ್ಯ ಸೇರಿದಂತೆ ವಿವಿಧ ಪ್ರಕಾರದ ನೃತ್ಯ ಪ್ರದರ್ಶನ ಹಾಗೂ ಗಾಯನ–ಸಂಗೀತವು ಅದ್ಭುತ ಸಾಂಸ್ಕೃತಿಕ ಲೋಕ ಅನಾವರಣಗೊಳಿಸಿ ಸಭಿಕರನ್ನು ಸಂಭ್ರಮದಲ್ಲಿ ತೇಲುವಂತೆ ಮಾಡಿತು.

ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದ ಸಭಾಂಗಣದಲ್ಲಿ ಇಂತಹ ಮನಮೋಹಕ ಸನ್ನಿವೇಶ ಸಭಿಕರಲ್ಲಿ ರೋಮಾಂಚನ ಉಂಟು ಮಾಡಿತು. ಇಲ್ಲಿ ಮೇ 3ರವರೆಗೆ ಐದು ದಿನಗಳ ಕಾಲ ವಿಶ್ವ ನೃತ್ಯ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿರುವ ಸಂಗೀತ ಮತ್ತು ನೃತ್ಯೋತ್ಸವದಲ್ಲಿ ಎರಡನೇ ದಿನವಾದ ಬುಧವಾರ ಹೀಗೆ ಕಲಾಲೋಕ ಅನಾವರಣವಾಯಿತು.

ನವದೆಹಲಿಯ ಸಂಗೀತ ನಾಟಕ ಅಕಾಡೆಮಿ ಹಾಗೂ ಮೈಸೂರಿನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಸದರಿ ಅಕಾಡೆಮಿಯ ಫೆಲೋಗಳು ಮತ್ತು ಪ್ರಶಸ್ತಿ ಪುರಸ್ಕೃತರು ಪ್ರಸ್ತುತಪಡಿಸುವ ಸಂಗೀತ ಮತ್ತು ನೃತ್ಯ ಕಾರ್ಯಕ್ರಮ ಇದಾಗಿದೆ.

ಆಂಧ್ರಪ್ರದೇಶದ ಹೈದರಾಬಾದ್‌ನ ಭಾಗವತುಲ ಸೇತುರಾಮ್ ನೇತೃತ್ವದ ತಂಡ ಸಾದರಪಡಿಸಿದ ಕೂಚಿಪುಡಿ ನೃತ್ಯ ಸಹ ಸಭಿಕರ ಮನಸೂರೆಗೊಂಡಿತು. ಅಂದಿನ ಮೈಸೂರು ಆಸ್ಥಾನದ ಲಿಂಗರಾಜ್ ಅರಸ್ ರಚಿರುವ 'ಶೃಂಗಾರ ಲಹರಿ'ಗೆ ಈ ತಂಡ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿತು. ನೀಲಾಂಬರಿ ರಾಗ ಹಾಗೂ ಆದಿ ತಾಳ ಹೊಂದಿರುವ ಶೃಂಗಾರ ಲಹರಿಗೆ ಮನಮೋಹಕವಾಗಿ ಕೂಚಿಪುಡಿ ಪ್ರಕಾರದಲ್ಲಿ ನೃತ್ಯ ಸಾದರಪಡಿಸಿ ಸಭಿಕರ ಮೆಚ್ಚುಗೆಗೆ ಪಾತ್ರರಾದರು.



ಹೈದರಾಬಾದ್‌ನ ಭಾಗವತುಲ ಸೇತುರಾಮ್ ತಂಡದ ಕಲಾವಿದೆಯರ ನೃತ್ಯ ಪ್ರದರ್ಶನ.

ಅಲ್ಲದೇ ಇದೇ ತಂಡವು 'ಶಿವಲೀಲಾ' ಶೀರ್ಷಿಕೆಯಡಿ ಮಾರ್ಕಂಡೇಯ ಚರಿತ್ರಾ ಪ್ರಸಂಗವನ್ನು ನೃತ್ಯದ ಮೂಲಕ ಅನಾವರಣಗೊಳಿಸಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸುವಲ್ಲಿ ಯಶಸ್ವಿಯಾಯಿತು. ಈ ಪ್ರಸಂಗದಲ್ಲಿ ಸೇತುರಾಮ್ ಅವರು ಯಮನ ಪಾತ್ರಕ್ಕೆ ಅದ್ಭುತ ಅಭಿನಯ ನೀಡಿದರು.

ಇದಕ್ಕೂ ಮುನ್ನ ಬೆಳಗಿನ ಅವಧಿಯಲ್ಲಿಂದ ನಡೆದ ಕಾರ್ಯಕ್ರಮಗಳು ಸಹ ಸೊಗಸಾಗಿ ಮೂಡಿಬಂದವು. ವಿಶಿಷ್ಟ ಒಡಿಸ್ಸಿ ಗಾಯಕಿ ಡಾ.ಸಂಗೀತಾ ಗೋಸೈನ್, ತಮ್ಮ ಗಾಯನದ ಮೂಲಕ ಸಭಿಕರನ್ನು ಮಂತ್ರಮುಗ್ಧರಾಗಿಸಿದರು. ಬಳಿಕ ಪಶ್ಚಿಮ ಬಂಗಾಳದ ಸಾಧು ಚರಣ್ ಮಹತೋ ಮತ್ತು ಅವರ ತಂಡವು ಚೌ ನೃತ್ಯ ಪ್ರದರ್ಶನ ನೀಡಿತು. ಪರಶುರಾಮನ ಜೀವನ ಕುರಿತ ಪೌರಾಣಿಕ ಪ್ರಸಂಗವನ್ನು ಈ ತಂಡವು ಪ್ರದರ್ಶಿಸಿತು. ಸಂಜೆ ಅವಧಿಯಲ್ಲಿ ಉಸ್ಮಾನ್ ಭಾಯ್ ಹುಸೇನ್ ಮಿರ್ ಅವರ ಗಾಯನ ಇಂಪಿನ ಕಂಪನ ಉಂಟು ಮಾಡಿತು. ಇದಲ್ಲದೆ, ಮೋಹಿನಿ ಅಟ್ಟಂ, ಕಥಕ್ಕಳಿ ನೃತ್ಯ ಪ್ರೇಕ್ಷಕರ ಮನಸೂರೆಗೊಂಡಿತು.

# ಮೈಸೂರಲ್ಲಿ ಮುಂದುವರೆದ ಮಳೆ ಅಬ್ಬರ; ಬಿಸಿಲ ಬೇಗೆಗೆ ಕಂಗೆಟ್ಟಿದ್ದ ಜನರಲ್ಲಿ ಸಂಭ್ರಮ

**● ರಾತ್ರಿ ಸುಮಾರು 10ರ ವೇಳೆಗೆ ಆರಂಭವಾದ ಮಳೆ ● ಜಲಾವೃತಗೊಂಡ ವೃತ್ತ–ರಸ್ತೆಗಳು ● ತಗ್ಗುಪ್ರದೇಶದತ್ತ ನುಗ್ಗಿದ ಮಳೆ ನೀರು ● ಅಲ್ಲಲ್ಲಿ ಉಕ್ಕಿ ಹರಿದ ಒಳಚರಂಡಿ**

ಮೈಸೂರು, ಏ.30 (ಪಿಎಂ)– ಸಾಂಸ್ಕೃತಿಕ ನಗರಿ ಮೈಸೂರಿಗೆ ಮಳೆ ತಂಪೆರೆದಿದ್ದು, ಮಂಗಳವಾರ ರಾತ್ರಿ ಸುರಿದಂತೆಯೇ ಬುಧವಾರ ರಾತ್ರಿಯೂ ನಗರದಲ್ಲಿ ಜೋರು ಮಳೆಯಾಗಿದೆ. ಗುಡುಗು–ಮಿಂಚು, ಸಿಡಿಲು ಹಾಗೂ ಗಾಳಿಯೊಂದಿಗೆ ಆರಂಭವಾದ ಮಳೆಯು ಜೋರಾಗಿ ಸುರಿದ ಹಿನ್ನೆಲೆಯಲ್ಲಿ ನಗರದ ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯಿತು.



ಮೈಸೂರಿನ ವಿವೇಕಾನಂದನಗರದ 4ನೇ ಮುಖ್ಯರಸ್ತೆಯಲ್ಲಿ ಮರವೊಂದರ ಬೃಹತ್ ರಂಬೆ ನೆಲಕ್ಕುರುಳಿರುವುದು.

ಬಿಸಿಲು ಬೇಗೆಯಿಂದ ಕಂಗೆಟ್ಟಿದ್ದ ನಗರದ ಜನತೆಯಲ್ಲಿ ಮಳೆ ಖುಷಿ ಮೂಡಿಸಿದೆ. ಆದರೆ ಮಳೆ ವೇಳೆ ನಗರದಲ್ಲಿ ಸಂಚರಿಸುತ್ತಿದ್ದ ಜನ ಮಾತ್ರ ಹೈರಾಣಾದರು. ಬುಧವಾರ ರಾತ್ರಿ ಸುಮಾರು 10 ಗಂಟೆಗೆ ಆರಂಭವಾದ ಮಳೆಯು, ಜೋರಾಗಿಯೇ ಆರ್ಭಟಿಸಿತು. ಪರಿಣಾಮ ನಗರದ ಹೃದಯ ಭಾಗದ ಕೆಆರ್ ವೃತ್ತ ಸೇರಿದಂತೆ ಪ್ರಮುಖ ವೃತ್ತ ಹಾಗೂ ರಸ್ತೆಗಳು ಜಲಾವೃತಗೊಂಡಿದ್ದವು.

ಒಂದೆಡೆ ಗಾಳಿ, ಮತ್ತೊಂದೆಡೆ ರಸ್ತೆ ಕಾಣದಂತೆ ಆವರಿಸಿದ್ದ ಮಳೆ ನೀರಿನ ನಡುವೆ ವಾಹನ ಸವಾರರು ಸಂಚರಿಸಲು ಪರದಾಡುವ ಸನ್ನಿವೇಶ ಸೃಷ್ಟಿಯಾಗಿತ್ತು. ಅದರಲ್ಲೂ ರೈನ್‌ಕೋಟ್ ಧರಿಸಿ ರಸ್ತೆಯಲ್ಲಿ ಸಾಗುವ ಸಾಹಸಕ್ಕಿಳಿದಿದ್ದ ದ್ವಿಚಕ್ರ ವಾಹನ ಸವಾರರು ಜಾಗರೂಕತೆಯಿಂದ ಸಂಚರಿಸುವ ಅನಿವಾರ್ಯತೆ ಸೃಷ್ಟಿಯಾಗಿತ್ತು. ರಭಸವಾಗಿ ಬೀಳುತ್ತಿದ್ದ ಮಳೆ ಹನಿಗಳು ದ್ವಿಚಕ್ರ ವಾಹನ ಸವಾರರು ಸರಾಗವಾಗಿ ಸಾಗುವುದಕ್ಕೆ ತಡೆಯೊಡ್ಡಿತ್ತು. ಇದರೊಂದಿಗೆ ಎಚ್ಚರ ತಪ್ಪಿದರೆ ಗಾಳಿಯ ರಭಸಕ್ಕೆ ಆಯತಪ್ಪಿ ಬೀಳುವ ಸನ್ನಿವೇಶವನ್ನೂ ದ್ವಿಚಕ್ರ ವಾಹನ ಸವಾರರು ಎದುರಿಸಬೇಕಾಯಿತು.

ಮಳೆಯ ಹೊಡೆತಕ್ಕೆ ರಸ್ತೆ ಬದಿಯ ಮರಗಳ ರಂಬೆ ಕೊಂಬೆಗಳು ಮುರಿದು ರಸ್ತೆಗೆ ಬಿದ್ದಿದ್ದವು. ಅವುಗಳ ನಡುವೆ ವಾಹನ ಸವಾರರು ಸಾಗುವುದು ನಿಜಕ್ಕೂ ಸವಾಲಾಗಿ ಪರಿಣಮಿಸಿತ್ತು. ಜೊತೆಗೆ ಮಳೆ ನೀರಿನ ರಭಸಕ್ಕೆ ತರಾವರಿ ಕಸಕಡ್ಡಿಗಳು ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನಲ್ಲಿ ಸಿಲುಕಿ ಸವಾರರಿಗೆ ಕಿರಿಕಿರಿ ಉಂಟು ಮಾಡಿದವು.

**ರಾತ್ರಿ ಪಾಳಿ ಕಾರ್ಮಿಕರಿಗೆ ತೊಡಕು:** ರಾತ್ರಿ ವೇಳೆಗೆ ಮಳೆಯಾದ ಹಿನ್ನೆಲೆಯಲ್ಲಿ ನಗರದ ಹೃದಯಭಾಗ ಸೇರಿದಂತೆ ವಿವಿಧ ಬಡಾವಣೆಗಳ ಮಳಿಗೆದಾರರು, ಕೆಲಸ ಮುಗಿಸಿ ಮನೆಯತ್ತ ಸಾಗಲು ತೊಡಕಾಯಿತು. ಇನ್ನು ವಿವಿಧ ಕೆಲಸ ಕಾರ್ಯಗಳಿಗೆ ನಗರದಲ್ಲಿ ವಿವಿಧೆಡೆ ಇದ್ದ ಜನಸಾಮಾನ್ಯರು, ಮನೆಗೆ ಮರಳಲು ಪರಿತಪಿಸಬೇಕಾಯಿತು. ಮಳೆ ನಡುವೆಯೂ ರೈನ್‌ಕೋಟ್ ಧರಿಸಿ ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನ ಸವಾರರು ಸಾಗುತ್ತಿದ್ದ ದೃಶ್ಯ ನಗರದಲ್ಲಿ ಕಂಡು ಬಂದಿತು. ರಾತ್ರಿ ಪಾಳಿಯಲ್ಲಿ ಕೆಲಸಕ್ಕೆ ಹೋಗುವ ಉದ್ಯೋಗಸ್ಥರು, ಕಾರ್ಮಿಕರು ತಮ್ಮ ಕೆಲಸದ ಸ್ಥಳಕ್ಕೆ ತಲುಪಲು ಪರದಾಡುವ ಪರಿಸ್ಥಿತಿಯನ್ನು ಮಳೆ ತಂದೊಡ್ಡಿತ್ತು.

ಮೈಸೂರಿನ ಹೃದಯಭಾಗ ಹಾಗೂ ಇದರ ಆಸುಪಾಸಿನ ಪ್ರದೇಶಗಳು ಸೇರಿದಂತೆ ಬಹುತೇಕ ಮೈಸೂರು ನಗರದಾದ್ಯಂತ ಅರ್ಧ ತಾಸಿಗೂ ಹೆಚ್ಚು ಕಾಲ ಮಳೆ ಸುರಿಯಿತು. ರಾಮಕೃಷ್ಣನಗರ, ವಿವೇಕಾನಂದನಗರ, ಕುವೆಂಪುನಗರ, ಐಶ್ವರ್ಯನಗರ, ಜಯನಗರ, ಸರಸ್ವತಿಪುರಂ, ಶಾರದಾದೇವಿನಗರ, ಬೋಗಾದಿಯ ಪ್ರಶಾಂತ ನಗರ, ಟಿಕೆ ಬಡಾವಣೆ ಸೇರಿದಂತೆ ನಗರದ ಭಾಗಶಃ ಭಾಗದಲ್ಲಿ ಮಳೆ ಸುರಿಯಿತು.


**ಉಕ್ಕಿ ಹರಿದ ಯುಜಿಡಿಗಳು, ತಗ್ಗು ಪ್ರದೇಶಕ್ಕೆ ನುಗ್ಗಿದ ನೀರು:** ನಗರದ ವಿವಿಧ ಬಡಾವಣೆಗಳಲ್ಲಿ ಮಳೆ ನೀರಿನ ಹೊಡೆತಕ್ಕೆ ಅನೇಕ ಯುಜಿಡಿಗಳು ಉಕ್ಕಿ ಹರಿಯುವಂತಾಗಿತ್ತು. ಪರಿಣಾಮ ಅನೈರ್ಮಲ್ಯದ ವಾತಾವರಣದಿಂದ ಸ್ಥಳೀಯರು ಸಂಕಷ್ಟ ಅನುಭವಿಸಬೇಕಾಯಿತು. ಅಲ್ಲದೆ, ತಗ್ಗು ಪ್ರದೇಶದ ಮನೆಗಳತ್ತ ಮಳೆ ನೀರು ನುಗ್ಗಿದ ಪರಿಣಾಮ ಅಲ್ಲಿನ ನಿವಾಸಿಗಳು ಕಿರಿಕಿರಿ ಅನುಭವಿಸುವಂತಾಗಿತ್ತು. ಪಾಲಿಕೆ ಸಿಬ್ಬಂದಿ ಸೇರಿದಂತೆ ಅಭಯ ತಂಡಗಳು ಮಳೆಯ ಅವಾಂತರದಿಂದ ಉದ್ಭವಿಸಿದ್ದ ಸಮಸ್ಯೆಗಳ ನಿವಾರಣೆಯಲ್ಲಿ ಪ್ರಯತ್ನ ನಿರತರಾಗಿದ್ದರು.

ಗಾಳಿಯ ತೀವ್ರತೆ ಸಾಕಷ್ಟು ಕಡಿಮೆ ಇದ್ದ ಹಿನ್ನೆಲೆಯಲ್ಲಿ ನಗರದಲ್ಲಿ ಯಾವುದೇ ಮರಗಳು ನೆಲಕ್ಕುರುಳಿದಂತೆ ಕಾಣುತ್ತಿಲ್ಲ. ಮಳೆ ವೇಳೆ ಅನೇಕ ಕಡೆ ವಿದ್ಯುತ್ ನಿಲುಗಡೆ ಉಂಟಾಗಿದ್ದ ಬಗ್ಗೆ ಮಾಹಿತಿ ಲಭ್ಯವಾಗಿದೆ. ಇಂದು ಬೆಳಗ್ಗೆಯಿಂದ ಸಂಜೆಯವರೆಗೆ ಬಿಸಿಲಿನ ತಾಪ ಭಾರಿ ಪ್ರಮಾಣದಲ್ಲೇ ಇತ್ತು. ಆದರೆ ರಾತ್ರಿ ಕೆಲಕಾಲ ಸುರಿದ ಮಳೆಯು ಇಡೀ ನಗರದಲ್ಲಿ ತಂಪಿನ ವಾತಾವರಣ ಸೃಷ್ಟಿಸುವ ಮೂಲಕ ಜನತೆ ಮೊಗದಲ್ಲಿ ಸಂತಸ ಮೂಡಿಸಿತು.

**ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮೈಸೂರು, ಕೊಡಗು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿ ಇಂದಿನಿಂದ (ಏ.30) ಮೇ 4ರವರೆಗೆ ಮೋಡ ಕವಿದ ವಾತಾವರಣದೊಂದಿಗೆ ತುಂತುರು ಮಳೆ ಬರುವ ಸಂಭವವಿದೆ ಎಂದು ನಾಗನಹಳ್ಳಿಯ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.**



ಮೈಸೂರಿನ ಶಂಕರಮಠ ರಸ್ತೆಯ 4ನೇ ಕ್ರಾಸ್‌ನಲ್ಲಿ ನಿಂತಿರುವ ಮಳೆ ನೀರು.



## ಬಸವಣ್ಣನವರ ಪ್ರತಿಮೆಗೆ ಪುಷ್ಪಾರ್ಚನೆ

ಬಸವ ಜಯಂತಿ ಅಂಗವಾಗಿ ಮೈಸೂರಿನ ಗನ್ ಹೌಸ್ ಬಳಿ ಇರುವ ಬಸವಣ್ಣನವರ ಪ್ರತಿಮೆಗೆ ಮಾಜಿ ಶಾಸಕರೂ ಆದ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಪುಷ್ಪಾರ್ಚನೆ ಮಾಡಿದರು. ಈ ವೇಳೆ ನಗರ ಬಿಜೆಪಿ ಕಾರ್ಯದರ್ಶಿ ಪುನೀತ್, ಚಾಮರಾಜ ಮಂಡಲಾಧ್ಯಕ್ಷ ದಿನೇಶ್, ಮಾಜಿ ಕಾರ್ಪೊರೇಟರ್ ಪ್ರಮೀಳಾ ಭರತ್, ವಕೀಲ ಉಮೇಶ್, ಮುಖಂಡರಾದ ಜಯಣ್ಣ, ಅಶೋಕ್, ಚರಣ್ ಇನ್ನಿತರರಿದ್ದರು.

## ನಕ್ಕರೆ ಅದೇ ಸ್ವರ್ಗ

ನಿಂಗ : ನಮ್ಮ ಪಿಡಬ್ಲ್ಯುಡಿ ಆಫೀಸ್ ಕ್ಲರ್ಕ್ ಸಿಕ್ಕಾಕೊಂಡು ಬಿಟ್ಟ..!
ರಂಗ : ಅದೆಂಗೆ...?
ನಿಂಗ : ಸುಳ್ಳು ಲೆಕ್ಕ ಬರೆದು
ರಂಗ : ಏನಂತ?
ನಿಂಗ : ರೋಡ್ ರೋಲರ್ ಪಂಚರ್ ಆಗಿದೆ ಅಂತ ಬರ್ದಿದ್ದ!

ಮೈಸೂರು ಮಿತ್ರ
ಗುರುವಾರ, 1 ಮೇ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ..........

ಬದುಕು ಎಷ್ಟೊಂದು ವಿಚಿತ್ರ ಎಂದರೆ ಒಂದು ಕಾಲದಲ್ಲಿ ನಾವು ಅನುಭವಿಸಿದ ಮಹಾಕಷ್ಟಗಳೇ ಮುಂದೆ ನಮ್ಮ ಶಕ್ತಿಗಳಾಗುತ್ತವೆ.
–ಡ್ರ್ಯೂ ಬ್ಯಾರಿಮೋರ್, ಅಮೇರಿಕದ ನಟಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೆಣ್ಣಿಗೆ ಹಟವಿರಬಾರದು, ಗಂಡಿಗೆ ಚಟವಿರಬಾರದು

## ನಿಮ್ಮ ಪತ್ರಗಳು

### ■ ಜನಿವಾರ ಹಾಗೂ ಆಪರೇಷನ್

ಮಾನ್ಯರೆ,

ಕೆಲ ವರ್ಷಗಳ ಹಿಂದೆ, ನಾನು ತಾತಯ್ಯ ಅನಾಥಾಲಯ ವ್ಯವಸ್ಥಾಪಕನಾಗಿದ್ದಾಗಿನ ಘಟನೆ. ಒಂದು ರಾತ್ರಿ ನನಗೆ ಇದ್ದಕ್ಕಿದ್ದಂತೆ ವಿಪರೀತ ಹೊಟ್ಟೆ ನೋವು ಕಾಣಿಸಿಕೊಂಡಿತು. ನಮ್ಮ ಸಂಸ್ಥೆಯಲ್ಲಿಯೇ ಇದ್ದ ವೈದ್ಯಕೀಯ ವಿದ್ಯಾರ್ಥಿಗಳು ಕೂಡಲೇ ಕೆ.ಆರ್. ಆಸ್ಪತ್ರೆಗೆ ನನ್ನನ್ನು ಸಾಗಿಸಿದರು. ಆಗ ಶಸ್ತ್ರಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಡೀನ್ ಅಗಿ ಡಾ. ಗೀತಾ ಅವಧಾನಿ ಮೇಡಂ ಕಾರ್ಯ ನಿರ್ವಹಿಸುತ್ತಿದ್ದರು. ತೀವ್ರ ಅಪೆಂಡಿಸೈಟಿಸ್ ಆಗಿದೆ. ಕೂಡಲೇ ಸರ್ಜರಿ ಆಗಬೇಕೆಂದು ಹೇಳಿದರು. ಮಾರನೇ ದಿನವೇ ಆಪರೇಷನ್ ನಿಗದಿ ಆಯಿತು. ಸಿಬ್ಬಂದಿ ನನ್ನನ್ನು ಸಿದ್ಧಗೊಳಿಸಿದರು. ಆದರೆ ಮೈ ಮೇಲೆ ರಾರಾಜಿಸುತ್ತಿದ್ದ ಜನಿವಾರ ಮುಟ್ಟಲು ಯಾಕೋ ಸಿಬ್ಬಂದಿ ಹಿಂಜರಿಯುತ್ತಿದ್ದರು. ಆಪರೇಷನ್ ಥೀಯೇಟರ್ ಒಳಗೆ ಹೋಗಬೇಕಾದರೆ, ಜನಿವಾರ ತೆಗೆಯಲೇಬೇಕೆಂದು ಸಹಾಯಕ ವೈದ್ಯರು ತಕರಾರು ತೆಗೆದರು. ನಾನು ಸಮ್ಮತಿಸುತ್ತಿರಲಿಲ್ಲ. ಯಾವುದಕ್ಕೂ ಡಾ. ಗೀತಾ ಅವಧಾನಿ ಮೇಡಂ ಅಭಿಪ್ರಾಯ ತೆಗೆದುಕೊಳ್ಳಿ ಎಂದು ಸೂಚಿಸಿದೆ. ಆಪರೇಷನ್‌ಗೆ ಬರಲು ಸಿದ್ಧತೆ ಮಾಡಿಕೊಳ್ಳುತ್ತಿದ್ದ ಅವಧಾನಿ ಮೇಡಂ ಹತ್ತಿರ ಇವರೆಲ್ಲಾ ಹೋಗಿ ಜನಿವಾರ ತೆಗೆಯಲು ನಾನು ಒಪ್ಪದಿರುವ ವಿಷಯ ತಿಳಿಸಿದರು. ಡಾ ಅವಧಾನಿ ಮೇಡಂ ನನ್ನ ಹತ್ತಿರ ಬಂದು, 'ಜನಿವಾರ ತೆಗೆಯಲು ಏನು ಸಮಸ್ಯೆ ಎಂದು ಪ್ರಶ್ನಿಸಿದರು'. ನಾನು ಉತ್ತರಿಸಿ, 'ಡಾಕ್ಟ್ರೇ, ಶಾಸ್ತ್ರ ಪ್ರಕಾರ, ಅಶೌಚ, ಜೀರ್ಣಗೊಂಡ ಜನಿವಾರ ಪರಂತು ತೆಗೆಯೋ ಹಾಗಿಲ್ಲ. ಅಕಸ್ಮಾತ್ ಕಳಚಿ ಅಥವಾ ಕಳೆದು ಹೋದರೂ, ಸ್ನಾನ ಮಾಡಿ, ಹೊಸತು ಧರಿಸಬೇಕು. ಅಲ್ಲಿಯವರೆವಿಗೂ ಅನ್ನ, ಪಾನ ಸ್ವೀಕರಿಸುವ ಹಾಗಿಲ್ಲ ಎಂದೆ. ಈಗ ನೀವು ಕಟ್ ಮಾಡಿದರೆ, ಆಪರೇಷನ್ ಆದ ಮೇಲೆ, ಆ ಜಾಗ ಒಣಗುವವರೆಗೆ ಸ್ನಾನ ಬೇರೆ ಮಾಡುವ ಹಾಗಿಲ್ಲ. ಸ್ನಾನ ಇಲ್ಲದೆ ಹೊಸ ಜನಿವಾರ ಹಾಕಿಕೊಳ್ಳೋ ಹಾಗಿಲ್ಲ. ಅದಿಲ್ಲದೆ ಊಟ ಬೇರೆ ತೆಗೆದುಕೊಳ್ಳುವ ಹಾಗಿಲ್ಲ ಮೇಡಂ ಎಂದು ವ್ಯಾಕುಲಚಿತ್ತನಾಗಿ ನುಡಿದೆ. ಅವರಿಗೆ ಏನನ್ನಿಸಿತೋ, ನನ್ನ ಸರ್ವಿಸ್‌ನಲ್ಲಿ ಇದೇ ಪ್ರಥಮ, ಯಾರಿಗೂ ವಿನಾಯಿತಿ ನೀಡಿರಲಿಲ್ಲ. ಇರಲಿ ಬಿಡಿ, ನಿಮ್ಮ ಜನಿವಾರ ಕಟ್ ಮಾಡದೇ ಆಪರೇಷನ್ ಮಾಡುತ್ತೇನೆ ಎಂದು ಹೇಳಿ ಯಶಸ್ವೀ ಆಪರೇಷನ್ ಮಾಡಿದರು. ಇಂದೂ ಅವರನ್ನು ಧನ್ಯತೆಯಿಂದ ಸ್ಮರಿಸುತ್ತೇನೆ. ನಿನ್ನೆ ಬೀದರ್, ಶಿವಮೊಗ್ಗದಲ್ಲಿ ವಿದ್ಯಾರ್ಥಿಗಳು ಅನುಭವಿಸಿದ 'ಜನಿವಾರ ಕಟ್' ಪ್ರಸಂಗದಿಂದಾಗಿ ನನ್ನ ಪ್ರಕರಣ ನೆನಪಿಗೆ ಬಂತು.

–ಕೆ.ರಘುರಾಮ್ ವಾಜಪೇಯಿ, ಹಿರಿಯ ಸಮಾಜ ಸೇವಕರು, ಮೈಸೂರು

### ■ ರೆವೆನ್ಯೂ ನಿವೇಶನ ಕಟ್ಟಡ ಸಕ್ರಮಕ್ಕಾಗಿ ಬಿ–ಖಾತೆ ನೀಡಿ

ಮಾನ್ಯರೆ,

ಕರ್ನಾಟಕ ರಾಜ್ಯ ಸರ್ಕಾರವು ಈಗಾಗಲೇ ಆದೇಶಿಸಿರುವಂತೆ ರೆವೆನ್ಯೂ ನಿವೇಶನ ಕಟ್ಟಡಗಳಿಗೆ ಬಿ–ಖಾತಾ ನೀಡುವ ಪ್ರಕ್ರಿಯೆ ಆರಂಭವಾಗಿರುವುದು ಸರಿಯಷ್ಟೆ.

ಸುಮಾರು 40 ವರ್ಷಗಳ ಹಿಂದೆಯೇ ಸಾವಿರಾರು ಕುಟುಂಬಗಳು ರೆವಿನ್ಯೂ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದರೂ ಇವುಗಳ ಕ್ರಯ ಪತ್ರಗಳ ರಿಜಿಸ್ಟ್ರೇಷನ್ ಪ್ರಕ್ರಿಯೆಯನ್ನು ಇದುವರೆಗಿನ ಎಲ್ಲಾ ಸರ್ಕಾರಗಳು ತಡೆ ಹಿಡಿದಿದ್ದವು. ಆದರೆ ಅಭಿವೃದ್ಧಿ ಶುಲ್ಕ ಮತ್ತು ಆಸ್ತಿ ತೆರಿಗೆಯನ್ನು ಕಟ್ಟಿಸಿಕೊಂಡು ಹೋಲ್ಡರ್ ಖಾತೆ ಎಂದು ನೀಡಲಾಗಿತ್ತು. ನಂತರ ಕೆಲವು ಅವಕಾಶ ಮಾಡಿಕೊಂಡು ರಿಜಿಸ್ಟ್ರೇಷನ್ ಮಾಡಿಕೊಂಡಿರುತ್ತಾರೆ. ಆದರೆ ಸುಮಾರು ಮುಕ್ಕಾಲು ಪಾಲು ನಿವಾಸಿಗಳು ತಿಳುವಳಿಕೆಯ ಕೊರತೆಯಿಂದಲೋ ಮತ್ತು ಆರ್ಥಿಕ ಬಡತನದಿಂದಲೋ ರಿಜಿಸ್ಟ್ರೇಷನ್ ಮಾಡಿಕೊಂಡಿರುವುದಿಲ್ಲ. ಆದರೆ ಈಗ ಯಾವುದೇ ರಿಜಿಸ್ಟ್ರೇಷನ್‌ಗೆ ಇ–ಖಾತೆ ಅವಶ್ಯಕ ಎಂದು ನಿಯಮ ಮಾಡಲಾಗಿದೆ. ಇದುವರೆಗೆ ರೆವೆನ್ಯೂ ನಿವೇಶನ ಕಟ್ಟಡಗಳಿಗೆ ರಿಜಿಸ್ಟ್ರೇಷನ್ ಅವಕಾಶವಿರಲಿಲ್ಲವಾದ್ದರಿಂದ ಈ ನಿಯಮವನ್ನು ಈ ರೆವೆನ್ಯೂ ನಿವೇಶನಗಳಿಗೆ ಅನ್ವಯಿಸುವುದು ಸಮಂಜಸವಲ್ಲ. ರಿಜಿಸ್ಟ್ರೇಷನ್ ಇಲ್ಲದೆ ಬಿ–ಖಾತೆ ಇಲ್ಲ ಹಾಗೂ ಖಾತೆಯಿಲ್ಲದೆ ರಿಜಿಸ್ಟ್ರೇಷನ್ ಇಲ್ಲ ಎನ್ನುವಂತಾಗಿದೆ. ಇದರಿಂದಾಗಿ ಬಹುಪಾಲು ನಿವಾಸಿಗಳು ಬಿ–ಖಾತೆ ಪಡೆಯುವುದರಿಂದ ವಂಚಿತರಾಗುವುದಲ್ಲದೆ ಇವರೆಲ್ಲರಿಂದ ಬರಬಹುದಾದ ಕಂದಾಯ ಸರ್ಕಾರಕ್ಕೆ ಬಾರದಂತೆ ಆಗುತ್ತದೆ. ಆದ್ದರಿಂದ ಈ ಸಮಸ್ಯೆ ಬಗೆಹರಿಸಲು ಸರ್ಕಾರವು ಇಂತಹ ರೆವೆನ್ಯೂ ನಿವೇಶನ ಕಟ್ಟಡಗಳಿಗೆ ಮಾತ್ರ ಅನ್ವಯಿಸುವಂತೆ ರಿಜಿಸ್ಟ್ರೇಷನ್ ಪ್ರಕ್ರಿಯೆಯನ್ನು ಇ–ಖಾತೆಯಿಲ್ಲದೆ ಪುನರಾರಂಭಗೊಳಿಸಿ ಬಿ–ಖಾತೆ ನೀಡಲು ಅನುವು ಮಾಡಿಕೊಡುವುದು. ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು ಈ ದಿಶೆಯಲ್ಲಿ ಶೀಘ್ರ ಗಮನಹರಿಸಿ ಸೂಕ್ತ ಆದೇಶ ನೀಡಬೇಕೆಂದು ಮನವಿ.

–ಎಸ್. ಹರಿ, ಸಾತಗಳ್ಳಿ 'ಬಿ' ವಲಯ, ಮೈಸೂರು.

### ■ ಅನೈರ್ಮಲ್ಯ ತಪ್ಪಿಸಿ

ಮಾನ್ಯರೆ,

ಮೈಸೂರಿನ ಗೋಕುಲಂ ಹಾಪ್‌ಕಾಮ್ಸ್, ನಿರ್ಮಲ ಕಾನ್ವೆಂಟ್ ಪಕ್ಕದಲ್ಲಿನ ಮೀನು ಮಾರಾಟ ಮಳಿಗೆಯಲ್ಲಿ ನಾನಾ ರೀತಿಯ ಎಣ್ಣೆ ಪದಾರ್ಥಗಳನ್ನು ಬೇಯಿಸುವುದರಿಂದ ಆ ಒಂದು ಕರಿದ ಹೊಗೆ ಹಾಗೂ ಮಹಾಘಾಟಿನಿಂದ ರಸ್ತೆಯಲ್ಲಿ ಓಡಾಡುವ ಪಾದಚಾರಿಗಳಿಗೆ, ಎದುರುಗಡೆ ವಾಸವಿರುವ ನಿವಾಸಿಗಳು, ರೋಗಿಗಳು, ವಯೋವೃದ್ಧರಿಗೆ ಉಸಿರು ಕಟ್ಟುವ ವಾತಾವರಣ ಸೃಷ್ಟಿಯಾಗಿದೆ. ಜೊತೆಗೆ ಕೊಳಕು, ದುರ್ವಾಸನೆ ಸಹಿಸುವುದು ಸಾಧ್ಯವಿಲ್ಲ. ಸಂಬಂಧಪಟ್ಟ ಪಾಲಿಕೆ ಆರೋಗ್ಯ ಅಧಿಕಾರಿಗಳು ಈ ಸಮಸ್ಯೆ ಬಗೆಹರಿಸಲು ಮನವಿ. – ಜಗದೀಶ್ ಮತ್ತು ಸ್ನೇಹಿತರು, ಮೈಸೂರು.

### ■ ಜನರ ಕಷ್ಟ ಕೇಳುವವರ್‍ಯಾರು


ಮಾನ್ಯರೆ,

ಮೈಸೂರು ಮಹಾನಗರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು, ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯಾವ ಯೋಜನೆಗಳು ಸಾಮಾನ್ಯ ಜನರಿಗೆ ತಲುಪುತ್ತಿಲ್ಲ. ಇದಕ್ಕೆ ಕಾರಣ ಮೈಸೂರು ಮಹಾನಗರ ಪಾಲಿಕೆಗೆ ಚುನಾವಣೆ ಕಾರಣಾಂತರಗಳಿಂದ ನಡೆಯದಿರುವುದು. ಈ ಮೊದಲು ಸಾರ್ವಜನಿಕರು ಅವರವರ ಕಷ್ಟ ಕಾರ್ಪಣ್ಯ ಹೇಳಿಕೊಳ್ಳಲು ಜನಪ್ರತಿನಿಧಿಗಳ ಬಳಿ ತೆರಳುತ್ತಿದ್ದರು. ಈಗ ಅದೂ ಸಾಧ್ಯವಿಲ್ಲದಾಗಿದೆ. ಪ್ರಸ್ತುತ ಕಾಂಗ್ರೆಸ್ ಸರ್ಕಾರ ಮೈಸೂರು ನಗರ ವ್ಯಾಪ್ತಿಯಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಗೆ ಆದೇಶ ಹೊರಡಿಸಿ ಜನರ ಸಂಕಷ್ಟ ದೂರ ಮಾಡಲಿ.

– ಜಿ.ಪಿ. ರಾಜೇಶ್ ಮತ್ತು ಸ್ನೇಹಿತರು, ವಿ.ವಿ. ಮೊಹಲ್ಲಾ, ಮೈಸೂರು.

# ಕಾರ್ಮಿಕ ದಿನಾಚರಣೆ: ಅವಲೋಕನ ಅನಿವಾರ್ಯ!

ಕಾರ್ಮಿಕ ದಿನಾಚರಣೆ, ಕಾರ್ಮಿಕರ ಶಕ್ತಿ ಮತ್ತು ಐಕ್ಯತೆಯನ್ನು ಪ್ರದರ್ಶಿಸಲು ಕೂಡ ಒಂದು ವೇದಿಕೆಯಾಗಬಲ್ಲದು. ಭಾರತದಲ್ಲಿ ಮೇ ದಿನಾಚರಣೆಯನ್ನು ಪ್ರಪ್ರಥಮವಾಗಿ 01.05.1923 ರಂದು ಮದ್ರಾಸಿನಲ್ಲಿ (ಇಂದಿನ ಚೆನ್ನೈ) ಆಚರಿಸಲಾಯಿತು.



> “ಕಾರ್ಮಿಕ ದಿನಾಚರಣೆ, ಕಾರ್ಮಿಕರ ಶಕ್ತಿ ಮತ್ತು ಐಕ್ಯತೆಯನ್ನು ಪ್ರದರ್ಶಿಸಲು ಕೂಡ ಒಂದು ವೇದಿಕೆಯಾಗಬಲ್ಲದು. ಭಾರತದಲ್ಲಿ ಮೇ ದಿನಾಚರಣೆಯನ್ನು ಪ್ರಪ್ರಥಮವಾಗಿ 01.05.1923 ರಂದು ಮದ್ರಾಸಿನಲ್ಲಿ (ಇಂದಿನ ಚೆನ್ನೈ) ಆಚರಿಸಲಾಯಿತು. ಕಾರ್ಮಿಕ ಅಥವಾ ಶ್ರಮಿಕ ವರ್ಗ ಇಂದು ಹತ್ತು ಹಲವು ಸಂಕೋಲೆಗಳಿಂದ ಬಂಧಿಯಾಗಿದೆ.

ಕಾರ್ಮಿಕ ಅಥವಾ ಶ್ರಮಿಕ ವರ್ಗ ಇಂದು ಹತ್ತು ಹಲವು ಸಂಕೋಲೆಗಳಿಂದ ಬಂಧಿಯಾಗಿದೆ. ದೇಶಾದ್ಯಂತ ತನ್ನ ಕರಾಳ ಹಸ್ತವನ್ನು ಚಾಚಿರುವ ನಿರುದ್ಯೋಗ, ಇಡೀ ಕಾರ್ಮಿಕ ವರ್ಗಕ್ಕೆ ನುಂಗಲಾಗದ ತುತ್ತಾಗಿದೆ. ಇದರ ಜೊತೆಗೆ, ಲಾಕ್ ಔಟ್, ಲೇ ಆಫ್ ಮುಂತಾದ ಉಪಕ್ರಮಗಳು ಕಾರ್ಮಿಕರ ಪಾಲಿಗೆ ವಿಷಮಕಾರಿಯಾಗಿ ಪರಿಣಮಿಸಿದೆ. ದೇಶಾದ್ಯಂತ ಒಂದಲ್ಲಾ ಒಂದು ರೀತಿಯ ಮುಷ್ಕರಗಳು ನಡೆಯುತ್ತಲೇ ಇರುತ್ತವೆ. ಕಾರ್ಮಿಕ ಬಾಂಧವರು ಎಂದಿಗಿಂತ ಹೆಚ್ಚಿನ ರೀತಿಯ ಕಷ್ಟ–ನಷ್ಟಗಳಿಗೆ ತುತ್ತಾಗಿ ಒಂದು ರೀತಿಯ ಅತಂತ್ರವಾದ ಬದುಕನ್ನು ಸಾಗಿಸುತ್ತಿದ್ದಾರೆ. ಕೆಲವು ಕಾರ್ಮಿಕ ಕಾನೂನುಗಳಿಗೆ ಇತ್ತೀಚೆಗೆ ತಂದ ತಿದ್ದುಪಡಿಗಳು ದುಡಿಯುವ ವರ್ಗಕ್ಕೆ ಮಾರಕವಾಗಿದೆ. ಭಾರತ ಸೇರಿದಂತೆ ಇಡೀ ವಿಶ್ವವನ್ನೇ ಕಾಡಿದ ಕೊರೊನಾ ಸೋಂಕು ಕಾರ್ಮಿಕರ ಪಾಲಿಗಂತೂ ನುಂಗಲಾಗದ ತುತ್ತಾಗಿತ್ತು. ಕೊರೊನಾ ಸೋಂಕಿನ ಉಪಟಳ ವಿಶ್ವಾದ್ಯಂತ ಶ್ರಮಿಕ ವರ್ಗದ ಮೇಲೆ ಸಾಕಷ್ಟು ದುಷ್ಪರಿಣಾಮಗಳನ್ನು ಬೀರಿತು. ನೂರಾರು ಕಾರ್ಖಾನೆಗಳನ್ನು ಉತ್ಪಾದನೆ ಇಲ್ಲದೇ ಮುಚ್ಚ ಬೇಕಾಯಿತು. ಹಲವಾರು ದೇಶಗಳ ಅರ್ಥ ವ್ಯವಸ್ಥೆ ಹಳಿ ತಪ್ಪಿತು. ಸುದೈವವಶಾತ್, ಕೊರೊನಾ ಸೋಂಕು ನಿಯಂತ್ರಣಕ್ಕೆ ಬಂದು ಎಲ್ಲಾ ದೇಶಗಳ ಆರ್ಥಿಕತೆ ಚೇತರಿಕೆಯ ಹಾದಿ ಹಿಡಿದಿರುವುದು ಸಂತಸದ ವಿಚಾರ. ಭಾರತ ವಿಶ್ವದ ಐದನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿರುವುದು ಸಹ ಸ್ವಾಗತಾರ್ಹ. ಇನ್ನು ಕೆಲವೇ ವರ್ಷಗಳಲ್ಲಿ ಭಾರತ ವಿಶ್ವದ 3ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿದೆ ಎಂಬ ವಿಶ್ವಾಸವನ್ನು ಕೆಲವೇ ಆರ್ಥಿಕ ತಜ್ಞರು ವ್ಯಕ್ತಪಡಿಸುವುದನ್ನು ಇಲ್ಲಿ ಸ್ಮರಿಸಬಹುದು.

ರಸ್ತೆ ಬದಿ ವ್ಯಾಪಾರಿಗಳು, ತಳ್ಳು ಗಾಡಿಗಳಲ್ಲಿ ಹಣ್ಣು ಹೂವು ತರಕಾರಿ ಮಾರುವವರು, ರಸ್ತೆ ಬದಿ ಕ್ಯಾಂಟೀನ್ ಇತ್ಯಾದಿ ನಡೆಸುವವರು ಈ ರೀತಿ ಅಸಂಘಟಿತ ವಲಯದಲ್ಲಿ ಕಾರ್ಮಿಕರ ಬಹುದೊಡ್ಡ ಸೈನ್ಯವೇ ಇದೆ. ದೇಶದಲ್ಲಿ ಹಲವಾರು ಕಾರ್ಖಾನೆಗಳು ಒಂದಲ್ಲ ಒಂದು ಕಾರಣಕ್ಕೆ ಮುಚ್ಚುತ್ತಿವೆ. ತೆರೆದಿರುವ ಕಾರ್ಖಾನೆಗಳಲ್ಲಿ ಕೂಡ ಉತ್ಪಾದನೆ ಕುಂಠಿತವಾಗುತ್ತಿದೆ. ಇದರ ನೇರ ಪರಿಣಾಮವನ್ನು ಕಾರ್ಮಿಕರು ಎದುರಿಸಬೇಕಾಗುತ್ತಿದೆ. ಸಂಘಟಿತ ವಲಯದ ಕಾರ್ಮಿಕರಿಗೆ ಸರ್ಕಾರ ಮತ್ತು ಕಾರ್ಖಾನೆಯ ಮಾಲೀಕರಿಂದ ಕೆಲವು ಸೌಲಭ್ಯಗಳು ದೊರಕುತ್ತಿವೆಯಾದರೂ ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಗೋಳನ್ನು ಕೇಳುವವರೇ ಇಲ್ಲ. ದೇಶಾದ್ಯಂತ, ಹಂಗಾಮಿ ಕಾರ್ಮಿಕರಿಗಾಗಿ, ದಿನಗೂಲಿ ನೌಕರರಾಗಿ ಸಾವಿರಾರು ಮಂದಿ ಕೆಲಸ ಮಾಡುತ್ತಿದ್ದಾರೆ.

ಸ್ನಾತಕೋತ್ತರ ಪದವಿ ಪಡೆದವರೂ ಹಂಗಾಮಿ ಉಪನ್ಯಾಸಕರಾಗಿ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ. ಇವರಿಗೆ ಯಾವುದೇ ರೀತಿಯ ಸೌಲಭ್ಯವೂ ಇಲ್ಲ. ಇವರಿಗೆ ಭವಿಷ್ಯವೇ ಇಲ್ಲದಂತಾಗಿದೆ. ಮತ್ತೆ ಕೆಲವರಿಗೆ ಒಂದು ಸೌಲಭ್ಯ ಸಿಕ್ಕರೆ, ಮತ್ತೊಂದು ಸಿಗಲಾರದು. ಹಾಗಂತ ಇರುವ ಕೆಲಸವನ್ನು ಬಿಟ್ಟು ಬಾಯಿಗೆ ಮಣ್ಣು ಹಾಕಿಕೊಳ್ಳಲು ಇವರಿಗೆ ಇಷ್ಟವಿಲ್ಲ.

ಹಾಗೋ, ಹೀಗೋ ಅದಕ್ಕೆ ಜೋತು ಬಿದ್ದಿರುತ್ತಾರೆ. ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರಾಗಿ, ಪುರುಷರಿಗೆ ಸರಿಸಮನಾಗಿ ಮಹಿಳೆಯರು ಕೂಡ ಅವಿರತ ದುಡಿಯುತ್ತಿದ್ದಾರೆ. ಇವರಿಗೆ ಬರುವ ಅಲ್ಪ ವೇತನದಲ್ಲಿ ಮನೆಯ ಎಲ್ಲಾ ಸದಸ್ಯರ ತುತ್ತಿನ ಚೀಲ ತುಂಬಿಸಬೇಕಾದ ಧಾರುಣ ಪರಿಸ್ಥಿತಿ ಎಷ್ಟೋ ಮನೆಗಳಲ್ಲಿ ಇದೆ. ಖಾಸಗೀಕರಣದ ಹೆಸರಲ್ಲಿ ಸರ್ಕಾರಿ ಒಡೆತನದ ಅನೇಕ ಕಾರ್ಖಾನೆಗಳು



ಕೆ.ವಿ. ವಾಸು
ವಕೀಲರು ಮತ್ತು ನೋಟರಿ ಮೈಸೂರು.
ಮೊ:9341731661

ಖಾಸಗಿಯವರ ಪಾಲಾಗುತ್ತಿದೆ. ಮಾಹಿತಿ ತಂತ್ರ ಆಧಾರಿತ ಹಾಗೂ ಸಾಫ್ಟ್ ವೇರ್ ಕಂಪನಿಗಳಲ್ಲಿ ಸಹ ಉದ್ಯೋಗ ಕಡಿತ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಅನೇಕ ದೈತ್ಯ ಸಾಫ್ಟ್‌ವೇರ್ ಕಂಪನಿಗಳು ಪೈಪೋಟಿಗೆ ಬಿದ್ದ ಹಾಗೆ ತಮ್ಮ ತಮ್ಮ ಕಂಪನಿಗಳಲ್ಲಿ ಉದ್ಯೋಗ ಕಡಿತ ಮಾಡುತ್ತಿವೆ. ಇನ್ಫೋಸಿಸ್‌ನಂತಹ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ದಿಗ್ಗಜ ಕೂಡ ಇದಕ್ಕೆ ಹೊರತಾಗಿಲ್ಲ.

ಭಾರತೀಯ ನೌಕರ ಇಂದು ಅತ್ಯಂತ ಅಗ್ಗಕ್ಕೆ ಸಿಗುವ ವಸ್ತುವಾಗಿಬಿಟ್ಟಿದ್ದಾನೆಂಬುದು ನಂಬಲೇಬೇಕಾದ ಘೋರ ಸತ್ಯ. ಹಾಗಂತ ಕಾರ್ಮಿಕ, ಮಾಡುವುದೆಲ್ಲಾ ಸರಿ ಎಂದು ಹೇಳಲಾಗದು. ಅಶಿಸ್ತು ಸೋಮಾರಿತನ ಅವಿಧೇಯತೆ, ಮುಂತಾದ ಅವಗುಣಗಳಿಂದ. ಕಾರ್ಮಿಕರು ಹೊರ ಬರಬೇಕಾಗಿದೆ. ಹಕ್ಕಿಗಾಗಿ ಹೋರಾಡುವ ಅವರು ತಮ್ಮ ಕರ್ತವ್ಯಗಳನ್ನು ಮರೆಯಬಾರದು. ಎಷ್ಟೋ ಕಾರ್ಖಾನೆಗಳಲ್ಲಿ ಕಾರ್ಮಿಕರ ಅಶಿಸ್ತು ಅಥವಾ ಬೇಜವಾಬ್ದಾರಿಯಿಂದಾಗಿ ಉತ್ಪಾದನೆ ಕುಂಠಿತಗೊಳ್ಳುತ್ತಿದೆ. ಸಣ್ಣಪುಟ್ಟ ಕಾರಣಗಳನ್ನು ಮುಂದಿಟ್ಟುಕೊಂಡು ಮುಷ್ಕರಕ್ಕೆ ಕರೆ ಕೊಡುವುದು, ಉತ್ಪಾದನೆಯನ್ನು ಕುಂಠಿತಗೊಳಿಸುವುದು, ಕಾರ್ಮಿಕರನ್ನು ಮಾಲೀಕರ ವಿರುದ್ಧ ಎತ್ತಿ ಕಟ್ಟುವುದು, ಕಾರ್ಮಿಕ ಸಂಘಟನೆಯ ಹೆಸರಿನಲ್ಲಿ ಕೆಲಸದ ಸ್ಥಳಗಳಲ್ಲಿ ಅರಾಜಕತೆ ಸೃಷ್ಟಿಸುವುದು, ಮುಂತಾದವುಗಳಿಂದ ಕಾರ್ಮಿಕರು ಹೊರ ಬರಬೇಕಾಗಿದೆ. ಎಷ್ಟೋ ಕಾರ್ಖಾನೆಗಳಲ್ಲಿ ಕಾರ್ಮಿಕ ಹಾಗೂ ಮಾಲೀಕರ ನಡುವೆ ಸೌಹಾರ್ದಯುತ ಸಂಬಂಧವಿದೆ. ಕೆಲವು ಕಾರ್ಖಾನೆಗಳಲ್ಲಿ, ಕನ್ನಡ ರಾಜ್ಯೋತ್ಸವ, ಮೇ ದಿನಾಚರಣೆ ಮುಂತಾದವುಗಳನ್ನು ಆಡಳಿತ ವರ್ಗ ಹಾಗೂ ಕಾರ್ಮಿಕ ವರ್ಗ ಜಂಟಿಯಾಗಿ ಆಚರಿಸುತ್ತಾ ಬರುತ್ತಿರುವ ಉದಾಹರಣೆಗಳು ನಮ್ಮ ಮುಂದಿವೆ.

ಮಾಲೀಕ ಹಾಗೂ ಕಾರ್ಮಿಕರ ನಡುವೆ ಉತ್ತಮ ಭಾಂದವ್ಯವಿದ್ದರೆ ಇಬ್ಬರಿಗೂ ಕ್ಷೇಮ. ಆದರೂ ಖಾಸಗಿ ವಲಯದಲ್ಲಿ ಕಾರ್ಮಿಕರ ಶೋಷಣೆ ಹೆಚ್ಚಿನ ರೀತಿಯಲ್ಲಿ ನಡೆಯುತ್ತದೆ. ಇಂದು ಬಹುತೇಕ ಕಾರ್ಮಿಕರನ್ನು 'ಅಭದ್ರತೆ' ಹೆಚ್ಚಿನ ರೀತಿಯಲ್ಲಿ ಕಾಡುತ್ತಿದೆ. ಇಂದು ಕೆಲಸದಲ್ಲಿ ಇದ್ದವನು, ನಾಳೆಯೂ ಇರುತ್ತಾನೆ ಎಂಬ ಯಾವ ಭರವಸೆಯೂ ಇಲ್ಲ. ಬೆಂಗಳೂರು, ಮುಂಬಯಿಯಂತಹ ಮಹಾ ಮತ್ತು ಮಾಯಾ ನಗರಗಳ ಸಾಫ್ಟ್‌ವೇರ್ ಕಂಪನಿಗಳಲ್ಲಿ ಲಕ್ಷಾಂತರ ರೂಪಾಯಿಗಳ ಸಂಬಳ ಪಡೆಯುವ ಅಧಿಕಾರಿಗಳಲ್ಲಿ ಕೂಡ ಕೆಲಸದ ಅಭದ್ರತೆ ಬೆಂಬಿಡದೇ ಕಾಡುತ್ತಿದೆ.

ಕಾರ್ಮಿಕ ದಿನಾಚರಣೆಯನ್ನು ಸಡಗರ ಮತ್ತು ಸಂಭ್ರಮದಿಂದ ಆಚರಿಸುವ ಮನೋಸ್ಥಿತಿ ಇಂದು ಯಾವುದೇ ಕಾರ್ಮಿಕನಲ್ಲಿ ಉಳಿದಿಲ್ಲವೆಂದು ಹೇಳಬಹುದು. ಆದರೂ ಕಾರ್ಮಿಕ ದಿನಾಚರಣೆಯ ಈ ಶುಭ ಸಂದರ್ಭದಲ್ಲಿ ದೇಶದ ಎಲ್ಲಾ ಕಾರ್ಮಿಕರ ಸ್ಥಿತಿಗತಿಗಳು ಸುಧಾರಿಸಲಿ, ಅವರ ಬದುಕು ಹಸನಾಗಲಿ ಎಂದು ಹಾರೈಸೋಣ.

# ಭವಿಷ್ಯದಲ್ಲಿ ಆರೋಗ್ಯ ಕ್ಷೇತ್ರದಲ್ಲೂ ಕೃತಕ ಬುದ್ಧಿಮತ್ತೆ ಪಾರಮ್ಯ

## ಜೆಎಸ್‌ಎಸ್ ಮೆಡಿಕಲ್ ಕಾಲೇಜ್ ಪ್ರಾಂಶುಪಾಲ ಡಾ. ನಾರಾಯಣಪ್ಪ ವಿಶ್ವಾಸ




ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಚರ್ಮರೋಗ ವಿಭಾಗದ ವತಿಯಿಂದ ಏರ್ಪಡಿಸಿದ್ದ ಕೃತಕ ಬುದ್ಧಿಮತ್ತೆಯ ಮೂಲಭೂತ ಅಂಶಗಳು ಮತ್ತು ಚರ್ಮರೋಗ ಶಾಸ್ತ್ರದಲ್ಲಿ ಅದರ ಪ್ರಸ್ತುತತೆ ಕಾರ್ಯಕ್ರಮವನ್ನು ಆಸ್ಪತ್ರೆಯ ನಿರ್ದೇಶಕ ಡಾ. ಸಿ.ಪಿ. ಮಧು ಉದ್ಘಾಟಿಸಿದರು.

ಮೈಸೂರು, ಏ. 30– ಭವಿಷ್ಯತ್ತಿನಲ್ಲಿ, ಕೃತಕ ಬುದ್ಧಿಮತ್ತೆಯು ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಸ್ಥಾನ ಪಡೆದುಕೊಳ್ಳಲಿದೆ ಎಂದು ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ. ಡಿ. ನಾರಾಯಣಪ್ಪ ಹೇಳಿದರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಚರ್ಮರೋಗ ವಿಭಾಗದ ವತಿಯಿಂದ ಏರ್ಪಡಿಸಿದ್ದ ಕೃತಕ ಬುದ್ಧಿಮತ್ತೆಯ ಮೂಲಭೂತ ಅಂಶಗಳು ಮತ್ತು ಚರ್ಮರೋಗ ಶಾಸ್ತ್ರದಲ್ಲಿ ಅದರ ಪ್ರಸ್ತುತತೆಯ ಕುರಿತು ಮಾತನಾಡುತ್ತಾ ತಿಳಿಸಿದರು. ಕೃತಕ ಬುದ್ಧಿಮತ್ತೆಯು ಮುಂದೆ ರೋಗಿಗಳ ಆರೈಕೆಗೆ ಬಹಳ ಉಪಯುಕ್ತ. ಇತ್ತೀಚಿನ ತಂತ್ರಜ್ಞಾನ ಯುಗದಲ್ಲಿ ಕೃತಕ ಬುದ್ಧಿಮತ್ತೆಯು ಬಹಳ ಪ್ರಮುಖ ಪಾತ್ರ ವಹಿಸುತ್ತಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಚಿತ್ರಗಳನ್ನು ಓದುವ ಮತ್ತು ವಿಶ್ಲೇಷಿಸುವ ಗಮನಾರ್ಹ ಸಾಮರ್ಥ್ಯವನ್ನು ಪ್ರದರ್ಶಿಸಿವೆ. ರೋಗನಿರ್ಣಯದ ನಿಖರತೆ ಮತ್ತು ದಕ್ಷತೆಯನ್ನು ಹೆಚ್ಚಿಸುವ ಮತ್ತು ರೋಗನಿರ್ಣಯದ ದೋಷಗಳನ್ನು ಕಡಿಮೆ ಮಾಡುವ ಸಾಮರ್ಥ್ಯವನ್ನು ಹೊಂದಿವೆ ಎಂದು ತಿಳಿಸಿದರು.

ಆಸ್ಪತ್ರೆಯ ನಿರ್ದೇಶಕ ಡಾ. ಸಿ.ಪಿ. ಮಧು, ಕೃತಕ ಬುದ್ಧಿಮತ್ತೆಯನ್ನು ಮುಂದಿನ ದಿನಗಳಲ್ಲಿ ಆಸ್ಪತ್ರೆಗೆ ಅಳವಡಿಸಿಕೊಳ್ಳುವುದರಿಂದ ರೋಗಿಯ ಆರೈಕೆಯ ವೆಚ್ಚವನ್ನು ತಗ್ಗಿಸಬಹುದು ಎಂದು ಅಭಿಪ್ರಾಯಪಟ್ಟರು.

ಮೈಸೂರು ಡರ್ಮಾಟಲಾಜಿ ಸೊಸೈಟಿಯ ಅಧ್ಯಕ್ಷರು ಹಾಗೂ ಜೆಎಸ್‌ಎಸ್ ಆಸ್ಪತ್ರೆಯ ಚರ್ಮರೋಗ ವಿಭಾಗದ ಪ್ರಾಧ್ಯಾಪಕ ಡಾ. ಎಸ್. ವೀರಣ್ಣ ಅವರು ವೈದ್ಯಕೀಯ ವಿದ್ಯಾರ್ಥಿಗಳು ಕೃತಕ ಬುದ್ಧಿಮತ್ತೆಯ ಬಗ್ಗೆ ಹೆಚ್ಚು ಸಂಶೋಧನೆ ಮಾಡಿದರೆ ರೋಗಿಗಳಿಗೆ ಬಹಳ ಅನುಕೂಲವಾಗುವುದು ಎಂದರು.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಮಾಹಿತಿ ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ವಾಣಿಶ್ರೀ ಅರುಣ್, ಜೆಎಸ್‌ಎಸ್ ಎಎಚ್ ಇಆರ್‌ನ ಸಂಶೋಧನಾ (ಕ್ಲಿನಿಕಲ್) ಡೆಪ್ಯೂಟಿ ಡೀನ್ ಡಾ.ವಿಕ್ರಮ್ ಪಾಟೀಲ್, ಮುಂಬೈನ ಕೊಲಾಬಾದ ಐಎನ್ ಎಚ್‌ಎಸ್ ಅಶ್ವಿನಿ ಆಸ್ಪತ್ರೆಯ ಚರ್ಮರೋಗ ತಜ್ಞರಾದ ಡಾ. ಸಿದ್ಧಾರ್ಥ್ ಭಟ್ ಬೆಂಗಳೂರಿನ ರಿವಾ ಸ್ಕಿನ್ ಹೇರ್ ಮತ್ತು ಸೌಂದರ್ಯ ಚಿಕಿತ್ಸಾಲಯದ ಸಲಹೆಗಾರ ಚರ್ಮ ರೋಗ ತಜ್ಞರಾದ ಡಾ. ಪ್ರಿಯಾಂಕ ಕರಗಯ್ಯ, ತಿರುಚ್ಚಿಯ ಕೆಎಪಿವಿ ಸರ್ಕಾರಿ ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಆರ್. ಪಾರ್ಥ ಸಾರಥಿ. ಚಂಡೀಗಡದ ಕಮಾಂಡ್ ಆಸ್ಪತ್ರೆಯ ಚರ್ಮರೋಗ ವಿಭಾಗದ ಪ್ರಾಧ್ಯಾಪಕರಾದ ಡಾ. ದೇಬ್ದೀಪ್ ಮಿತ್ರ ಅವರು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಅವರ ಜ್ಞಾನ ಮತ್ತು ಅನುಭವವನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಡಾ. ಜಿ.ಆರ್. ಕಾಂತ್ ರಾಜ್, ಡಾ. ರೇಣುಕಾ ಪಿಎಸ್‌ಎಸ್, ಡಾ. ಎಸ್. ಅಶ್ವಿನಿ ಮತ್ತು ಆಸ್ಪತ್ರೆಯ ವೈದ್ಯರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಲಂಡನ್ ಸ್ಪಿರಿಟ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಭಾರತದ ಮದ್ಯ

**ಲಂಡನ್:** ಭಾರತ ಎಲ್ಲವನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ಎಲ್ಲದರಲ್ಲೂ ಮುಂದೆ, ಅದರಲ್ಲೂ ಮದ್ಯ ಉತ್ಪಾದನೆಯಲ್ಲಿ ಒಂದು ಕೈ ಹೆಚ್ಚು. ಒಳ್ಳೆಯ ಬ್ರಾಂಡ್‌ಗಳನ್ನು ಭಾರತ ವಿಶ್ವಕ್ಕೆ ಪರಿಚಯಿಸಿದೆ. ಹಾಗಾಗಿ 2025ರಲ್ಲಿ ಲಂಡನ್‌ನಲ್ಲಿ ನಡೆದ ಸ್ಪಿರಿಟ್ಸ್ ಸ್ಪರ್ಧೆ–2025ರಲ್ಲಿ ಭಾರತ ಶ್ರೀಮಂತ ಬ್ರಾಂಡ್‌ವೊಂದು ಸ್ಥಾನವನ್ನು ಪಡೆದಿದೆ. ಸ್ಪಿರಿಟ್ಸ್ ಸ್ಪರ್ಧೆಯ 8 ನೇ ಆವೃತ್ತಿಯ ವಿಜೇತರಲ್ಲಿ ಇದು ಒಂದಾಗಿದೆ. ಲಂಡನ್‌ನಲ್ಲಿ ನಡೆದ ಸ್ಪಿರಿಟ್ಸ್ ಸ್ಪರ್ಧೆಯಲ್ಲಿ ವಿಸ್ಕಿ, ಜಿನ್, ರಮ್, ಫೆನಿ ಮತ್ತು ಇತರ ಮದ್ಯಗಳನ್ನು ಪ್ರದರ್ಶನ ಮಾಡಲಾಗಿತ್ತು. ಅದರಲ್ಲಿ ಭಾರತದ ಒಣ ಜಿನ್ ಅನ್ನು ವಿಶ್ವದ ಅತ್ಯಧಿಕ ರೇಟಿಂಗ್ ಪಡೆದ ಸ್ಪಿರಿಟ್‌ಗಳಲ್ಲಿ ಹೆಸರಿಸಲಾಗಿದೆ.

**ಚಿನ್ನ ಗೆದ್ದ ಭಾರತೀಯ ಸ್ಪಿರಿಟ್ಸ್:** ಭಾರತಕ್ಕೆ 2025ರ ಸ್ಪಿರಿಟ್ ಸ್ಪರ್ಧೆಯಲ್ಲಿ ಜಿನ್ ಜಿಜಿ ಇಂಡಿಯಾ ಡ್ರೈ ಜಿನ್ ಚಿನ್ನ ಗೆದ್ದಿದೆ. 98 ರ್‍ಯಾಂಕ್ ಪಡೆದಿದ್ದು, ಇದು ಈ ವರ್ಷದ ಅತ್ಯಧಿಕ ರೇಟಿಂಗ್ ಪಡೆದ ಭಾರತೀಯ ಸ್ಪಿರಿಟ್ ಆಗಿದೆ. ಇನ್ನು ಜಿನ್ ಜಿಜಿ ಡಾರ್ಜಿಲಿಂಗ್ ಜಿನ್ 92 ಅಂಕ ಪಡೆಯುವ ಮೂಲಕ ಬೆಳ್ಳಿಯನ್ನು ತನ್ನದಾಗಿಸಿಕೊಂಡಿದೆ.

ಪಾಲ್ ಜಾನ್ ಇಂಡಿಯನ್ ಸಿಂಗಲ್ ಮಾಲ್ಟ್ ವಿಸ್ಕಿ ಬ್ರಿಲಿಯನ್ಸ್ 96 ಅಂಕಗಳೊಂದಿಗೆ ಚಿನ್ನ ಗೆದ್ದಿದೆ. ಈ ವರ್ಷದ ಅತ್ಯುತ್ತಮ ಭಾರತೀಯ ಸಿಂಗಲ್ ಮಾಲ್ಟ್ ವಿಸ್ಕಿ ಎಂದು ಹೆಸರಿಸಲಾಯಿತು.


# ಇರಲಿ ಒಂದು ಮೆಚ್ಚುಗೆಯ ಮಾತು

ನಮ್ಮಲ್ಲಿ ಅನೇಕರಿಗೆ ಒಂದು ಅಭ್ಯಾಸವಿದೆ. ಏನೆಂದರೆ ಇನ್ನೊಬ್ಬರ ಬಗ್ಗೆ ಅಪ್ಪಿ ತಪ್ಪಿಯೂ ಒಳ್ಳೆಯ ಮಾತನಾಡುವುದಿಲ್ಲ. ಹಾಗಂತ ಎಲ್ಲಾ ಸಮಯವೂ ಎಲ್ಲರನ್ನು ಹೊಗಳುತ್ತಾ ಕೂರಬೇಕಂತೇನಿಲ್ಲ. ಯಾರಿಂದಾದರೂ ನಮಗೆ ನೇರವಾಗಿ ಅಥವಾ ಪರೋಕ್ಷವಾಗಿ ಸಹಾಯ ಆಗಿದ್ದರೆ ಅಥವಾ ಯಾರಲ್ಲಾದರೂ ಒಳ್ಳೆಯ ಪ್ರತಿಭೆ ಇದ್ದರೆ, ಯಾರಾದರೂ ಒಳ್ಳೆಯ ಕೆಲಸ ಮಾಡುತ್ತಿದ್ದರೆ ಅಂಥವರಿಗೆ ಒಂದು ಮೆಚ್ಚುಗೆಯ ಮಾತನಾಡಿದರೆ, ಪ್ರೋತ್ಸಾಹಿಸಿದರೆ ಅವರಿಗೆ ಎಲ್ಲೋ ಮನಸ್ಸಿನ ಒಂದು ಮೂಲೆಯಲ್ಲಿ ನನ್ನನ್ನು, ನನ್ನ ಕೆಲಸ, ಪ್ರತಿಭೆ ಗುರುತಿಸುವವರಿದ್ದಾರೆ, ಇನ್ನೂ ಹೆಚ್ಚಿನ ಕೆಲಸ ಮಾಡೋಣ ಅಂತ ಅನ್ನಿಸದೇ ಇರುವುದಿಲ್ಲ.

ಮನೆಯಲ್ಲೇ ತೆಗೆದುಕೊಂಡರೆ, ಹೆಂಡತಿ ಇಡೀ ದಿನ ಮನೆಯಲ್ಲಿ ಎಲ್ಲಾ ಕೆಲಸ ಅಚ್ಚುಕಟ್ಟಾಗಿ ಮಾಡಿಕೊಂಡು ಹೋದರೂ ಎಷ್ಟೋ ಸಾರಿ ಗಂಡನಿಗೆ ಅನಿಸ್ತೆ,ಮನೆಯಲ್ಲೇ ಇದ್ದು ಅಷ್ಟು ಮಾಡಲಿಕ್ಕಾಗುವುದಿಲ್ಲವಾ ಅಂತ.ಅದು ಬಿಟ್ಟು ಯಾವಾಗಲಾದರೂ ಒಮ್ಮೆ ಆದರೂ 'ಎಷ್ಟು ಅಚ್ಚುಕಟ್ಟಾಗಿ ಸಂಸಾರ ನಡೆಸಿಕೊಂಡು ಹೋಗುತ್ತೀಯಾ' ಅಂತ ಮೆಚ್ಚುಗೆ ವ್ಯಕ್ತಪಡಿಸಲಿ. ಆಗ ಹೆಂಡತಿಯ ಮನಸ್ಸಿನ ಮೂಲೆಯಲ್ಲೊಂದು ಸಾರ್ಥಕತೆಯ ಭಾವ ಮೂಡುತ್ತದೆ. ಅದೇ ರೀತಿ ಹೆಂಡತಿ ಕೂಡ ಗಂಡ ಕಛೇರಿಯಿಂದ ಅಥವಾ ವ್ಯಾಪಾರ, ವ್ಯವಹಾರ ಮಾಡಿ ಮನೆಗೆ ಬಂದಾಗ 'ಎಷ್ಟು ಕಷ್ಟಪಟ್ಟು ದುಡಿದು ಸುಸ್ತಾಗಿ ಬರುತ್ತೀರಿ, ಸ್ವಲ್ಪ ಕಾಫಿ ಕುಡಿದು ದಣಿವಾರಿಸಿಕೊಳ್ಳಿ' 'ಸಂಸಾರವನ್ನು ಏನೇ ತೊಂದರೆ ಬಂದರೂ ಚೆನ್ನಾಗಿ ನಿಭಾಯಿಸುತ್ತೀರಿ 'ಅಂತ ಯಾವಾಗಲಾದರೂ ಹಿತವಾಗಿ ಮಾತನಾಡುತ್ತಾ ಇದ್ದರೆ ಖಂಡಿತಾ ಗಂಡನಿಗೆ ದಣಿವು ಮಾಯವಾಗಿ ಸಂತಸವುಂಟಾಗುವುದರಲ್ಲಿ ಸಂಶಯವಿಲ್ಲ.

ಮನೆ ಕೆಲಸ ಮಾಡುವವರು ಸರಿ ಮಾಡದಿದ್ದಾಗ ಬೈಯ್ಯುವ ನಾವು,ಅಚ್ಚುಕಟ್ಟಾಗಿ ಕೆಲಸ ಮಾಡುವವರಿಗೆ ಒಂದು ಒಳ್ಳೆಯ ಮೆಚ್ಚುಗೆಯ ಮಾತನಾಡುವುದಿಲ್ಲ.

ಒಂದು ಬಸ್ಸಿನಲ್ಲಿ ರಾತ್ರಿಯಿಡೀ ಪ್ರಯಾಣ ಮಾಡಿ ಆರಾಮವಾಗಿ ನಿದ್ರೆ ಮಾಡಿ ಬೆಳಗ್ಗೆ ಆದ ಕೂಡಲೇ ಇಳಿಯುವ ಸ್ಥಳ ಬಂದಾಗ ರಾತ್ರಿಯಿಡೀ ನಿದ್ರೆ ಮಾಡದೇ ನಮ್ಮನ್ನು ಸುರಕ್ಷಿತವಾಗಿ ಕರೆದುಕೊಂಡು ಬಂದ ಚಾಲಕ ಯಾರು ಅಂತ ಅವರ ಮುಖ ಕೂಡ ನೋಡದೇ ಇಳಿದು ಬರುತ್ತೇವೆ. ಅದೇ ಸರಿಯಾಗಿ ಚಾಲನೆ ಮಾಡದೇ ಯಡವಟ್ಟಾದರೆ ಚಾಲಕನಿಗೆ ಹೋಗಿ ಬೈಯ್ಯುತ್ತೇವೆ. ರಾತ್ರಿಯಿಡೀ ನಿದ್ದೆಬಿಟ್ಟು ಸುರಕ್ಷಿತವಾಗಿ ನಮ್ಮನ್ನು ಕರೆದುಕೊಂಡು ಬಂದ ಚಾಲಕನಿಗೆ ಒಂದು



ರಾಘವೇಂದ್ರ ಜೋಯಿಸ್,
ಮೈಸೂರು.

ಒಳ್ಳೆಯ ಮಾತು, ಮೆಚ್ಚುಗೆ ಆತನನ್ನು ಎಷ್ಟೋ ಹುರಿದುಂಬಿಸುತ್ತದೆ.

ಒಬ್ಬ ಒಳ್ಳೆಯ ಬರಹಗಾರ ಒಳ್ಳೆಯ ಪುಸ್ತಕ ಬರೆಯುತ್ತಾನೆ. ಹೆಚ್ಚಿನವರು ಕೊಂಡು ಓದುವುದಿಲ್ಲ, ಒಂದು ವೇಳೆ ಕೊಂಡು ಓದಿ ಇಷ್ಟ ಆದರೂ ಆ ಲೇಖಕರಿಗೆ ಒಂದು ಮೆಚ್ಚುಗೆಯ ಪ್ರತಿಕ್ರಿಯೆ ಕಳುಹಿಸುವುದಿಲ್ಲ. ಒಬ್ಬ ಅಂಕಣಕಾರ ಪತ್ರಿಕೆಗೆ ನಿರಂತರವಾಗಿ ಒಳ್ಳೆಯ ಅಂಕಣ ಬರೆಯುತ್ತಿರುತ್ತಾರೆ. ಅಂಕಣಕ್ಕೆ ಎಷ್ಟೋ ಖಾಯಂ ಓದುಗರು ಇದ್ದರೂ, ಅಂಕಣಕಾರರಿಗೆ ಅಥವಾ ಪತ್ರಿಕೆಗೆ ಪತ್ರ ಬರೆದು ತಿಳಿಸುವವರು ಕಡಿಮೆಯೇ. ಮೆಚ್ಚುಗೆ ವ್ಯಕ್ತಪಡಿಸಿದರೆ ಕಷ್ಟಪಟ್ಟು ಅಂಕಣ ಬರೆದವರಿಗೆ ಮತ್ತೆ ಬರೆಯಲು ಪ್ರೋತ್ಸಾಹ ದೊರೆತಂತಾಗುತ್ತದೆ. ಕಚೇರಿಯಲ್ಲಿ ಜವಾಬ್ದಾರಿ ತೆಗೆದುಕೊಂಡು ಒಳ್ಳೆಯ ಕೆಲಸ ಮಾಡುತ್ತಿರುತ್ತಾರೆ. ಅಪ್ಪಿ ತಪ್ಪಿಯೂ ಬಾಸ್ ಆಗಲೀ ಇತರ ಸಹೋದ್ಯೋಗಿಗಳಾಗಲೀ ಆತನ ಬಗ್ಗೆ ಒಳ್ಳೆಯ ಮೆಚ್ಚುಗೆಯ ಮಾತನಾಡುವುದಿಲ್ಲ (ಎಲ್ಲಾ ಕಡೆ ಅಲ್ಲ). ಇದರಿಂದ ಒಳ್ಳೆಯ ಕೆಲಸ ಮಾಡುವವರಿಗೆ ಇನ್ನೂ ಹೆಚ್ಚಿನ ಕೆಲಸ ಮಾಡಲು ಉತ್ತೇಜನ ಸಿಗದಂತಾಗುತ್ತದೆ. ಹಾಗೆಯೇ ಯಾರಲ್ಲಾದರೂ ಹಾಡು, ನೃತ್ಯ, ನಟನೆ, ಕ್ರೀಡೆ, ಓದು, ಹೀಗೆ ವಿವಿಧ ಪ್ರತಿಭೆ ಇದ್ದರೆ ಒಳ್ಳೆಯ ಮೆಚ್ಚುಗೆಯ ಮಾತನಾಡಿ, ಮತ್ತಷ್ಟು ಅವರ ಪ್ರತಿಭೆ ಹೊರತರುವ ಕೆಲಸ ಮಾಡಬೇಕು.

ಹಾಗಂತ ಎಲ್ಲಾ ಸಂದರ್ಭದಲ್ಲೂ ಎಲ್ಲರಿಗೂ ಬರೀ ಮೆಚ್ಚುಗೆ ವ್ಯಕ್ತಪಡಿಸಬೇಕಂತೇನಿಲ್ಲ.ಅವರು ತಮ್ಮ ಕೆಲಸದಲ್ಲಿ ಅಥವಾ ತಮಗಿರುವ ಪ್ರತಿಭೆಯಲ್ಲಾಗಲಿ ಇನ್ನೂ ಸುಧಾರಿಸಿಕೊಳ್ಳುವಂತಹ ಸಕಾರಾತ್ಮಕ ಸಲಹೆಗಳನ್ನೂ ನೀಡಬಹುದು. ಅದು ಬಿಟ್ಟು ಅಸೂಯೆಯಿಂದಲೋ, ಉದಾಸೀನದಿಂದಲೋ ಅಥವಾ ಇನ್ಯಾವುದೋ ಕಾರಣದಿಂದ ಯಾವುದಕ್ಕೂ ಪ್ರತಿಕ್ರಿಯಿಸದೆ ಸುಮ್ಮನಿರುವ ಅನೇಕರನ್ನು ನಾವು ನೋಡುತ್ತಿರುತ್ತೇವೆ.

ಒಳ್ಳೆಯ ಪ್ರತಿಭಾವಂತರನ್ನು, ಕೆಲಸ ಮಾಡುವವರನ್ನು ಒಳ್ಳೆಯ ಮನಸ್ಸಿನಿಂದ ಉತ್ತೇಜನ ನೀಡುವ, ಹುರಿದುಂಬಿಸುವ ಕೆಲಸ ಎಲ್ಲಾ ಕಡೆ ಆಗಬೇಕಿದೆ.ಇದು ಉತ್ತಮ ಸಮಾಜ ನಿರ್ಮಾಣ ಆಗುವುದಕ್ಕೂ ಸಹಕಾರಿಯಾಗುತ್ತದೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com*

ಮೈಸೂರು ಮಿತ್ರ

ಗುರುವಾರ 1 ಮೇ 2025

ಮೈಸೂರಲ್ಲಿ ಬಸವ ಜಯಂತಿ ಆಚರಣೆ

# ಮಾನವ ಕುಲಕ್ಕೆ ಸಮಾನತೆ ಸಂದೇಶ ಸಾರಿದವರು ಬಸವಣ್ಣ

## ಶಾಸಕ ತನ್ವೀರ್ ಸೇಠ್ ಅಭಿಮತ

ಮೈಸೂರು, ಏ.30(ಎಂಟಿವೈ)– ಬಸವಣ್ಣನವರ ವಚನಗಳು ಸರ್ವಕಾಲಕ್ಕೂ ಪ್ರಸ್ತುತವಾಗಿದ್ದು, ವಚನಗಳ ಸಾರಾಂಶವನ್ನು ಅರ್ಥೈಸಿಕೊಂಡು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಮಾನತೆಯ ಸಮಾಜ ನಿರ್ಮಾಣವಾಗುತ್ತದೆ ಎಂದು ಶಾಸಕ ತನ್ವೀರ್ ಸೇಠ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಬುಧವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬಸವ ಜಯಂತಿ ಆಚರಣ ಸಮಿತಿ ವತಿಯಿಂದ ಆಯೋಜಿಸಿದ್ದ 'ಬಸವ ಜಯಂತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣನವರು 12ನೇ ಶತಮಾನದಲ್ಲಿ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು. ಸಮಾಜದಲ್ಲಿದ್ದ ಅಸಮಾನತೆ ಹೋಗಲಾಡಿಸಿ, ಜಾತಿಬೇಧ ತೊಡೆದು ಹಾಕುವ ನಿಟ್ಟಿನಲ್ಲಿ ಶ್ರಮಿಸಿದರು. ಎಲ್ಲಾ ಸಮುದಾಯವನ್ನು ಸಮಾನವಾಗಿ ಕಾಣುವ ಮೂಲಕ ಬಸವಣ್ಣ ಮಾನವಕುಲಕ್ಕೆ ಸಮಾನತೆಯ ಸಂದೇಶ ಸಾರಿ, ಮಾರ್ಗದರ್ಶನ ನೀಡಿದ್ದಾರೆ ಎಂದರು.

ಬಸವಣ್ಣನವರ ಜಯಂತಿಯನ್ನು ಆಚರಿಸಿದರಷ್ಟೇ ಸಾಲದು, ಅವರ ತತ್ವ ಸಂದೇಶವನ್ನು ಜೀವನದಲ್ಲಿ ನಾವೆಲ್ಲರೂ ಅಳವಡಿಸಿಕೊಳ್ಳಲೇಬೇಕು. ಬಸವಣ್ಣನವರಂತಹ ಮಹಾನ್ ಆದರ್ಶ ಪುರುಷರು ನೀಡಿದ ಮಾರ್ಗದರ್ಶನ ಅತ್ಯಂತ ಮಹತ್ವದ್ದಾಗಿದೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುವ ಮೂಲಕ ಸಮಾಜದಲ್ಲಿನ ಮೌಢ್ಯ ತೊಡೆದು ಹಾಕಲು ಎಲ್ಲರೂ ಪಣ ತೊಡಬೇಕು. ದಾಸರು, ಶರಣರು ನಮಗೆ ನೀಡಿರುವ ಸಂದೇಶ ಪಾಲಿಸಬೇಕಾಗಿರುವುದು ನಮ್ಮ ಕರ್ತವ್ಯ. ಬಸವಾದಿ ಶರಣರ ಸಂದೇಶಕ್ಕೆ ಮನ್ನಣೆ ನೀಡಿದಾಗ ಸಮಾಜದಲ್ಲಿ ಮೇಲು–ಕೀಳೆಂಬ ಬೇಧಭಾವ ಮೂಡುವುದಿಲ್ಲ. ಬಸವಣ್ಣನವರ ವಚನಗಳ ಸಾರಾಂಶವನ್ನು ಅರಿಯಬೇಕು. 'ಇವ ಯಾರವಾ, ಇವ ಯಾರವ, ಇವ ನಮ್ಮವ, ನಮ್ಮವ' ಎನ್ನುವ ಸಾಲು ವಚನಕ್ಕೆ ಮಾತ್ರ ಸೀಮಿತವಾಗದೆ, ಅದು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದ ಅವರು, ಸಮಾಜದ ಸುಧಾರಣೆಗಾಗಿ ಶ್ರಮಿಸಿದ ಶರಣರು, ಸಂತರು, ಸೂಫಿಗಳ ತತ್ವಾದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳದೆ ಜಯಂತಿ ಆಚರಣೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ ಎಂದು ವಿಷಾದಿಸಿದರು.



ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ತನ್ವೀರ್ ಸೇಠ್ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಬಸವಣ್ಣನವರು ಶೋಷಣೆಯ ವಿರುದ್ಧ ಧ್ವನಿ ಎತ್ತಿ, ಸುಧಾರಣೆ ತರುವ ಪ್ರಯತ್ನ ಮಾಡಿದರು. ಸ್ವಂತ ಸಹೋದರಿಗೆ ಲಿಂಗ ಧಾರಣೆ ಮಾಡಿಸುವ ಮೂಲಕ ಸಮಾಜದಲ್ಲಿ ಸಮಾನತೆಗೆ ಪ್ರಯತ್ನಿಸಿದರು. ಸಮಾಜದಲ್ಲಿರುವ ಅಂಕುಡೊಂಕನ್ನು ತಿದ್ದುವ ನಿಟ್ಟಿನಲ್ಲಿ ಸರಳ ಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ ಕನ್ನಡದಲ್ಲಿ ವಚನ ರಚಿಸಿದರು. ಅವರ ವಚನಗಳು ಎಲ್ಲರಿಗೂ ತಲುಪಿತು. ಅದರಿಂದ ಕೆಲ ಪರಿಣಾಮಕಾರಿ ಸುಧಾರಣೆಗಳಾದವು. ಬಸವಣ್ಣನವರು ವಚನಗಳು ನಮಗೆ ಅನೇಕ ಸಂದರ್ಭದಲ್ಲಿ ಪ್ರೇರಣೆ ನೀಡುತ್ತದೆ ಎಂದು ಅಭಿಪ್ರಾಯಪಟ್ಟರು.

ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಮಾತನಾಡಿ, ಬಸವಣ್ಣನವರು ಚಿಕ್ಕ ವಯಸ್ಸಿನಲ್ಲಿಯೇ ಜಾತಿ ವ್ಯವಸ್ಥೆ, ಅಸಮಾನತೆ, ಲಿಂಗ ತಾರತಮ್ಯದ ವಿರುದ್ಧ ಧ್ವನಿ ಎತ್ತಿ ಹೋರಾಡಿದರು. ಜಾತಿ ಪದ್ಧತಿಯನ್ನು ತೊಲಗಿಸಿ, ಸಮ ಸಮಾಜ ನಿರ್ಮಾಣ ಮಾಡುವ ದೃಢ ನಿರ್ಧಾರವನ್ನು ಕೈಗೊಂಡಿದ್ದರು. ಆಧುನಿಕ ಕಾಲದಲ್ಲಿ ಕಾನೂನು ಇದ್ದರೂ ಅಂತರ್ಜಾತಿ ವಿವಾಹವಾಗುವುದು ಕಷ್ಟ. ಆದರೆ ಬಸವಣ್ಣ 850 ವರ್ಷಗಳ ಹಿಂದೆಯೇ ದಲಿತ ಸಮುದಾಯದ ಅರಳಯ್ಯ ಮತ್ತು ಬ್ರಾಹ್ಮಣ ಸಮುದಾಯದ ಮಧುವರಸನ ಮಕ್ಕಳಿಗೆ ವಿವಾಹ ಮಾಡುವ ಮೂಲಕ ಸಂಚಲನ ಸೃಷ್ಟಿಸಿದ್ದರು. ಬಸವಣ್ಣನವರ ಕ್ರಾಂತಿಯನ್ನು ಅವಲೋಕಿಸಿದರೆ ರೋಮಾಂಚನವಾಗುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಬಸವಣ್ಣ ಅವರನ್ನು ಜಗಜ್ಯೋತಿ ಎಂದು ಕರೆಯುತ್ತೇವೆ. ವಿದ್ಯಾರ್ಥಿಗಳಿಗೆ ಅವರ ಬಗ್ಗೆ ಹೆಚ್ಚಿನ ಮಾಹಿತಿ ಒದಗಿಸಲು ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಅವರ ಆದರ್ಶ, ಚಿಂತನೆ ಮಹತ್ವದ್ದಾಗಿದ್ದು, ನಮ್ಮ ಏಳಿಗೆಗೆ ಸಹಕಾರಿಯಾಗಿವೆ. ನಮ್ಮ ಜೀವನದಲ್ಲಿ ಸಾಧನೆ ಮಾಡಲು ಬಸವಣ್ಣನವರ ಆದರ್ಶ ಪಾಲನೆ ಅಗತ್ಯ ಎಂದರು.

**ಮಾಲಾರ್ಪಣೆ:** ಇದಕ್ಕೂ ಮುನ್ನ ಗನ್‌ಹೌಸ್ ಸಮೀಪವಿರುವ ಬಸವಣ್ಣನವರ ಪ್ರತಿಮೆಗೆ ಜಿಲ್ಲಾಡಳಿತದ ವತಿಯಿಂದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿ.ಪಂ ಸಿಇಓ ಯುಕೇಶ್, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಎಸ್ಪಿ ಡಾ.ವಿಷ್ಣುವರ್ಧನ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಹಾಗೂ ಇನ್ನಿತರರು ಮಾಲಾರ್ಪಣೆ ಮಾಡಿದರು. ಈ ವೇಳೆ ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್. ಶ್ರೀವತ್ಸ, ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಮುಖಂಡರು ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಡಾ. ರಾಜಶೇಖರ ಜಮದಂಡಿ, ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದನಂದಯ್ಯ, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

## ಬಸವಾದಿ ಶರಣರ ಚಿಂತನೆ ವಿಶ್ವವ್ಯಾಪ್ತಿಯಾಗಿದೆ

**ಸಾಹಿತಿ ಡಾ.ರಾಜಶೇಖರ ಜಮದಂಡಿ**

ಮೈಸೂರು, ಏ.30(ಎಂಟಿವೈ)– ಬಸವಾದಿ ಶರಣರ ಚಿಂತನೆ, ತತ್ವಾದರ್ಶಗಳು ಸರ್ವಕಾಲಿಕದ್ದಾಗಿದ್ದು, ವಿಶ್ವ ವ್ಯಾಪಿಯೂ ಆಗಿದೆ ಎಂದು ಸಾಹಿತಿ ಡಾ.ರಾಜಶೇಖರ ಜಮದಂಡಿ ಅಭಿಪ್ರಾಯಪಟ್ಟಿದ್ದಾರೆ.


ಮೈಸೂರಿನ ಕಲಾಮಂದಿರಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು, ಬಸವಣ್ಣನವರ ಚಿಂತನೆಗಳು ಸಾರ್ವಕಾಲಿಕ ಹಾಗೂ ದೂರದೃಷ್ಟಿಯುಳ್ಳದ್ದಾಗಿದೆ. ಬಸವಾದಿ ಶರಣರದ ಚಿಂತನೆಗಳು, ತತ್ವಗಳು ಕೇವಲ ಒಂದು ವರ್ಗಕ್ಕೆ, ಒಂದು ಧರ್ಮಕ್ಕೆ ಹಾಗೂ ಒಂದು ದೇಶಕ್ಕೆ ಸೀಮಿತವಾಗಿಲ್ಲ. ವಿಶ್ವದ ಪ್ರತಿಯೊಬ್ಬ ಮಾನವನೂ ಸಹ ಉದ್ಧಾರವಾಗಬೇಕೆಂಬ ಅವರ ಆಲೋಚನೆಗಳು ಇಂದಿಗೂ ಪ್ರಸ್ತುತವಾಗಿದೆ. ಹಾಗಾಗಿ ಬಸವಣ್ಣ ಅವರು ಸಕಲ ಜೀವರಾಶಿಗಳಿಗೆ ಲೇಸನ್ನೇ ಬಯಸುವೆ ಎಂದು ಹೇಳಿದ್ದಾರೆ. ಬಸವಣ್ಣನವರ ಕಾಲದಲ್ಲಿ ನೆನಪಾಗುವ ಎರಡು ಪ್ರಮುಖ ಅಂಶಗಳೆಂದರೆ ಕಾಯಕ ಮತ್ತು ದಾಸೋಹ ಎಂದು ತಿಳಿಸಿದರು.

ಬಸವಣ್ಣನವರ ವಿಚಾರಗಳು, ಆಚರಣೆಗಳು ನಾಲ್ಕು ದಿಕ್ಕುಗಳಿಗೆ ಪಸರಿಸಿದೆ. ಕಾಯಕದಲ್ಲಿ ಯಾವುದೇ ರೀತಿಯ ಮೇಲು, ಕೀಳು ಇಲ್ಲ. ದಾಸೋಹವೂ ಕೂಡ ಪರಸ್ಪರ ನೀಡುವ, ತೆಗೆದುಕೊಳ್ಳುವ ಸಮಾನತೆಯ ಸಂಕೇತವಾಗಿದೆ. ಬಸವಣ್ಣನವರ ದೃಷ್ಟಿಯಲ್ಲಿ ಕೆಲಸ ಎನ್ನುವುದು ಕಾಯಕವಾದರೆ, ದಾನ ಎನ್ನುವುದು ದಾಸೋಹವಾಯಿತು. ಕಾಯಕ ಮತ್ತು ದಾಸೋಹಗಳು ಬಹಳ ವಿಶಾಲದಿಂದ ಕೂಡಿದೆ ಎಂದು ಹೇಳಿದರು.

ಬಸವಣ್ಣನವರ ಆಲೋಚನೆಗಳಿಗೆ, ಚಿಂತನೆಗಳಿಂದ ಪ್ರಭಾವಿತರಾದವರು ಅನೇಕರು. ಕರ್ನಾಟಕವಲ್ಲದೆ ದೇಶ, ವಿದೇಶಗಳಿಂದ ಬಸವಣ್ಣನವರ ಕಲ್ಯಾಣನಗರಕ್ಕೆ ಬಂದು ಹೋಗುತ್ತಿದ್ದರು. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ, ಗಾಂಧಾರದಿಂದ ಬ್ರಹ್ಮದೇಶದವರೆಗೆ ಅನೇಕ ಶರಣ, ಶರಣೆಯರು ಕಲ್ಯಾಣನಗರಕ್ಕೆ ಆಗಮಿಸುತ್ತಿದ್ದರು. ಇವರನ್ನೆ ನಾವು 770 ಅಮರಗಣಂಗಳು ಎಂದು ಕರೆಯಲಾಗುವುದು. ಇವರಲ್ಲಿ ಯಾವುದೇ ವರ್ಣಬೇದ, ಲಿಂಗಬೇಧ, ಆಶ್ರಮ ಬೇಧ ಹಾಗೂ ಜಾತಿ ಬೇಧಗಳೆನ್ನದೆ ಇಷ್ಟಲಿಂಗದ ಮೂಲಕ ಅರಿವಿನ ಕುರುಹನ್ನು ನೀಡಿ ಸಮಾನತೆಯನ್ನು ತಂದವರು ಎಂದರು.

ಬಸವಣ್ಣನವರ ಚಿಂತನೆಗಳು ಬಹಳ ಮುಖ್ಯವಾಗಿ ಮಾನವ ಕುಲವನ್ನು ಒಗ್ಗೂಡಿಸುವ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಬದುಕಿನ ಹೊಸ ಹೊಳಪನ್ನು, ಆಯಾಮಗಳನ್ನು ತಿಳಿಯಪಡಿಸುವ ಆಕಾಂಕ್ಷೆ ಯಿಂದ ಕೂಡಿದ್ದವು. ಅದರಲ್ಲಿ ಅರಿವು ಮತ್ತು ಆಚರಣೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಜಾತಿ ಪದ್ಧತಿಯನ್ನು ಕಟುವಾಗಿ ಟೀಕಿಸಿದ ಅವರು, ಮಾನವನ ಅಂತಸ್ತು ಅವನ ಯೋಗ್ಯತೆಯಿಂದ ನಿರ್ಧಾರವಾಗುವುದೇ ಹೊರತು ಜಾತಿಯಿಂದಲ್ಲ. ಇದನ್ನು ಹೋಗಲಾಡಿಸಲು ಆ ಕಾಲದಲ್ಲೇ ಬಸವಣ್ಣನವರು ಅಂತರ್ಜಾತಿ ವಿವಾಹ, ಸಹಬೋಜನವನ್ನು ಏರ್ಪಡಿಸಿದ್ದರು ಎಂದು ತಿಳಿಸಿದರು.

ಹಿಂಸೆಯನ್ನು ವಿರೋಧಿಸಿ ದಯೆಯೇ ಧರ್ಮದ ಮೂಲವಯ್ಯ ದಯೆ ಇರಬೇಕು ಸಕಲ ಪ್ರಾಣಿಗಳ ಮೇಲೆ ಎಂದು ಹೇಳಿ ಅನೇಕ ಡಂಬಾಚಾರಗಳನ್ನು ಬಯಲಿಗೆಳೆದರು. ವ್ಯಕ್ತಿಗೆ ಸಂಪತ್ತಿನ ಸಂಗ್ರಹಣೆ ಸಲ್ಲದು ಎಂದು ಬಸವಣ್ಣ ಹಿಂದೆಯೇ ಹೇಳಿದ್ದಾರೆ. ಸಂಪತ್ತು ಎನ್ನುವುದು ಒಬ್ಬರ ಸ್ವತ್ತಲ್ಲ ಅದು ಸಮಾಜದ ಸ್ವತ್ತು. ಅದನ್ನು ಒಂದೆ ಕಡೆ ಕೇಂದ್ರಿಕರಿಸುವುದು ಸರಿಯಲ್ಲ ಎಂದು ಹೇಳಿದ್ದಾರೆ ಎಂದು ತಿಳಿಸಿದರು.



ಮೈಸೂರಿನ ಗನ್‌ಹೌಸ್ ವೃತ್ತದಲ್ಲಿರುವ ಬಸವಣ್ಣನವರ ಪ್ರತಿಮೆಗೆ ಜಿಲ್ಲಾಡಳಿತದ ಪರವಾಗಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿ.ಪಂ ಸಿಇಓ ಯುಕೇಶ್, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಎಸ್ಪಿ ಡಾ.ವಿಷ್ಣುವರ್ಧನ್, ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿ, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಇನ್ನಿತರರು ಪುಷ್ಪಾರ್ಚನೆ ಮಾಡಿದರು.

## ಬಸವೇಶ್ವರರಿಗೆ ಮಾಲಾರ್ಪಣೆ



ಬಸವ ಜಯಂತಿ ಪ್ರಯುಕ್ತ ಮೈಸೂರಿನ ಗನ್‌ಹೌಸ್ ಬಳಿ ಇರುವ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಲಾಯಿತು. ಈ ವೇಳೆ ಶಾಸಕ ಕೆ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಶ್ರೀಧರ್, ಮಂಚೇಗೌಡನ ಕೊಪ್ಪಲು ರವಿ, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹ್ಮದ್ ಫಾರೂಖ್, ಕೋಚನಹಳ್ಳಿ ಶಿವರಾಜು, ರವಿಶಂಕರ್, ವಿನಯ್ ಕುಮಾರ್.ಜಿ, ರಾಕೇಶ್, ಪಂಪಾಪತಿ, ಹರೀಶ್ ಮೊಗಣ್ಣ, ಕಾರ್ಮಿಕ ಸಂಘಟನಾ ಅಧ್ಯಕ್ಷ ಸಿದ್ದರಾಜು, ಸೇವಾದಳ ಮೋಹನ್ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಬೀರಿಹುಂಡಿ ಮಹಾಶಕ್ತಿ ಕೇಂದ್ರ ವತಿಯಿಂದ ಬಸವ ಜಯಂತಿ ಆಚರಿಸಲಾಯಿತು. ಇದೇ ವೇಳೆ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಚಾಮುಂಡೇಶ್ವರಿ ಕ್ಷೇತ್ರದ ಗೆಜ್ಜಗಳ್ಳಿ ಮಹೇಶ್, ಸ್ವಾಮಿ, ಮಹದೇವಸ್ವಾಮಿ, ಚಾಮುಂಡೇಶ್ವರಿ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಚಿಕ್ಕಕಾನ್ಯ ಶಿವು, ನಂಜುಂಡ ಸ್ವಾಮಿ, ಸುನಿಲ್, ರಾಘವೇಂದ್ರ ಪ್ರದೀಪ್, ಸಾಲುಂಡಿ ಯೋಗೇಶ್, ಚಂದ್ರು, ಯೋಗ ಮಾಸ್ಟರ್ ಶ್ರೀನಿವಾಸ್, ಚೆಲುರಾಜು ಮತ್ತಿತರರು ಉಪಸ್ಥಿತರಿದ್ದರು.





ಮೈಸೂರಿನ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಬಸವ ಜಯಂತಿ ಆಚರಿಸಲಾಯಿತು. ಬಳಗದ ಅಧ್ಯಕ್ಷ ಸಂದೀಪ್ ಚಂದ್ರಶೇಖರ್, ಮುಖಂಡರಾದ ಅಂಬಳೆ ಶಿವಣ್ಣ, ಕೆ.ಆರ್. ಬ್ಯಾಂಕ್ ಭಾಸ್ಕರ್, ಮಹೇಶ್ ಅರಸ್, ಶಿವಣ್ಣ, ಧರ್ಮೇಂದ್ರ, ಪ್ರಭು, ನಾಗಣ್ಣ, ಮಹದೇವಸ್ವಾಮಿ, ಚಂದ್ರಶೇಖರ್, ಪ್ರವೀಣ್, ತೀರ್ಥ, ಪಾಪಣ್ಣ, ಧನುಷ್, ರಾಕೇಶ್, ಭಾನು ಕುಮಾರ್, ಸುರೇಂದರ್, ರಮೇಶ್, ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು.



ಬಸವ ಜಯಂತಿ ಪ್ರಯುಕ್ತ ಚಾಮುಂಡಿಪುರಂ ವೃತ್ತದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಲಾಯಿತು. ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಮುಖಂಡರಾದ ಎಸ್.ಬಿ.ವಾಸು ದೇವಮೂರ್ತಿ, ಆರ್.ಎಸ್. ಸತ್ಯನಾರಾಯಣ, ಎಸ್.ಕೆ. ಜಗದೀಶ್, ಯೋಗೇಶ್ ಯಾದವ್, ನಾಗೇಂದ್ರ, ನಾಗರಾಜ್, ಮಂಜು, ರವಿ, ಹರೀಶ್, ಗಣೇಶ್ ಮತ್ತಿತರರು ಉಪಸ್ಥಿತರಿದ್ದರು.

## ಡಾ.ಅಂಬೇಡ್ಕರ್, ಬಸವೇಶ್ವರ ಜಯಂತಿ ಆಚರಣೆ



ಮೈಸೂರಿನ ಕುಂಬಾರಕೊಪ್ಪಲು ಅಂಬೇಡ್ಕರ್ ಬಡಾವಣೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಬಸವೇಶ್ವರರ ಜಯಂತಿ ಆಚರಿಸಲಾಯಿತು.

ಮೈಸೂರು, ಏ.30(ಎಂಕೆ)– ಮೈಸೂರಿನ ಕುಂಬಾರಕೊಪ್ಪಲು ಅಂಬೇಡ್ಕರ್ ಬಡಾವಣೆಯಲ್ಲಿ ಕರ್ನಾಟಕ ರಾಜ್ಯ ಭೀಮ್ ಸೇನೆ ಹಾಗೂ ಶ್ರೀ ಆದಿಶಕ್ತಿ ಕಾಳಿಕಾ ದೇವಿ ಸೇವಾ ಸಮಿತಿ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಹಾಗೂ ಬಸವೇಶ್ವರರ ಜಯಂತಿ ಆಚರಿಸಲಾಯಿತು.

ಅಂಬೇಡ್ಕರ್ ಅವರ ಪ್ರತಿಮೆಗೆ ಮಾರ್ಪಾಪಣೆ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, 800 ವರ್ಷಗಳ ಹಿಂದೆಯೇ ಸಮಾಜಕ್ಕೆ ಸಮಾನತೆಯ ಕ್ರಾಂತಿ ಸಂದೇಶದ ನೀಡಿದ ಬಸವಣ್ಣನವರ ಹಾಗೂ ಈ ದೇಶದ ಸರ್ವಜನಾಂಗವನ್ನು ಸಮಾನತೆಯೆಡೆಗೆ ತರಬೇಕು ಎಂದು ಪ್ರಾಮಾಣಿಕ ಪ್ರಯತ್ನ ಮಾಡಿದ ಡಾ.ಬಿ.ಆರ್. ಅಂಬೇಡ್ಕರ್ ಅವರ ಸ್ಮರಣೆ ಮತ್ತು ಆದರ್ಶ ಪಾಲನೆಯನ್ನು ಪ್ರತಿಯೊಬ್ಬರು ಮಾಡಬೇಕು ಎಂದರು.

ವಿಶ್ವಕ್ಕೆ ಶಿಕ್ಷಣದ ಮಹತ್ವದ ಸಾರಿದ ಅಂಬೇಡ್ಕರ್ ಅವರು, ಕಾರ್ಮಿಕರ ದುಡಿಮೆಗೆ ಸರಿಯಾದ ವೇತನ ಕೊಡಬೇಕು ಹಾಗೂ ಮಹಿಳೆಯರಿಗೂ ಸಮಾನ ಅವಕಾಶ ನೀಡಬೇಕು ಎಂದು ಪ್ರತಿಪಾದಿಸಿದರು. ಇವತ್ತು ಸಮಾಜದಲ್ಲಿ ಪುರುಷರಷ್ಟೇ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿಯೂ ಸಮಾನತೆ ಕಾಣುತ್ತಿದ್ದಾರೆ ಎಂದರೆ ಅದಕ್ಕೆ ಅಂಬೇಡ್ಕರ್ ಅವರು ನೀಡಿದ ಕೊಡುಗೆಯೇ ಕಾರಣ ಎಂದು ಸ್ಮರಿಸಿದರು. ಮುಖಂಡರಾದ ಕೆ.ವಿ.ಚೇತನ್, ಎಂ.ಪ್ರಕಾಶ್, ಕೆ.ಗಿರೀಶ, ಮಹದೇವು, ಕರ್ನಾಟಕ ರಾಜ್ಯ ಭೀಮ್ ಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಎಸ್. ಸರ್ವೇಶ್ ಮತ್ತಿತರರು ಉಪಸ್ಥಿತರಿದ್ದರು.



ರಾಮಾನುಜ ರಸ್ತೆ 9ನೇ ಕ್ರಾಸ್‌ನಲ್ಲಿ ಯುವ ಕಾಂಗ್ರೆಸ್‌ನ ಕಾರ್ಯದರ್ಶಿ ಮಲ್ಲೇಶ್ (ಮಲ್ಲ) ಅವರ ನೇತೃತ್ವದಲ್ಲಿ ಜಗಜ್ಯೋತಿ ಬಸವೇಶ್ವರರ ಜಯಂತಿ ನಡೆಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಕಾಂಗ್ರೆಸ್ ಮುಖಂಡ ಪ್ರತಿಧ್ವನಿ ಪ್ರಸಾದ್, ಆಶ್ರಯ ಸಮಿತಿ ಸದಸ್ಯ ಗುಣಶೇಖರ್, ಅಸಂಘಟಿತ ಕಾರ್ಮಿಕ ಘಟಕದ ಅಧ್ಯಕ್ಷ ವಿನಯ್, ಕಾಂಗ್ರೆಸ್‌ನ ಯುವ ಮುಖಂಡ ಹೇಮಂತ್ ಗೌಡ, ಲಖನ್, ಆಯೋಜಕರಾದ ಮಲ್ಲೇಶ್ ಮತ್ತಿತರರು ಉಪಸ್ಥಿತರಿದ್ದರು.



## ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಣೆ



ಕರ್ನಾಟಕ ರಾಜ್ಯ ಮುಕ್ತವಿವಿ ವತಿಯಿಂದ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಬಸವ ಜಯಂತಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿವಿಯ ಅಧ್ಯಯನ ಕೇಂದ್ರಗಳ ಡೀನ್ ಪ್ರೊ.ರಾಮನಾಥಂ ನಾಯ್ಡು, ಸಾಮಾನ್ಯ ವಿಭಾಗದ ಉಪಕುಲಸಚಿವ ಚಂದ್ರೇಶ್, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ, ಆಡಿಯೋ ಮತ್ತು ಸ್ಟೂಡಿಯೋ ವಿಭಾಗದ ಸಿದ್ದೇಗೌಡ, ಸಂಪನ್ಮೂಲ ವ್ಯಕ್ತಿ ಯು.ಎಂ.ಶರದ್ ರಾವ್, ಬಿ.ಗಣೇಶ ಕೆ.ಜಿ.ಕೊಪ್ಪಲು, ಪರೀಕ್ಷಾ ವಿಭಾಗದ ಸಕಲೇಶ್ ಕುಮಾರ್, ಇಂಜಿನಿಯರ್ ವಿಭಾಗದ ರವಿ ಹಾಗೂ ಐಎಎಸ್, ಕೆಎಎಸ್ ತರಬೇತಿ ಶಿಬಿರದ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.



ಬಸವ ಜಯಂತಿ ಅಂಗವಾಗಿ ಆಮ್ ಆದ್ಮಿ ಪಕ್ಷದ ನಗರ ಘಟಕದ ಪದಾಧಿಕಾರಿಗಳು ಗನ್‌ಹೌಸ್ ವೃತ್ತದ ಬಳಿ ಇರುವ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ನಗರ ಘಟಕದ ಅಧ್ಯಕ್ಷ ಸೋಮಶೇಖರ್, ಚಾಮರಾಜ ಕ್ಷೇತ್ರದ ಉಸ್ತುವಾರಿ ಸತೀಶ್, 51ನೇ ವಾರ್ಡ್‌ನ ಪ್ರಶಾಂತ್, 50ನೇ ವಾರ್ಡ್‌ನ ಹೇಮಂತ್, ಸಂಘಟನಾ ಕಾರ್ಯದರ್ಶಿ ಶಿವಕುಮಾರ್, ನಗರ ಕಾರ್ಯದರ್ಶಿ ಮಹದೇವ್ ಉಪಸ್ಥಿತರಿದ್ದರು.



ಜೆಡಿಎಸ್ ಪಕ್ಷದ ವತಿಯಿಂದ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಬಸವ ಜಯಂತಿ ಆಚರಿಸಲಾಯಿತು. ಮೈಸೂರು ನಗರ ಜೆ.ಡಿ.ಎಸ್. ಅಧ್ಯಕ್ಷ ಕೆ.ಟಿ. ಚೆಲುವೇಗೌಡ ಮಾಜಿ ನಗರ ಪಾಲಿಕೆ ಸದಸ್ಯ ಶಿವಣ್ಣ, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ, ಹಿರಿಯ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ, ಚಾಮರಾಜ ಕ್ಷೇತ್ರದ ಅಧ್ಯಕ್ಷ ಪಿ.ಮಂಜುನಾಥ್ ಉಪಸ್ಥಿತರಿದ್ದರು.

ಮೈಸೂರಿನ ಜೆಎಸ್‌ಎಸ್ ಬಡಾವಣೆ ಎರಡನೇ ಹಂತದಲ್ಲಿ ಬಸವ ಬಳಗಪೂರ್ವ ವಲಯ ಸಂಘದಿಂದ ಜಗಜ್ಯೋತಿ ಬಸವೇಶ್ವರ ಜಯಂತಿಯ ಅಂಗವಾಗಿ ನೂತನ ಕಚೇರಿ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿತ್ತು. ಪ್ರಧಾನ ಕಾರ್ಯದರ್ಶಿ ಡಿ ಲೋಹಿತ್, ಉಪಾಧ್ಯಕ್ಷರಾದ ಮಹದೇವಸ್ವಾಮಿ, ಶ್ರೀಕಂಠಮೂರ್ತಿ, ಸಂಘಟನಾ ಕಾರ್ಯದರ್ಶಿ, ಮಹೇಶ್, ಖಜಾಂಚಿ, ಮಹೇಶ್, ನಿರ್ದೇಶಕರಾದ ದೇವಪ್ಪಾಜಿ, ಮಲ್ಲಿಕಾರ್ಜುನ, ಮಹೇಶ್, ನಂದೀಶ್, ಆನಂದ ಮೂರ್ತಿ, ಗುರುಪ್ರಸಾದ್, ಸಿದ್ದಪ್ಪಸ್ವಾಮಿ, ಹೇಮಂತ್, ದೇವರಾಜು, ಗಜೇಂದ್ರ, ಹಾಗೂ ಕಾರ್ಯಕರ್ತರಾದ ನಾಗಣ್ಣ, ಚೇತನ್, ನಾಗೇಂದ್ರ, ಪ್ರಭುಸ್ವಾಮಿ, ಪುಟ್ಟಬುದ್ಧಿ, ಮಹಾದೇವಪ್ಪ, ರಾಜಶೇಖರ್, ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

# ‘ದಿವ್ಯಚೇತನ ಎಸ್.ಎಂ.ಕೃಷ್ಣ’ ಹೆಸರಿನಲ್ಲಿ 8 ದತ್ತಿ ನಿಧಿ ಸ್ಥಾಪನೆ



ಮಂಡ್ಯ,ಏ.30– ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ಮುತ್ಸದ್ದಿ ದಿ.ಎಸ್.ಎಂ.ಕೃಷ್ಣರವರು 1932ರ ಮೇ 1ರಂದು ಜನಿಸಿದ್ದು, ಅವರ 93ನೇ ಹುಟ್ಟುಹಬ್ಬದ ಸವಿನೆನಪಿನಲ್ಲಿ ಮಂಡ್ಯ ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ಅವರ ಅಭಿಮಾನಿಗಳು ಅವರ ಹೆಸರನ್ನು ಚಿರಸ್ಥಾಯಿಗೊಳಿಸಲು ಪ್ರತಿವರ್ಷ ವಿವಿಧ ಕ್ಷೇತ್ರದ ಸಾಹಿತಿಗಳು, ಗಣ್ಯರು, ರೈತರು, ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲು ದತ್ತಿನಿಧಿಗಳನ್ನು ಸ್ಥಾಪಿಸಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ಹುಟ್ಟಿ ಅದನ್ನು ಕರ್ಮಭೂಮಿಯಾಗಿಸಿಕೊಂಡು ರಾಜ್ಯ ಹಾಗೂ ರಾಷ್ಟ್ರದ ಹಲವು ಸಾಂವಿಧಾನಿಕ ಹುದ್ದೆಗಳನ್ನು ಅಲಂಕರಿಸಿದ್ದ ಎಸ್.ಎಂ.ಕೃಷ್ಣ ಒಬ್ಬ ಆದರ್ಶನೀಯ ಜನನಾಯಕರಾಗಿ ಬೆಳೆದವರು. ಬೆಂಗಳೂರನ್ನು ಐಟಿ ರಾಜಧಾನಿಯಾಗಿ ಮಾಡಿ ಪ್ರಪಂಚವನ್ನು ಬೆಂಗಳೂರು ಕಡೆಗೆ ತಿರುಗುವಂತೆ ಮಾಡಿ ಲಕ್ಷಾಂತರ ಉದ್ಯೋಗ ಸೃಷ್ಟಿಸಿ ರಾಜ್ಯದ ಅಭಿವೃದ್ಧಿಗೆ ಹೊಸ ಭಾಷ್ಯ ಬರೆದ ಶ್ರೀಯುತರ ಜೀವನ ಯುವ ಪೀಳಿಗೆಗೆ ದಾರಿದೀಪ.

ಎಸ್.ಎಂ.ಕೃಷ್ಣ ಅವರ ಸಾಧನೆ ಮತ್ತು ಅವರ ಬದುಕನ್ನು ಸದಾ ಹಸಿರಾಗಿಡುವ ಸದುದ್ದೇಶದಿಂದ ಅವರ ಹೆಸರಿನಲ್ಲಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಸೇರಿದಂತೆ ಹಲವು ಶಾಸಕರು ‘ದಿವ್ಯ ಚೇತನ ಎಸ್.ಎಂ.ಕೃಷ್ಣ ದತ್ತಿನಿಧಿ’ ಸ್ಥಾಪಿಸಿ ಅದನ್ನು ಈ ಕೆಳಕಂಡ ವಿಶ್ವವಿದ್ಯಾನಿಲಯಗಳು ಮತ್ತು ಪ್ರತಿಷ್ಠಿತ ಸಂಸ್ಥೆಗಳು ಪ್ರತಿ ವರ್ಷ ದತ್ತಿನಿಧಿಯಿಂದ ಬರುವ ಹಣದಿಂದ ತಲಾ ಒಬ್ಬರಿಗೆ ಪ್ರಶಸ್ತಿ ಅಥವಾ ಉತ್ತಮ ವಿದ್ಯಾರ್ಥಿಗಳಿಗೆ ಚಿನ್ನದ ಪದಕವನ್ನು ಎಸ್.ಎಂ.ಕೃಷ್ಣ ಅವರ ಹೆಸರಿನಲ್ಲಿ ನೀಡಲು ಕ್ರಮವಹಿಸಲಾಗಿದೆ.

**ದತ್ತಿ ನಿಧಿ ಸ್ಥಾಪಿಸಿರುವ ವಿವರಗಳು:** ಸಚಿವ ಎನ್.ಚಲುವರಾಯಸ್ವಾಮಿ, ಗಾಂಧಿ ಕೃಷಿ ವಿಶ್ವ ವಿದ್ಯಾನಿಲಯ (ಜಿಕೆವಿಕೆ) ಬೆಂಗಳೂರು ಪ್ರಗತಿಪರ ರೈತನಿಗೆ (ದತ್ತಿ ನಿಧಿ 5 ಲಕ್ಷ ರೂ.ಗಳು) ಹಾಗೂ ಕರ್ನಾಟಕ ಸಂಘ, ಮಂಡ್ಯ, ಸಮಾಜ ಸೇವೆಗಾಗಿ ಉತ್ತಮ ಪ್ರಶಸ್ತಿ (ದತ್ತಿ ನಿಧಿ 5 ಲಕ್ಷ ರೂ.ಗಳು), ಶಾಸಕ ಕೆ.ಎಂ.ಉದಯ್, ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಪ್ರಥಮ ಚಿನ್ನದ ಪದಕ ತೆಗೆದುಕೊಂಡ ಇಬ್ಬರು ವಿದ್ಯಾರ್ಥಿಗಳಿಗೆ ಚಿನ್ನದ ಪದಕ. (ದತ್ತಿ ನಿಧಿ 10 ಲಕ್ಷ ರೂ.), ಶಾಸಕ ಪಿ.ಎಂ.ನರೇಂದ್ರ ಸ್ವಾಮಿ, ಕಾನೂನು ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಸ್ಥಾನಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕ (ದತ್ತಿ ನಿಧಿ 5 ಲಕ್ಷ ರೂ.ಗಳು), ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ಚಿತ್ರಕಲಾ ಪರಿಷತ್ ವತಿಯಿಂದ ಪ್ರತಿ ವರ್ಷ ಒಬ್ಬರು ಉತ್ತಮ ಚಿತ್ರಕಲಾವಿದರಿಗೆ ನಗದು ಮತ್ತು ಪ್ರಶಸ್ತಿ ಪತ್ರ (ದತ್ತಿ ನಿಧಿ 5 ಲಕ್ಷ ರೂ.ಗಳು), ಶಾಸಕ ರವಿಕುಮಾರ್ ಗಣಿಗ, ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗೆ ಚಿನ್ನದ ಪದಕ (ದತ್ತಿ ನಿಧಿ 5 ಲಕ್ಷ ರೂ.ಗಳು).

ಸಮಾಜ ಸೇವಕ ಸ್ಟಾರ್ ಚಂದ್ರು (ವೆಂಕಟರಮಣೇಗೌಡ), ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರತಿ ವರ್ಷ ಒಬ್ಬ ಸಾಹಿತಿಗೆ ನಗದು, ಪ್ರಶಸ್ತಿ ಪತ್ರ ನೀಡಿ ಗೌರವಿಸುವುದು (ದತ್ತಿ ನಿಧಿ 5 ಲಕ್ಷ ರೂ.ಗಳು), ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ರಾಮಕೃಷ್ಣ ಆಶ್ರಮ ಮೈಸೂರು. ಇಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗೆ ಪ್ರತಿ ವರ್ಷ ಪ್ರಥಮ ಸ್ಥಾನ ಪಡೆದವರಿಗೆ ಚಿನ್ನದ ಪದಕ. (ದತ್ತಿ ನಿಧಿ 5 ಲಕ್ಷ ರೂ.ಗಳು).

ಎಸ್.ಎಂ.ಕೃಷ್ಣ ಹೆಸರಿನಲ್ಲಿ ಪ್ರತಿ ವರ್ಷ ಒಬ್ಬ ಪ್ರಗತಿಪರ ರೈತನಿಗೆ, ಸಮಾಜಮುಖಿ ಸೇವೆ ಸಲ್ಲಿಸಿದ ಒಬ್ಬರಿಗೆ, ಮೈಸೂರು ವಿಶ್ವವಿದ್ಯಾನಿಲಯ, ಕಾನೂನು ವಿಶ್ವವಿದ್ಯಾನಿಲಯ, ಚಿತ್ರಕಲಾ ಪರಿಷತ್, ಮಂಡ್ಯ ವಿಶ್ವವಿದ್ಯಾನಿಲಯ, ಕನ್ನಡ ಸಾಹಿತ್ಯ ಪರಿಷತ್, ರಾಮಕೃಷ್ಣ ಆಶ್ರಮ ವತಿಯಿಂದ ಶ್ರೇಯಾಂಕ ಹೆಸರಿನಲ್ಲಿ ಆಯಾ ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಲು ಸಂಬಂಧಪಟ್ಟ ಸಂಸ್ಥೆಗಳಿಗೆ ಡಿಡಿ ಮುಖಾಂತರ ಠೇವಣಿಯನ್ನು ಕಳುಹಿಸಿಕೊಡಲಾಗಿದೆ.

# ನಾರಾಯಣಪುರ ಪಿಎಸಿಎಸ್ ಜೆಡಿಎಸ್ ವಶಕ್ಕೆ

## ಅಧ್ಯಕ್ಷರಾಗಿ ಜೆ.ಎಂ.ಪುಟ್ಟಸ್ವಾಮಿ, ಉಪಾಧ್ಯಕ್ಷರಾಗಿ ವಿನೋದ ದೇವರಾಜ್ ಆಯ್ಕೆ

ಚಿನಕುರಳಿ, ಏ.30– ನಾರಾಯಣಪುರ ಪ್ರಾಥಮಿಕ ಸಹಕಾರ ಸಂಘದ ನೂತನ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಜೆ.ಎಂ.ಪುಟ್ಟಸ್ವಾಮಿ ಅಧ್ಯಕ್ಷರಾಗಿ, ಎನ್.ಎಸ್.ವಿನೋದ ದೇವರಾಜು ಉಪಾಧ್ಯಕ್ಷರಾಗಿ ಬುಧವಾರ ಅವಿರೋಧವಾಗಿ ಆಯ್ಕೆಯಾದರು.



ನೂತನ ಆಡಳಿತ ಮಂಡಳಿಯನ್ನು ಸಿ.ಎಸ್ ಪುಟ್ಟರಾಜು ಅಭಿನಂದಿಸಿದರು.

12 ಮಂದಿ ನಿರ್ದೇಶಕರ ಸಂಖ್ಯಾಬಲ ಹೊಂದಿರುವ ಸಹಕಾರ ಸಂಘದ ನೂತನ ಆಡಳಿತ ಮಂಡಳಿಯ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಬುಧವಾರ ಚುನಾವಣೆ ನಿಗದಿಯಾಗಿತ್ತು. ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಜೆ.ಎಂ.ಪುಟ್ಟಸ್ವಾಮಿ ಅಧ್ಯಕ್ಷ ಸ್ಥಾನಕ್ಕೆ ಹಾಗೂ ಎನ್.ಎಸ್.ವಿನೋದದೇವರಾಜು ಅವರು ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು.

ಇವರಿಬ್ಬರ ನಾಮಪತ್ರಗಳನ್ನು ಹೊರತುಪಡಿಸಿ ಉಳಿದ ಯಾವೊಬ್ಬ ನಿರ್ದೇಶಕರು ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಜೆ.ಎಂ.ಪುಟ್ಟಸ್ವಾಮಿ, ಉಪಾಧ್ಯಕ್ಷರಾಗಿ ಎನ್.ಎಸ್.ವಿನೋದ ದೇವರಾಜು ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಆರ್.ನಿರ್ಮಲ ಘೋಷಿಸಿದರು.

ನೂತನ ಅಧ್ಯಕ್ಷ ಜೆ.ಎಂ.ಪುಟ್ಟಸ್ವಾಮಿ, ಉಪಾಧ್ಯಕ್ಷೆ ಎನ್.ಎಸ್.ವಿನೋದ ದೇವರಾಜು ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹಾಗೂ ಎಲ್ಲಾ ಮುಖಂಡರು ಅಭಿನಂದಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ನಾರಾಯಣಪುರ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ನಿರ್ದೇಶಕರಾದ ಜೆ.ಎಂ.ಪುಟ್ಟಸ್ವಾಮಿ, ವಿನೋದ ದೇವರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಎಲ್ಲರು ಜತೆಗೂಡಿ ರೈತರ ಪ್ರಗತಿಗೆ ಕೆಲಸ ಮಾಡಬೇಕು, ಸಹಕಾರ ಸಂಘದಲ್ಲಿ ಯಾವುದೇ ರಾಜಕೀಯ ಮಾಡದೆ ಒಗ್ಗಟ್ಟಿನಿಂದ ಸಂಘದ ಪ್ರಗತಿಗೆ ಪೂರಕವಾಗಿ ಕೆಲಸಮಾಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ನಿರ್ದೇಶಕರಾದ ಎನ್.ಎಸ್.ಆನಂದ್, ಎಸ್.ಕೆ.ಚನ್ನಕೃಷ್ಣೇಗೌಡ, ಎನ್.ಎಸ್.ಯೋಗನರಸಿಂಹೇಗೌಡ, ಟಿ.ದೇವರಾಜು, ಕರಿಯಯ್ಯ, ನಂಜೇಗೌಡ, ಎನ್.ಜಿ.ಅಶೋಕ, ಶ್ರೀನಿವಾಸ್, ಜವರಯ್ಯ, ಕಾರ್ಯದರ್ಶಿ ಎಂ.ರಮೇಶ್, ಮುಖಂಡರಾದ ರಾಧಾಕೃಷ್ಣೇಗೌಡ, ನಿವೃತ್ತ ಪೊಲೀಸ್ ಅಧಿಕಾರಿ ಸ್ವಾಮೀಗೌಡ, ಕುಮಾರ್, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಸುಂದ್ರಣ್ಣ, ಕೆಂಪರಾಜು, ವೆಂಕಟೇಶ್, ಅನೀಲ್ ಕುಮಾರ್, ನಲ್ಲಹಳ್ಳಿ ವೆಂಕಟೇಶ್, ನಟರಾಜು, ನಾಗರಾಜು, ಶಿವಶಂಕರ್, ಚಂದ್ರಣ್ಣ, ಗಂಗಾಧರ್ ಮೂರ್ತಿ, ಮಾರ್ಮಹಳ್ಳಿ ರಾಮೇಗೌಡ, ನರಸಿಂಹೇಗೌಡ, ದೇಶೀಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಕುಮಾರ ಸೇರಿದಂತೆ ಮುಖಂಡರು ಹಾಜರಿದ್ದರು.

# ಸಮುದಾಯದ ಒಗ್ಗಟ್ಟನ್ನು ಎತ್ತಿ ಹಿಡಿಯುವಂಥ ಅಭಿವೃದ್ಧಿ ಕೆಲಸಗಳಾಗಬೇಕಿದೆ

## ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ



ಮಳವಳ್ಳಿ,ಏ.30– ಸಮುದಾಯದ ಒಗ್ಗಟ್ಟನ್ನು ಎತ್ತಿ ಹಿಡಿಯುವಂತಹ ಅಭಿವೃದ್ಧಿ ಕೆಲಸಗಳ ಅಗತ್ಯವಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹೇಳಿದರು.

ಪಟ್ಟಣದ ಶ್ರೀ ರಾಮ ಒಕ್ಕಲಿಗರ ಸೇವಾ ಸಂಘದ ವತಿಯಿಂದ ಶ್ರೀ ರಾಮ ಒಕ್ಕಲಿಗರ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಅವರು, ಈ ಕ್ಷೇತ್ರಕ್ಕೂ ನನಗೂ ಅವಿನಾಭಾವ ಸಂಬಂಧವಿದೆ. ಇಂದಿನ ಕಾರ್ಯಕ್ರಮಕ್ಕೆ ಹೆಚ್.ಡಿ.ಕುಮಾರಸ್ವಾಮಿ ಆಗಮಿಸಬೇಕಿತ್ತು. ಹಲವಾರು ಕಾರ್ಯಕ್ರಮಗಳ ಒತ್ತಡದಿಂದ ಬರಲು ಸಾಧ್ಯವಾಗಲಿಲ್ಲ ಎಂದರು.

ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ನಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಮಾಜಿ ಪ್ರಧಾನಿ ದೇವೇಗೌಡರು ಈ ದೇಶದ ಪ್ರಧಾನಿಯಾಗಿದ್ದಾಗ ರೈತರು, ಹಿಂದುಳಿದ ವರ್ಗಗಳು, ದಲಿತರ ಪರವಾದ ಹಲವಾರು ಕಾರ್ಯಕ್ರಮಗಳನ್ನು ನೀಡುವ ಮೂಲಕ ಡಾ.ಅಂಬೇಡ್ಕರ್‌ರವರ ಸಂವಿಧಾನದ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ಅವರು ಶ್ರೀರಾಮ ಸಮುದಾಯ ಭವನವನ್ನು ಉದ್ಘಾಟಿಸುವ ಮೂಲಕ ಈ ಕಾರ್ಯಕ್ರಮ ಇತಿಹಾಸದ ಪುಟದಲ್ಲಿ ಸೇರಲಿದೆ ಎಂದರು.

# ಶ್ರೀರಂಗಪಟ್ಟಣದಲ್ಲಿ ಭಾರಿ ಮಳೆ

## ಧರೆಗುರುಳಿದ ಮರ, ವಿದ್ಯುತ್ ಕಂಬ

ಶ್ರೀರಂಗಪಟ್ಟಣ,ಏ.30– ಮಂಗಳವಾರ ರಾತ್ರಿ ತಾಲೂಕಿನಾದ್ಯಂತ ಸುರಿದ ಬಿರುಗಾಳಿ ಸಹಿತ ಭಾರಿ ಮಳೆಗೆ ಬೃಹತ್ ಗಾತ್ರದ ಮರಗಳು, ವಿದ್ಯುತ್ ಕಂಬಗಳು ಸೇರಿದಂತೆ ಬಾಳೆ ತೋಟ ಸಂಪೂರ್ಣವಾಗಿ ಧರೆಗುರುಳಿರುವ ಘಟನೆ ನಡೆದಿದೆ.

ತಾಲೂಕಿನ ಕಾರೇಕುರ ಗೇಟ್ ಹಾಗೂ ಪಂಪ್‌ಹೌಸ್ ಬಳಿ ಪ್ರತ್ಯೇಕವಾಗಿ ಎರಡು ಬೃಹತ್ ಗಾತ್ರದ ನೀಲಗಿರಿ ಮರಗಳು ಮಂಗಳವಾರ ರಾತ್ರಿ 9 ಗಂಟೆ ಸಮಯದಲ್ಲಿ ಭಾರಿ ಬಿರುಗಾಳಿ ಸಹಿತ ಮಳೆಗೆ ನೆಲಕ್ಕುರುಳಿದ್ದು, ಇದರಿಂದ ಪಶ್ಚಿಮವಾಹಿನಿ–ಕೆಆರ್‌ಎಸ್ ರಸ್ತೆ ಸಂಚಾರ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿತ್ತು. ಮಾಹಿತಿ ತಿಳಿದ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ, ಹೆದ್ದಾರಿಯಲ್ಲಿ ಬಿದಿದ್ದ ಮರಗಳನ್ನು ತೆರವುಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

**ಬಾಳೆ ತೋಟ ನಾಶ:** ತಾಲೂಕಿನ ಅರಕೆರೆ ಗ್ರಾಮದ ಕೆ.ರಾಜು ಎಂಬುವವರಿಗೆ ಸೇರಿದ್ದ ಸುಮಾರು 2.5 ಎಕರೆಯಲ್ಲಿ ಬೆಳೆದಿದ್ದ ಬಾಳೆತೋಟ ಬಿರುಗಾಳಿಯಿಂದಾಗಿ ಸಂಪೂರ್ಣವಾಗಿ ನೆಲಕ್ಕುರುಳಿದೆ. ಇದರಿಂದ ಫಸಲು ಕೈಗೆ ಸಿಗುವ ವೇಳೆ ಇಂತಹ ಘಟನೆ ನಡೆದಿದ್ದು, ರೈತ ಕಂಗಾಲಾಗಿದ್ದಾರೆ. ಶೀಘ್ರ ಪ್ರಕೃತಿ ವಿಕೋಪದಡಿ ಸೂಕ್ತ ಪರಿಹಾರ ನೀಡುವಂತೆ ತಾಲೂಕು ಆಡಳಿತವನ್ನು ಒತ್ತಾಯಿಸಿದ್ದಾರೆ.



**ಹಾರಿದ ಕಲರ್ ಶೀಟ್:** ತಾಲೂಕಿನ ಮಹದೇವಪುರ ಗ್ರಾಮದ ಪುಟ್ಟಸ್ವಾಮಿ ಎಂಬುವವರ ಮನೆ ಮೇಲಿನ ಸೀಟ್‌ಗಳು ಸಂಪೂರ್ಣವಾಗಿ ಹಾರಿ ಹೋಗಿದ್ದು, ಪುಟ್ಟಸ್ವಾಮಿ ಕಂಗಾಲಾಗಿದ್ದಾರೆ.

ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ ಮಾತನಾಡಿ, ತಾಲೂಕಿನಾದ್ಯಂತ ಬಾರಿ ಮಳೆಯಿಂದಾಗಿ ರೈತರ ಬೆಳೆಗಳು ಸೇರಿದಂತೆ ಅನೇಕ ಮನೆಗಳಿಗೆ ಅನಾಹುತ ಸಂಭವಿಸಿರುವುದು ಕಂಡುಬಂದಿದೆ. ಹಾನಿಯಾಗಿರುವ ಬಗ್ಗೆ ಸೂಕ್ತ ಮಾಹಿತಿಯೊಂದಿಗೆ ಅರ್ಜಿ ನೀಡುವಂತೆ ತಿಳಿಸಲಾಗಿದೆ. ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಸೂಕ್ತ ಪರಿಹಾರ ನೀಡಲು ಕ್ರಮ ವಹಿಸಲಾಗುವುದು.

ಕೆಇಬಿ ಎಇಇ ಮಾತನಾಡಿ, ನಿನ್ನೆ ಸುರಿದ ಮಳೆಗೆ ಹಾಗೂ ಬಿರುಗಾಳಿಗೆ ತಾಲೂಕಿನಾದ್ಯಂತ ಅಂದಾಜಿನ ಪ್ರಕಾರ 60ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿದ್ದು ಅಂದಾಜು 30 ಲಕ್ಷಕ್ಕೂ ಹೆಚ್ಚು ಹಾನಿಯಾಗಿದೆ. ಮೇ 2 ರಂದು ಮುಖ್ಯಮಂತ್ರಿಗಳು ತಾಲೂಕಿನ ಅಲ್ಲಾ ಪಟ್ಟಣಕ್ಕೆ ಆಗಮಿಸುತ್ತಿರುವುದರಿಂದ ನಿನ್ನೆಯಿಂದ ತೀವ್ರಗತಿಯಲ್ಲಿ ದುರಸ್ತಿ ಕಾರ್ಯ ಕೈಗೊಂಡಿದ್ದೇವೆ ಎಂದು ‘ಮೈಸೂರು ಮಿತ್ರ’ನಿಗೆ ಪ್ರತಿಕ್ರಿಯೆ ನೀಡಿದರು.

## ಅಂಗನವಾಡಿಗೆ ನೇಮಕಾತಿ

**ಮಂಡ್ಯ:** ಮದ್ದೂರು ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿಯಿದ್ದ ಅಂಗನವಾಡಿ ಕಾರ್ಯಕರ್ತೆ, ಮಿನಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಹುದ್ದೆಗಳಿಗೆ ತಾತ್ಕಾಲಿಕವಾಗಿ ಆಯ್ಕೆಯಾಗಿರುವವರ ಪಟ್ಟಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಹಾಗೂ ಸಂಬಂಧಪಟ್ಟ ಗ್ರಾಪಂನಲ್ಲಿ ಪ್ರಕಟಿಸಲಾಗಿದೆ.

## ಸ್ವಾಮಯ್ಯ ನಿಧನ



**ಕೆ.ಆರ್.ಪೇಟೆ:** ತಾಲೂಕಿನ ಗಂಜಿಗೆರೆ ಗ್ರಾಮದ ಹಿರಿಯ ಮುಖಂಡರಾದ ಜವರಯ್ಯ ಅಲಿಯಾಸ್ ಸ್ವಾಮಯ್ಯ (70) ಮಂಗಳವಾರ ರಾತ್ರಿ ನಿಧನ ಹೊಂದಿದ್ದಾರೆ.

ಮೃತರು ಪತ್ನಿ ಸಣ್ಣಮ್ಮ, ಪುತ್ರರಾದ ವಕೀಲ ಜಿ.ಜೆ.ಲೋಕೇಶ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕುರುಬಹಳ್ಳಿ ಗ್ರಾಮದ ಬಳಿ ಇರುವ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

## ಉಮೇಶ್

**ಪಾಂಡವಪುರ:** ಪಟ್ಟಣದ ಶಾಂತಿನಗರದ ನಿವಾಸಿ ಉಮೇಶ್(50) ಹೃದಯಾಘಾತದಿಂದ ನಿಧನರಾದರು.



ಮೃತರು ಮೈಸೂರಿನ ಬಿಎಸ್‌ಎನ್‌ಎಲ್ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಮಂಗಳವಾರ ಮಧ್ಯಾಹ್ನ ಏಕಾಏಕಿ ಹೃದಯಾಘಾತ ಸಂಭವಿಸಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಮೃತರು ಪತ್ನಿ ಪುಷ್ಪ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶಾಂತಿನಗರದ ರುದ್ರಭೂಮಿಯಲ್ಲಿ ಬುಧವಾರ ನಡೆಯಿತು.

ಒಂದನೇ ಪುಟದಿಂದ

# ಜನಗಣತಿಯಲ್ಲಿ ಜಾತಿ ಗಣತಿ

ಶಿಫಾರಸು ಮಾಡಿವೆ. ಇದರ ಹೊರತಾಗಿಯೂ ಕಾಂಗ್ರೆಸ್ ಸಾಮಾಜಿಕ, ಆರ್ಥಿಕ ಮತ್ತು ಜಾತಿಗಣತಿ (SECC) ಎಂದು ಕರೆಯಲ್ಪಡುವ ಸಮೀಕ್ಷೆಯನ್ನು ನಡೆಸುವುದು ಸೂಕ್ತವೆಂದು ಭಾವಿಸಿದೆ ಎಂದು ವೈಷ್ಣವ್ ಹೇಳಿದರು.

**ಬಹುದಿನಗಳ ಬೇಡಿಕೆಯಾಗಿತ್ತು:** ಕೇಂದ್ರ ಸರ್ಕಾರ ಕೈಗೊಳ್ಳಲಿರುವ ಜನಗಣತಿಯಲ್ಲಿ ಜಾತಿ ಗಣತಿಯನ್ನೂ ಒಳಗೊಳ್ಳುವ ನಿರ್ಧಾರವು ಕಾಂಗ್ರೆಸ್‌ನ ಬಹುದಿನಗಳ ಬೇಡಿಕೆಯಾಗಿತ್ತು. ಇಂತಹ ಪ್ರಮುಖ ಬೇಡಿಕೆಯನ್ನು ಕೈಬಿಡುವುದಕ್ಕಿಂತ, ತಡವಾದರೂ ಕೈಗೊಳ್ಳುವುದೇ ಲೇಸು ಎಂದು ಕಾಂಗ್ರೆಸ್ ಹೇಳಿದೆ.

ಸರ್ಕಾರದ ನಿರ್ಧಾರಕ್ಕೆ ಪ್ರತಿಕ್ರಿಯೆ ನೀಡಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಸಾಮಾಜಿಕ ನ್ಯಾಯದಡಿ ಜಾತಿ ಗಣತಿ ನಡೆಸಬೇಕು ಎಂಬ ಒತ್ತಾಯವನ್ನು ಪಕ್ಷ ಮಾಡುತ್ತಲೇ ಬಂದಿದೆ. ಏ.9ರಂದು ಅಹಮದಾಬಾದ್‌ನಲ್ಲಿ ಪಕ್ಷ ಕೈಗೊಂಡ ಸಮಾವೇಶದಲ್ಲೂ ಈ ಕುರಿತು ಹಕ್ಕೊತ್ತಾಯ ಮಂಡಿಸಲಾಗಿತ್ತು ಎಂದಿದ್ದಾರೆ. ದೇಶವ್ಯಾಪಿ ಜಾತಿ ಗಣತಿ ನಡೆಸಬೇಕು ಎಂದು ಕಾಂಗ್ರೆಸ್ ಬೇಡಿಕೆ ಇಟ್ಟಿತ್ತು. ಬಿಹಾರ, ತೆಲಂಗಾಣ ಮತ್ತು ಕರ್ನಾಟಕದ ಚುನಾವಣೆಯಲ್ಲೂ ಈ ವಿಷಯವನ್ನು ಪ್ರಸ್ತಾಪಿಸಿತ್ತು. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ವಿಷಯ ಹಂಚಿಕೊಂಡಿರುವ ಜೈರಾಮ್ ರಮೇಶ್, 2023ರ ಏ. 16ರಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿಗೆ ಬರೆದ ಪತ್ರವನ್ನು ಹಂಚಿಕೊಂಡಿದ್ದಾರೆ. ವಿಳಂಬವಾಗಿರುವ ಜನಗಣತಿಯನ್ನು ಶೀಘ್ರದಲ್ಲಿ ನಡೆಸುವಂತೆ ಹಾಗೂ ಅದರೊಳಗೆ ಜಾತಿ ಗಣತಿಯನ್ನು ಅಳವಡಿಸಬೇಕು ಎಂದು ಆಗ್ರಹಿಸಿದ್ದರು. 2006ರ ಜ.20ರಂದು ಕಾಂಗ್ರೆಸ್ ಸರ್ಕಾರವು ಆರ್ಟಿಕಲ್ 15 (5) ಅಡಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜಾತಿಯ ಅಭ್ಯರ್ಥಿಗಳಿಗೆ ತಡಮಾಡದೆ ಮೀಸಲಾತಿ ನೀಡಬೇಕು. ಸಾಂವಿಧಾನಿಕವಾಗಿ ಖಾತ್ರಿಪಡಿಸಲಾದ ಸಾಮಾಜಿಕ ನ್ಯಾಯವನ್ನು ರಾಷ್ಟ್ರವ್ಯಾಪಿ ಜಾತಿ ಗಣತಿ ಮೂಲಕವೇ ಬಲಪಡಿಸಲು ಸಾಧ್ಯ ಎಂದು ಹೇಳಿದ್ದಾರೆ.

# ಕೇಂದ್ರದ ಜಾತಿ ಗಣತಿಗೆ ಸಿದ್ದರಾಮಯ್ಯ ಸ್ವಾಗತ

## ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆಗೂ ಆಗ್ರಹ

ಬೆಂಗಳೂರು, ಏ.30–ಜನಗಣತಿ ಜೊತೆಯಲ್ಲಿ ಜಾತಿ ಗಣತಿಯನ್ನೂ ನಡೆಸುವ ಕೇಂದ್ರ ಸರ್ಕಾರದ ತೀರ್ಮಾನವನ್ನು ನಮ್ಮ ಸರ್ಕಾರ ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ. ಇದೇ ಸಂದರ್ಭದಲ್ಲಿ ಜಾತಿ ಗಣತಿ ಜೊತೆ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನೂ ನಡೆಸಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಪಡಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಕರ್ನಾಟಕ ಸರ್ಕಾರ ನಡೆಸಿರುವ ಜಾತಿ ಆಧಾರಿತ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಒಂದು ಪರಿಪೂರ್ಣ ಮಾದರಿಯಾಗಿದ್ದು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯಾವುದೇ ಸಲಹೆ–ಸಹಕಾರ ನೀಡಲು ರಾಜ್ಯ ಸರ್ಕಾರ ಸಿದ್ಧ ಇದೆ ಎಂದಿದ್ದಾರೆ. ಕರ್ನಾಟಕದಲ್ಲಿ ನಾವು ಕೇವಲ ಜಾತಿ ಗಣತಿ ನಡೆಸದೆ ಅದರ ಜೊತೆ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆಯನ್ನು ನಡೆಸಿದ್ದೇವೆ. ಈ ದತ್ತಾಂಶಗಳ ಆಧಾರದಲ್ಲಿ ಈಗಿನ ಮೀಸಲಾತಿ ನೀತಿ ಪರಿಷ್ಕರಿಸಿ, ಅದರ ಮಿತಿಯನ್ನು ಹೆಚ್ಚಿಸುವ ಪ್ರಯತ್ನ ಕೂಡ ನಡೆದಿದೆ. ಜಾತಿ ಗಣತಿ ಜೊತೆಯಲ್ಲಿ ಈ ಪ್ರಕ್ರಿಯೆ ಯನ್ನೂ ಕೇಂದ್ರ ಸರ್ಕಾರ ಪೂರ್ಣಗೊಳಿಸಲಿದೆ ಎಂದು ನಂಬಿದ್ದೇನೆ.



ವೈಜ್ಞಾನಿಕವಾದ ಮೀಸಲಾತಿ ನೀತಿಯನ್ನು ರೂಪಿಸುವುದೇ ಜಾತಿ ಆಧಾರಿತ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮೂಲ ಉದ್ದೇಶವಾಗಿದೆ. ಪ್ರತಿ ಬಾರಿ ಮೀಸಲಾತಿಗೆ ಸಂಬಂಧಿಸಿದ ಪ್ರಕರಣಗಳು ವಿಚಾರಣೆಗೆ ಬಂದಾಗಲೆಲ್ಲ ಸುಪ್ರೀಂಕೋರ್ಟ್ ಇಂತಹದ್ದೊಂದು ಸಮೀಕ್ಷೆ ನಡೆಸುವ ಅಗತ್ಯವನ್ನು ಒತ್ತಿ ಹೇಳುತ್ತಾ ಬಂದಿದೆ ಎನ್ನುವುದನ್ನು ಗಮನಿಸಬೇಕಿದೆ ಎಂದಿದ್ದಾರೆ.

ಜಾತಿ ಗಣತಿ ಜೊತೆಯಲ್ಲಿ ಮೀಸಲಾತಿ ಮಿತಿ ಏರಿಕೆಯ ನಿರ್ಧಾರವನ್ನು ಸಂಪೂರ್ಣ ಬೆಂಬಲಿಸಿ ಅದನ್ನು ನಮ್ಮ ಪಕ್ಷದ ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ರೂಪಿಸಿ ದೇಶಾದ್ಯಂತ ಪ್ರಚಾರ ಮಾಡುತ್ತಾ ಬಂದ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿಯವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ ಎಂದರು.

**“ ಮುಂಬರುವ ಜನಗಣತಿ ಜೊತೆಯಲ್ಲಿಯೇ ಜಾತಿ ಗಣತಿಯನ್ನೂ ನಡೆಸುವ ಮಹತ್ವದ ನಿರ್ಧಾರವನ್ನು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೈಗೊಂಡಿರುವುದು ಐತಿಹಾಸಿಕ ಮತ್ತು ದೂರದೃಷ್ಟಿಯ ನಿರ್ಧಾರವಾಗಿದೆ. ಜಾತಿ ಗಣತಿಯು 1931ರ ನಂತರ ಇದೇ ಮೊದಲ ಬಾರಿಗೆ ನಡೆಯಲಿದೆ ಗಮನಾರ್ಹ. ಈ ಮಹತ್ವದ ಹೆಜ್ಜೆಯು ಭಾರತವು ಅಧಿಕೃತ, ವೈಜ್ಞಾನಿಕ ಮತ್ತು ಪಾರದರ್ಶಕವಾದ ಜಾತಿ ದತ್ತಾಂಶ ಹೊಂದಲಿದೆ. ಕೇವಲ ರಾಜಕೀಯಪ್ರೇರಿತ ರಾಜ್ಯ ಮಟ್ಟದ ಸಮೀಕ್ಷೆಗಳು ವಿಶ್ವಾಸಾರ್ಹತೆ, ಏಕರೂಪತೆ ಹೊಂದಿರುವುದಿಲ್ಲ. ಈ ನಿರ್ಣಾಯಕ, ದೂರದೃಷ್ಟಿಯ ನಿರ್ಧಾರಕ್ಕಾಗಿ ಪ್ರಧಾನಿ ಮೋದಿಯವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ನಿರ್ಧಾರವನ್ನು ನಾನು, ನಮ್ಮ ಪಕ್ಷ ಸ್ವಾಗತಿಸುತ್ತದೆ.**



–ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

# ಮೇ 4ರಂದು ರಾಜ್ಯದ 381 ಕೇಂದ್ರಗಳಲ್ಲಿ ನೀಟ್



ಬೆಂಗಳೂರು, ಏ. 30(ಕೆಎಂಶಿ)– ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) 2025ರ ನ್ಯಾಷನಲ್ ಎಲಿಜಬಿಲಿಟಿ ಕಂ ಎಂಟ್ರೆನ್ಸ್ ಟೆಸ್ಟ್ (ಎನ್‌ಇಇಟಿ–ನೀಟ್) ಮೇ 4 ರಂದು ಮಧ್ಯಾಹ್ನ 2ರಿಂದ ಸಂಜೆ 5 ರವರೆಗೆ ಕರ್ನಾಟಕದ ಒಟ್ಟು 381 ಕೇಂದ್ರಗಳಲ್ಲಿ ನಡೆಯಲಿದೆ.

ಒಟ್ಟು 1,49,000 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದು, ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಪ್ರವೇಶಾತಿ ಪತ್ರ, ಕಾಲೇಜಿನಿಂದ ನೀಡಲ್ಪಟ್ಟ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್, ಪಾನ್ ಕಾರ್ಡ್, ವಾಹನ ಚಾಲನಾ ಪರವಾನಗಿ ಅಥವಾ ಮತದಾರರ ಗುರುತಿನ ಚೀಟಿ ಇಲ್ಲವೇ ಇತರೆ ಯಾವುದೇ ಅಂಗೀಕೃತ ಗುರುತಿನ ಚೀಟಿಯೊಂದಿಗೆ ಒಂದು ಪೋಸ್ಟ್ ಕಾರ್ಡ್ ಮತ್ತು ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಕಡ್ಡಾಯವಾಗಿ ತರಬೇಕು. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನೇಮಿಸಿರುವ ಏಜೆನ್ಸಿಗಳಿಂದ ಬೆಳಗ್ಗೆ 11 ರಿಂದ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಲಿದೆ ಹಾಗೂ ನಿಯೋಜಿತ ಪೊಲೀಸ್ ಸಿಬ್ಬಂದಿ ವಿದ್ಯಾರ್ಥಿಗಳ ಸುರಕ್ಷತಾ ತಪಾಸಣೆ ನಡೆಸಲಿದೆ.

**ಅಕ್ರಮಕ್ಕೆ ಪೂರ್ಣ ಬ್ರೇಕ್:** ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯವಾಗಿದ್ದು, ಪ್ರವೇಶಾತಿ ಪತ್ರದಲ್ಲಿ ನೀಡಲಾಗಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಪೂರ್ಣ ತೋಳಿನ ಮೇಲಂಗಿ, ದೊಡ್ಡ ಬಟನ್ ಇರುವ ಶರ್ಟ್, ಪ್ಯಾಂಟ್, ಶೂ, ಸಾಕ್ಸ್, ಎತ್ತರದ ಚಪ್ಪಲಿಗಳು, ಕಿವಿಯೋಲೆ, ಬಳೆ, ಸರ, ಕಾಲ್ಗೆಜ್ಜೆ, ಮೂಗುತಿ, ಜಡೆ ಕ್ಲಿಪ್ ಸೇರಿದಂತೆ ಇತರೆ ಯಾವುದೇ ಮೆಟಲ್ ಉಪಕರಣಗಳನ್ನು ಧರಿಸುವಂತಿಲ್ಲ ಹಾಗೂ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳನ್ನು ತರುವಂತಿಲ್ಲ ಮತ್ತು ಧರಿಸುವಂತಿಲ್ಲ.

ಪ್ರವೇಶಾತಿ ರಿಜಿಸ್ಟ್ರೇಷನ್ ಪ್ರಕ್ರಿಯೆ ಪೂರ್ಣಗೊಳಿಸಿಕೊಂಡ ವಿದ್ಯಾರ್ಥಿಗಳು ತಮ್ಮ ರಿಜಿಸ್ಟರ್ ನಂಬರ್ ಇರುವ ಪರೀಕ್ಷಾ ಕೊಠಡಿಗೆ ನೇರವಾಗಿ ತೆರಳತಕ್ಕದ್ದು.

ಮಧ್ಯಾಹ್ನ 2 ರಿಂದ ಸಂಜೆ 5 ರವರೆಗೆ ಪರೀಕ್ಷೆ ನಡೆಯಲಿದ್ದು, ಪರೀಕ್ಷಾ ಅವಧಿಯಲ್ಲಿ ಪ್ರತಿ ಗಂಟೆಗೊಂದು ಬಾರಿ ಬೆಲ್ ಮೂಲಕ ಸೂಚನೆ ನೀಡಲಾಗುವುದು.

**ಸಕಲ ವ್ಯವಸ್ಥೆ:** ಪರೀಕ್ಷಾ ಕೇಂದ್ರಗಳಿಗೆ ನಿರಂತರ ವಿದ್ಯುತ್ ವ್ಯವಸ್ಥೆ, ಆರೋಗ್ಯ ಸಿಬ್ಬಂದಿ ಹಾಗೂ ತುರ್ತು ಸೇವೆಗಳ ನಿಯೋಜನೆ, ಪರೀಕ್ಷಾ ಕೇಂದ್ರಗಳ ಸ್ವಚ್ಛತೆ ಮತ್ತು ಪರೀಕ್ಷೆಗೆ ಹಾಜರಾಗುವ ದಿವ್ಯಾಂಗ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ವ್ಹೀಲ್ ಚೇರ್ ವ್ಯವಸ್ಥೆ ಹಾಗೂ ತುರ್ತು ಅಗ್ನಿಶಾಮಕ ವ್ಯವಸ್ಥೆಯನ್ನು ಜಿಲ್ಲಾಡಳಿತದಿಂದ ಮಾಡಲಾಗುತ್ತದೆ. ಪರೀಕ್ಷಾ ಕೇಂದ್ರಕ್ಕೆ ಮೊಬೈಲ್ ಜ್ಯಾಮರ್ ಅಳವಡಿಕೆ ಮತ್ತು ಫ್ರಿಸ್ಕಿಂಗ್ ಮಾಡುವ ಬಗ್ಗೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಖಚಿತಪಡಿಸಿಕೊಳ್ಳಲಿದ್ದಾರೆ.

**ನಿಷೇಧಾಜ್ಞೆ:** ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ ಜಾರಿಯಲ್ಲಿರುವುದಲ್ಲದೆ, ಪರೀಕ್ಷಾ ಕೇಂದ್ರಗಳಿಗೆ ನಿಯೋಜಿತ ಅಧಿಕಾರಿ ಅಥವಾ ಸಿಬ್ಬಂದಿ ಹೊರತುಪಡಿಸಿ, ಸಾರ್ವಜನಿಕರಿಗೆ ಪ್ರವೇಶ ಇರುವುದಿಲ್ಲ ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.

## ಮೇ 2 ಇಲ್ಲವೇ 3ರಂದು ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟ ಸಾಧ್ಯತೆ

ಬೆಂಗಳೂರು, ಏ.30– ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ನಡೆಸಿದ್ದ 2024–25ನೇ ಸಾಲಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶವು ಮೇ 2 ಇಲ್ಲವೇ 3ರಂದು ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟವಾಗುವ ಸಾಧ್ಯತೆ ಇದೆ. ಈ ಬಾರಿ 8 ಲಕ್ಷದಷ್ಟು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಮಕ್ಕಳು ಸೇರಿದಂತೆ ಪೋಷಕರು ಹಾಗೂ ಶಿಕ್ಷಕರು ಫಲಿತಾಂಶಕ್ಕಾಗಿ ಎದುರು ನೋಡುತ್ತಿದ್ದಾರೆ. ಆದರೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಫಲಿತಾಂಶ ದಿನಾಂಕದ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ತಿಳಿಸಿಲ್ಲ. ಈ ಬಾರಿ ಮಾರ್ಚ್ 21 ರಿಂದ ಏಪ್ರಿಲ್ 4ವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ನಡೆದಿದ್ದು, ಈಗಾಗಲೇ ಮೌಲ್ಯಮಾಪನ ಕೆಲಸಗಳು ಮುಕ್ತಾಯದ ಹಂತಕ್ಕೆ ಬಂದಿದೆ. ಬಾಕಿ ಉಳಿದಿರುವ ಕ್ರಮಗಳು ಮುಗಿದ ಕೂಡಲೇ ಫಲಿತಾಂಶ ಪ್ರಕಟವಾಗಲಿದೆ. ಒಟ್ಟು 2818 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿದ್ದು, 8 ಲಕ್ಷಕ್ಕೂ ಅಧಿಕ ಮಂದಿ ಪರೀಕ್ಷೆ ಬರೆದಿದ್ದರು. ಎಸ್‌ಎಸ್‌ಎಲ್‌ಸಿ ಎನ್ನುವುದು ವಿದ್ಯಾರ್ಥಿಗಳ ಪಾಲಿನ ಪ್ರಮುಖ ಘಟ್ಟವಾಗಿದ್ದು, ಹಲವರು ವಿದ್ಯಾರ್ಥಿಗಳು ರಿಸಲ್ಟ್ ಏನಾಗಿರಬಹುದು ಎಂದು ಕುತೂಹಲದಿಂದ ಫಲಿತಾಂಶಕ್ಕಾಗಿ ಎದುರು ನೋಡುತ್ತಿದ್ದಾರೆ.

## ಹೆಚ್.ಡಿ.ದೇವೇಗೌಡರಿಗೆ ಅಭಿನಂದನೆ...




ಕಾರ್ಯ ನಿಮಿತ್ತ ಮೈಸೂರಿನ ಆಗಮಿಸಿದ್ದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರನ್ನು ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ವಿಧಾನಪರಿಷತ್ ಸದಸ್ಯ ವಿವೇಕಾನಂದ, ಮಾಜಿ ಶಾಸಕರಾದ ಅಶ್ವಿನ್‌ಕುಮಾರ್, ಏಪಿಯಾಣಿಚ್ಚಣ ಮಾದೇವು, ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಕುಮಾರ ಇನ್ನಿತರರು ಉಪಸ್ಥಿತರಿದ್ದರು.

## ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ...



ಬಸವ ಜಯಂತಿ ಪ್ರಯುಕ್ತ ಮೈಸೂರಿನ ಗನ್‌ಹೌಸ್ ಬಳಿ ಇರುವ ಬಸವಣ್ಣನವರ ಪ್ರತಿಮೆಗೆ ಮಾಜಿ ಉಪ ಮೇಯರ್, ಮೈಸೂರು ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ, ಬಿಜೆಪಿ ಮುಖಂಡರಾದ ದೇವನೂರು ಪ್ರತಾಪ್, ಮುಳ್ಳೂರು ರೇಚಣ್ಣ, ಉದ್ಯಮಿ ಜಯಶಂಕರ್ ಇನ್ನಿತರರಿದ್ದಾರೆ.



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಬಸವ ಜಯಂತಿ ಪ್ರಯುಕ್ತ ಗನ್‌ಹೌಸ್ ಬಳಿ ಇರುವ ಬಸವಣ್ಣನವರ ಪ್ರತಿಮೆಗೆ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಮಾಲಾರ್ಪಣೆ ಮಾಡಿದರು. ಈ ವೇಳೆ ನಗರ ಕಾಂಗ್ರೆಸ್ ಕಾರ್ಯದರ್ಶಿ ಹರೀಶ್‌ರೆಡ್ಡಿ, ವಕೀಲರಾದ ಕೆ.ಎಸ್.ಅಂದಾನಿ, ಹುಯಿಲಾಳು ಬಿ.ಎಸ್.ರಾಜು, ತೋಷಿತ್ ರಾಮಸ್ವಾಮಿ ಇದ್ದರು.

# ಭಾರತದಿಂದ ದಾಳಿ

ಪಾಕಿಸ್ತಾನದ ವಿರುದ್ಧ ಮಿಲಿಟರಿ ಕಾರ್ಯಾಚರಣೆ ಕೈಗೊಳ್ಳಲು ಸಿದ್ಧತೆ ನಡೆಸುತ್ತಿದೆ ಎಂದು ಪಾಕಿಸ್ತಾನದ ಮಾಹಿತಿ ಸಚಿವ ಅತಾವುಲ್ಲಾ ತರಾರ್ ಹೇಳಿದ್ದಾರೆ. ಪಾಕಿಸ್ತಾನವು ಸ್ವತಃ ಭಯೋತ್ಪಾದನೆಯಿಂದ ಸಾಕಷ್ಟು ಕಷ್ಟ ಅನುಭವಿಸಿದೆ ಮತ್ತು ಭಯೋತ್ಪಾದನೆಯನ್ನು ಅದು ಯಾವುದೇ ರೂಪದಲ್ಲಿದ್ದರೂ ಖಂಡಿಸುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಪಹಲ್ಗಾಮ್ ದಾಳಿಬಗ್ಗೆ ತಟಸ್ಥ ತನಿಖಾ ಆಯೋಗ ನಡೆಸುವ ವಿಶ್ವಾಸಾರ್ಹ, ಪಾರದರ್ಶಕ ಮತ್ತು ಸ್ವತಂತ್ರ ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡುವ ಭರವಸೆಯನ್ನು ಭಾರತಕ್ಕೆ ಕೊಟ್ಟಿದ್ದೇವೆ. ಆದರೆ ಭಾರತವು ತನಿಖೆಯಿಂದ ತಪ್ಪಿಸಿಕೊಳ್ಳಲು, ಯುದ್ಧದ ಮಾರ್ಗವನ್ನು ಆರಿಸಿಕೊಂಡಿದೆ. ಭಾರತವು ಸೇನಾ ಕಾರ್ಯಾಚರಣೆ ನಡೆಸಿದರೆ, ಪಾಕಿಸ್ತಾನವು ತಿರುಗೇಟು ನೀಡಲಿದೆ ಎಂಬುದನ್ನು ಅಂತರರಾಷ್ಟ್ರೀಯ ಸಮುದಾಯಕ್ಕೆ ಮನವರಿಕೆ ಮಾಡಿಕೊಡುತ್ತಿದ್ದೇವೆ. ಪರಿಸ್ಥಿತಿ ಬಿಗಡಾಯಿಸಿದರೆ ಅದರ ಸಂಪೂರ್ಣ ಹೊಣೆಗಾರಿಕೆ ಭಾರತದ ಮೇಲಿರುತ್ತದೆ ಎಂದಿದ್ದಾರೆ.

# ದಾಳಿಗೆ ಟಿಆರ್‌ಎಫ್ ಸಂಚು

ಹೊಂದಿರುವ ವಿದೇಶಿ ಭಯೋತ್ಪಾದಕರೂ ಸೇರಿದ್ದಾರೆ ಎಂದು ವರದಿಯಾಗಿದೆ. ಈಗಾಗಲೇ ಪಾಕಿಸ್ತಾನ ಮೂಲದ ಉಗ್ರರು ಕಾಶ್ಮೀರಕ್ಕೆ ನುಸುಳಿದ್ದು, ದಾಳಿಗೆ ಸಂಚು ರೂಪಿಸುತ್ತಿದ್ದಾರೆಂದು ಮೂಲಗಳು ತಿಳಿಸಿವೆ. ಈ ಸಂಬಂಧ ವಿಡಿಯೋ ಬಿಡುಗಡೆ ಮಾಡಿರುವ ಉಗ್ರ ಸಂಘಟನೆ, ಇದೇ ರೀತಿಯ ಕ್ರಮ ಕೈಗೊಳ್ಳುತ್ತಿದ್ದರೆ, ಮುಂದೆ ಮತ್ತಷ್ಟು ದಾಳಿಗಳನ್ನು ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದೆ. ನಮ್ಮ ಮನೆಗಳನ್ನು ನಾಶ ಮಾಡ್ತೀರಾ, ಇದಕ್ಕೆ ತಕ್ಕ ಪ್ರತೀಕಾರ ತೀರಿಸಿಕೊಳ್ಳುತ್ತೇವೆ. ಕಾಶೀರದಲ್ಲಿ ನಮ ಮನೆಗಳನ್ನು ನಾಶ ಮಾಡುತ್ತಿರುವ ಸೇನೆ ಮತ್ತು ಜಮ್ಮು–ಕಾಶ್ಮೀರ ಪೊಲೀಸರ ವಿರುದ್ಧ ಸೇಡು ತೀರಿಸಿಕೊಳ್ಳುತ್ತೇವೆ ಅವರನ್ನು ಸುಮ್ಮನೆ ಬಿಡುವುದಿಲ್ಲ ಎಂದು ತಿಳಿಸಿದೆ.

ಮೈಸೂರು ಮಿತ್ರ

ಗುರುವಾರ 1 ಮೇ 2025

# ಇಂದಿರಾಗಾಂಧಿ ವಿರುದ್ಧ ಕಪ್ಪು ಬಾವುಟ ತೋರಿಸಿದ ಸಿದ್ದರಾಮಯ್ಯರ ಉಚ್ಚಾಟಿಸುವ 'ಧಮ್' ಇದೆಯಾ!

## ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ.ಶಿವಕುಮಾರ್‌ಗೆ ವಿಪಕ್ಷ ನಾಯಕ ಆರ್.ಅಶೋಕ್ ಸವಾಲು



ಬೆಂಗಳೂರು,ಏ.30(ಕೆಎಂಶಿ)–ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಿದ್ದ ಸಿದ್ದರಾಮಯ್ಯ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡೋ ಧಮ್ ಇದೆಯಾ ಎಂದು ವಿಧಾನ ಸಭೆಯ ವಿಪಕ್ಷದ ನಾಯಕ ಆರ್. ಅಶೋಕ್, ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಅವರನ್ನು ಪ್ರಶ್ನಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, "ಉತ್ತರನ ಪೌರುಷ ಒಲೆಯ ಮುಂದೆ" ಎನ್ನುವ ಹಾಗೆ ನಿಮ್ಮ ಪ್ರತಾಪ ಬರೀ ಮಾಧ್ಯಮಗಳ ಮುಂದೆ ಡೈಲಾಗ್ ಹೊಡೆಯೋದಕ್ಕೆ ಮಾತ್ರ ಸೀಮಿತನಾ.

ರಾಜ್ಯದಲ್ಲಿ ಬಿಜೆಪಿಗೆ ಒಂದೇ ಒಂದು ಸಭೆ ಮಾಡಲೂ ಬಿಡುವುದಿಲ್ಲ ಎಂದು ಧಮ್ಕಿ ಹಾಕಿದ್ದೀರಲ್ಲ, ನಿಮಗೆ ನಿಜವಾಗಿಯೂ ತಾಕತ್ತಿದ್ದರೆ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರಿಗೆ ಕಪ್ಪು ಬಾವುಟ ತೋರಿಸಿದ್ದ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ಪಕ್ಷದಿಂದ ಉಚ್ಚಾಟನೆ ಮಾಡಿ ನೋಡೋಣ ಎಂದು ಸವಾಲು ಹಾಕಿದ್ದಾರೆ.

ನಿಮ್ಮ ಪಕ್ಷದ ಸರ್ವೋಚ್ಚ ನಾಯಕಿ ಪ್ರಧಾನಿ ಆಗಿದ್ದಾಗ ಕಪ್ಪು ಬಾವುಟ ತೋರಿಸಿದ್ದ ವ್ಯಕ್ತಿಯನ್ನ ಪಕ್ಷಕ್ಕೆ ಕರೆತಂದು ಎರಡು ಬಾರಿ ಮುಖ್ಯಮಂತ್ರಿ ಮಾಡಿ, ಅವರ ಋಣದಲ್ಲಿ ಅಧಿಕಾರ ಅನುಭವಿಸುತ್ತಿದ್ದೀರಲ್ಲ, ಬಿಜೆಪಿ ಮಾಡುವ ಪ್ರತಿಭಟನೆಗೆ ಧಮ್ಕಿ ಹಾಕುವ ಯಾವ ನೈತಿಕತೆ ನಿಮಗಿದೆ ಎಂದಿದ್ದಾರೆ.

## ಮೇ 6ರಿಂದ ಸುದರ್ಶನ ಕ್ರಿಯೆ ಶಿಬಿರ

ಮೈಸೂರು,ಏ.30–ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಮೇ 6ರಿಂದ 10ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರ ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9480476825, 9483589825 ಸಂಪರ್ಕಿಸಬಹುದು

# ಪರಿವರ್ತನೆಗೆ ಕಾವ್ಯ ಕಾರಣವಾಗಬೇಕು

## ವಸಂತ ಕಾವ್ಯ– ಕವನ ಸಂಕಲನ ಬಿಡುಗಡೆ ಸಮಾರಂಭದಲ್ಲಿ ಹಿರಿಯ ಸಾಹಿತಿ ಸಿಪಿಕೆ ಅಭಿಮತ



ಮೈಸೂರಿನ ವಿಜಯನಗರದಲ್ಲಿರುವ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದೇವರತ್ನ ಫೌಂಡೇಷನ್, ಲಯನ್ಸ್ ಕ್ಲಬ್ ಅಂಬಾಸಿಡರ್ಸ್, ಭೂಮಿಗಿರಿ ಪ್ರಕಾಶನ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಸಿಪಿಕೆ ಅವರು ಯಶಿಕ ಅವರ ವಸಂತ ಕಾವ್ಯ– ಕವನ ಸಂಕಲನ ಬಿಡುಗಡೆಗೊಳಿಸಿದರು.

ಮೈಸೂರು, ಏ.30(ಜಿಎ)–ಕಾವ್ಯ ಸಂಘರ್ಷಕ್ಕೆ ಕಾರಣವಾಗಬಾರದು, ಬದಲಿಗೆ ಪರಿವರ್ತನೆಗೆ ಕಾರಣವಾಗಬೇಕು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್(ಸಿಪಿಕೆ) ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದೇವರತ್ನ ಫೌಂಡೇಷನ್, ಲಯನ್ಸ್‌ಕ್ಲಬ್ ಅಂಬಾಸಿಡರ್ಸ್, ಭೂಮಿಗಿರಿ ಪ್ರಕಾಶನ ವತಿಯಿಂದ ವಿಜಯಗರ ಸಾಹಿತ್ಯ ಭವನದಲ್ಲಿ ಬುಧವಾರ ಏರ್ಪಡಿಸಿದ್ದ ಯಶಿಕ ಅವರ ವಸಂತ ಕಾವ್ಯ– ಕವನ ಸಂಕಲನ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಸಂಕ್ರಮಣ ಪರಿಸ್ಥಿತಿ ಇಲ್ಲ. ಪರಸ್ಪರ ಆಕ್ರಮಣ ಪರಿಸ್ಥಿತಿ ಕಂಡು ಬರುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇತ್ತೀಚಿನ ದಿನಗಳಲ್ಲಿ ಆತ್ಮಹತ್ಯೆ ಪ್ರವೃತ್ತಿ ಹೆಚ್ಚುತ್ತಿದೆ. ಸಣ್ಣ ಸಣ್ಣ ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಾವ್ಯ ಆತ್ಮಹತ್ಯೆಗೆ ದಾರಿಯಾಗಬಾರದು. ಆತ್ಮಾವಲೋಕನ ಮಾಡಿಸುವಂತಿರಬೇಕು. ಕಾವ್ಯ ಎಂದರೆ ಹಿಗ್ಗು, ಕಾವ್ಯ ಎಂದರೆ ಸಂಭ್ರಮ. ಕಾವ್ಯ ಎಂದರೆ ಮಾನವೀಯತೆಯಿಂದ ಕೂಡಿರಬೇಕು. ಮನನೀಯವೂ ಆಗಿರಬೇಕು ಎಂದು ಹೇಳಿದರು.

ಕಾವ್ಯ ಸಾಮಾನ್ಯವಾದುದಲ್ಲ. ದಿವ್ಯವಾದುದು. ಅಮೃತವಾದುದು. ಕಾವ್ಯ ಅಲೌಕಿಕವಾದುದಲ್ಲ. ಆ ರೀತಿ ಹೇಳಿದರೆ ಋಣಾತ್ಮಕವಾಗುತ್ತದೆ. ಕಾವ್ಯ ಲೋಕೋತ್ತರವಾದುದು. ಕಾವ್ಯ ಲೋಕದ ಸಂಬಂಧ ಇಟ್ಟುಕೊಂಡೆ ಲೋಕ ಕಟ್ಟಿಕೊಡುವ ಲೋಕೋತ್ತರ ಕೆಲಸ ಮಾಡುತ್ತದೆ ಎಂದರು.

ಯಶಿಕ ಅವರ ಕಾವ್ಯಲೋಕದ ಬೆಳಕಿನ ಬಾಗಿಲನ್ನು ತೆರೆದಿದ್ದೇನೆ. ಇಲ್ಲಿರುವ ಕವನಗಳು ವಿಶಿಷ್ಟವೂ ಹೌದು, ಯಶಿಕ ಬರೆದಿರುವುದರಿಂದ ಯಶಿಷ್ಟವೂ ಹೌದು. ಗದ್ಯ–ಪದ್ಯ ಎರಡೂ ಇರುವುದರಿಂದ ಇದೊಂದು ರೀತಿಯಲ್ಲಿ ಚಂಪೂಕಾವ್ಯ ಇದ್ದಂತೆ ಎಂದು ಬಣ್ಣಿಸಿದರು.

ವಸಂತ ಕಾವ್ಯ–ಕವನ ಸಂಕಲನ ಬಿಡುಗಡೆ ಮಾಡಿದ ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ.ಬೈರಿ ಮಾತನಾಡಿ, ಪ್ರಸ್ತುತ ನಡೆಯುತ್ತಿರುವ ವಿದ್ಯಮಾನಗಳ ನಡುವೆ ಓದಿದಾಗ ಮನಸ್ಸಿಗೆ ಉಲ್ಲಾಸ ತರುವುದೇ ಕಾವ್ಯ ಯಶಿಕ ಅವರು ಸರಳ, ಸುಂದರ ಶೈಲಿಯಲ್ಲಿ ನವನವೀನವಾಗಿ, ವಾಸ್ತವಿಕ ನೆಲೆಗಟ್ಟಿನ ಮೇಲೆ ಕವನಗಳನ್ನು ರಚಿಸಿದ್ದಾರೆ ಎಂದು ಪ್ರಶಂಸಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ದೇವರತ್ನ ಫೌಂಡೇಷನ್ ಸಂಸ್ಥಾಪಕ ಎಂ.ಶಿವಪ್ರಸಾದ್, ಸ್ಪಂದನ ಸಾಂಸ್ಕೃತಿಕ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಎಲ್‌ಸಿಎಂಎ ಜಿಲ್ಲಾ ಜಿಎಲ್‌ಟಿ ಸಂಯೋಜಕ ಟಿ.ಹೆಚ್. ವೆಂಕಟೇಶ್, ಲಯನ್ಸ್ ಕ್ಲಬ್ ಅಂಬಾಸಿಡರ್ಸ್ ಅಧ್ಯಕ್ಷ ವಿ.ಶ್ರೀಧರ್, ಕವಯತ್ರಿ ಯಶಿಕ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಮ.ನ.ಲತಾ ಮೋಹನ್, ಎನ್.ಬೆಟ್ಟೇಗೌಡ ಮತ್ತಿತರರರು ಉಪಸ್ಥಿತರಿದ್ದರು.

# ಮೇ 10ಕ್ಕೆ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆ

ಮೈಸೂರು, ಏ.30(ಜಿಎ)–ನಂಜನಗೂಡು ತಾಲೂಕು ಡಾ.ಬಿ.ಆರ್.ಅಂಬೇಡ್ಕರ್ ಯುವಕ ಸಂಘಗಳ ಒಕ್ಕೂಟಗಳ ಸಂಯುಕ್ತಾಶ್ರಯದಲ್ಲಿ ಮೇ 10ರಂದು ಬೆಳಗ್ಗೆ 9ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆರ್ಥಿಕ ಸಬಲೀಕರಣದಿಂದ ಸಾಮಾಜಿಕ ಸಮಾನತೆ ಸಾಧ್ಯವೇ ವಿಷಯ ಕುರಿತ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆಯನ್ನು ಪದವಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ದಲಿತ ಸಂಘಟನೆ ಮುಖಂಡ ಚುಂಚನಹಳ್ಳಿ ಮಲ್ಲೇಶ್ ಈ ವಿಷಯ ತಿಳಿಸಿ, ಮೊದಲ ಬಹುಮಾನ ಲ್ಯಾಪ್‌ಟಾಪ್, 2ನೇ ಬಹುಮಾನ ಟ್ಯಾಬ್, ಮೂರು ಸಮಾಧಾನಕರ ಬಹುಮಾನಗಳಿವೆ. ಭಾಗವಹಿಸುವ ವಿದ್ಯಾಥಿಗಳಿಗೆ ಬೆಳಗಿನ ಉಪಾಹಾರ, ಮಧ್ಯಾಹ್ನ ಊಟದ ವ್ಯವಸ್ಥೆ ಇರಲಿದೆ. ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಗುವುದು. ಮೇ 8ರಂದು ಸಂಜೆ 5 ಗಂಟೆಯೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ ದೂ. 96206 47007 ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ಮಲ್ಲಹಳ್ಳಿ ನಾರಾಯಣ, ನಗರ್ಲೆ ವಿಜಯಕುಮಾರ್, ಸುರೇಶ್, ಕಾರ್ಯ ಬಸವಣ್ಣ ಉಪಸ್ಥಿತರಿದ್ದರು.

# ದೈಹಿಕ ಅಂಗವೈಕಲ್ಯ ಮಕ್ಕಳಿಗೆ ಅಪೋಲೋ ಬಿಜಿಎಸ್, ಆಟೋಮೋಟಿವ್ ಆಕ್ಸೆಲ್ಸ್‌ನಿಂದ ಉಚಿತ ಚಿಕಿತ್ಸೆ




ಮೈಸೂರಿನ ಅಪೋಲೋ ಆಸ್ಪತ್ರೆ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್‌ನ ಹಿರಿಯ ಜನರಲ್ ಮ್ಯಾನೇಜರ್ ವಿನಾಯಕ ವಿ.ಭಟ್ ಮಾತನಾಡಿದರು.

ಮೈಸೂರು, ಏ.30(ಜಿಎ)–ದೈಹಿಕ ಅಂಗವೈಕಲ್ಯ ಮಕ್ಕಳ ನೆರವಿಗಾಗಿ ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯೊಂದಿಗೆ ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್ ಕೈ ಜೋಡಿಸಿದೆ ಎಂದು ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್‌ನ ಹಿರಿಯ ಜನರಲ್ ಮ್ಯಾನೇಜರ್ ವಿನಾಯಕ ವಿ. ಭಟ್ ತಿಳಿಸಿದರು.

ಮೈಸೂರಿನ ಅಪೋಲೋ ಆಸ್ಪತ್ರೆ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್ ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಯೋಜನೆಯ ಭಾಗವಾಗಿ ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯೊಂದಿಗೆ ಕೈಜೋಡಿಸಿ ಕ್ಲಬ್ ಫೂಟ್ ಮತ್ತು ಸೆರೆಬ್ರಲ್ ಪಾಲ್ಸಿ ಪೀಡಿತ ಮಕ್ಕಳಿಗೆ ಉಚಿತವಾಗಿ ಚಿಕಿತ್ಸೆಯನ್ನು ಒದಗಿಸಲು ಮುಂದಾಗಿದೆ. ಇದರಿಂದ ಮಕ್ಕಳು ಹಾಗೂ ಪೋಷಕರು ಉತ್ತಮ ಜೀವನ ನಡೆಸಬೇಕು ಎಂಬುದು ಸಂಸ್ಥೆಯ ಉದ್ದೇಶವಾಗಿದ್ದು, ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಹೊಸ ಭರವಸೆ ಮತ್ತು ಅವಕಾಶಗಳನ್ನು ಒದಗಿಸುತ್ತಿದೆ. ಪ್ರಾರಂಭದಲ್ಲಿ 5 ಮಕ್ಕಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ 20 ಮಕ್ಕಳಿಗೆ ನೆರವಾಗುವ ಚಿಂತನೆ ಇದೆ ಎಂದರು.

ಅಪೋಲೋ ಬಿಜಿಎಸ್ ಆಸ್ಪತ್ರೆಯ ಮಕ್ಕಳ ಮೂಳೆ ಶಸ್ತ್ರಚಿಕಿತ್ಸಕ ಸಲಹೆಗಾರ ಡಾ.ಶ್ರೇಯಸ್ ಆಳ್ವ ಮಾತನಾಡಿ, ಸಮಾಜಕ್ಕೆ ಇದೊಂದು ಉದಾತ್ತ ಚಿಂತನೆಯನ್ನು ಒಳಗೊಂಡ ಮಾದರಿ ನಡೆಯಾಗಿದೆ. ಹೆಚ್ಚೆಚ್ಚು ಕಾರ್ಪೊರೇಟ್ ಸಂಸ್ಥೆಗಳು ಮುಂದೆ ಬಂದು ಇಂತಹ ಸಾಮಾಜಿಕ ಜವಾಬ್ದಾರಿಗಳನ್ನು ಸ್ವೀಕರಿಸಬೇಕು. ಚಿಕಿತ್ಸೆಗಳು ಮಕ್ಕಳ ಜೀವನವನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇಂದು ಚಿಕಿತ್ಸೆ ಸಿಗದೆ ಅನೇಕ ಮಕ್ಕಳು ಇಂತಹ ಅಂಗವೈಕಲ್ಯಗಳಿಂದ ಮೌನವಾಗಿ ಬಳಲುತ್ತಿದ್ದಾರೆ. ಆದರೆ ಸರಿಯಾದ ಆರೈಕೆ ಮತ್ತು ಸಮಯೋಚಿತ ಕಾಳಜಿಯಿಂದ ಅವರ ಜೀವನವನ್ನು ಸಕಾರಾತ್ಮಕವಾಗಿ ಪರಿವರ್ತಿಸಬಹುದು ಎಂದರು.

ಆಸ್ಪತ್ರೆಗೆ ಬರುವ ಮಕ್ಕಳ ಸ್ಥಿತಿಯನ್ನು ಕಂಡು ಶಸ್ತ್ರಚಿಕಿತ್ಸೆ ಮಾಡಿಸಿ ಎಂದು ಸಲಹೆ ನೀಡುತ್ತೇನೆ. ಆದರೆ, ಪೋಷಕರು ಜೀವನ ನಡೆಸುವುದೇ ಕಷ್ಟಕರವಾಗಿದೆ ಎಂದು ಅಳಲು ತೋಡಿಕೊಳ್ಳುತ್ತಾರೆ. ಈ ಹಿನ್ನೆಲೆ ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್‌ನೊಂದಿಗೆ ಚರ್ಚಿಸಿ, ನೂತನ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಒಪ್ಪಂದವು ಕಾರ್ಪೊರೇಟ್ ಮತ್ತು ಆರೋಗ್ಯ ಕ್ಷೇತ್ರಗಳ ನಡುವೆ ಪರಿಣಾಮಕಾರಿ ಕೆಲಸ ಮಾಡಲು ಹಾಗೂ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರುವಲ್ಲಿ ಪರಿಣಾಮಕಾರಿ ಉದಾಹರಣೆಯಾಗಿ ನಿಲ್ಲುತ್ತದೆ ಎಂದರು.

ಈಗಾಗಲೇ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಪೋಷಕರು ಮಾತನಾಡಿ, ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆ ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್ ಸಂಸ್ಥೆಗಳಿಗೆ ಧನ್ಯವಾದ ತಿಳಿಸಿ, ನಾವು ಚಿಕಿತ್ಸೆಗೆ ಕೊಡುವಷ್ಟು ಹಣವಿಲ್ಲದ ಕಾರಣ ಆಸ್ಪತ್ರೆಗೆ ಬಂದು ಕೇವಲ ಪರೀಕ್ಷೆ ಮಾಡಿಸಿಕೊಂಡು ಹೋಗುತ್ತಿದ್ದೆವು. ಆದರೆ, ಡಾ.ಶ್ರೇಯಸ್ ಆಳ್ವ ಅವರ ಸಲಹೆಯಂತೆ ಇಂದು ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್‌ನ ಸಹಾಯದೊಂದಿಗೆ ಮಕ್ಕಳಿಗೆ ಉತ್ತಮ ಚಿಕಿತ್ಸೆ ದೊರೆಯುತ್ತಿದೆ ಎಂದು ಕೃತಜ್ಞತೆ ಸಲ್ಲಿಸಿದರು.

## ಎಸ್.ಚಂದ್ರಶೇಖರ್ ಅವರಿಗೆ ಹುಟ್ಟುಹಬ್ಬದ ಶುಭಾಶಯ...



ಬೆಂಗಳೂರು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಮಹಾ ಮಂಡಳ ನಿಯಮಿತದ ಅಧ್ಯಕ್ಷರಾದ ಎಸ್.ಚಂದ್ರಶೇಖರ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಬುಧವಾರ ಅವರನ್ನು ಅಭಿನಂದಿಸಿ, ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ವಿವಿಧ ಸಂಘ ಸಂಸ್ಥೆಗಳ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

## ಮೈಸೂರು ಬಿಜೆಪಿ ಕಚೇರಿಯಲ್ಲಿ ಬಸವ ಜಯಂತಿ



ಮೈಸೂರು ಬಿಜೆಪಿ ಕಚೇರಿಯಲ್ಲಿ ಬಸವ ಜಯಂತಿ ಆಚರಿಸಲಾಯಿತು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಮುಖಂಡ, ಚಿತ್ರನಟ ಎಸ್.ಜಯಪ್ರಕಾಶ್ (ಜೆಪಿ), ಜೋಗಿ ಮಂಜು, ಯುವ ಮೋರ್ಚಾದ ರಾಕೇಶ್, ಶೋಭಾ, ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್, ಪ್ರದೀಪ್, ಮಾರ್ಗರೇಟ್, ಚೆಲುವೇಗೌಡ, ರಾಜೇಂದ್ರ, ಮಹೇಶ್‌ಗೌಡ, ಪ್ರಮೋದ್ ಇನ್ನಿತರರಿದ್ದರು.



**ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ**

ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬಸವೇಶ್ವರರ ಜಯಂತಿ ಹಿನ್ನೆಲೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಹತ್ತಿರವಿರುವ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಹೋಮದೇವ ಜೆ.ಎಸ್., ಪದಾಧಿಕಾರಿಗಳಾದ ಶ್ರೀಕಾಂತ್, ರಮೇಶ್, ಗೋವಿಂದ, ಎಂ.ನಾಗರಾಜು, ಈಶ್ವರ ಪ್ರಸಾದ್, ದತ್ತಾತ್ರೇಯ, ಸಿ.ಡಿ.ಹರೀಶ್, ಬಿ.ಬಸವರಾಜು, ರಾಜಶೇಖರ್ ಇನ್ನಿತರರು ಉಪಸ್ಥಿತರಿದ್ದರು.



ಬಸವ ಜಯಂತಿ ಅಂಗವಾಗಿ ಬಸವೇಶ್ವರರ ಪ್ರತಿಮೆಗೆ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ, ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್, ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಎಸ್.ಉಮೇಶ್, ಜಿಲ್ಲಾ ಸತ್ರ ಅಪರ ಸರ್ಕಾರಿ ವಕೀಲ ತಿಮ್ಮಯ್ಯ, ವಕೀಲ ಪುಟ್ಟರಸ ಮಾಲಾರ್ಪಣೆ ಮಾಡಿದರು.




ಬಸವ ಜಯಂತಿ ಅಂಗವಾಗಿ ಗನ್‌ಹೌಸ್ ಬಳಿಯಿರುವ ಬಸವೇಶ್ವರರ ಪ್ರತಿಮೆಗೆ ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ಮಾಲಾರ್ಪಣೆ ಮಾಡಿದರು.

# ಮೈಸೂರಲ್ಲಿ ಮಳೆ ಅವಾಂತರ: ಸೆಸ್ಕ್, ಪಾಲಿಕೆ ಅಭಯ ತಂಡದ ಸಿಬ್ಬಂದಿಯಿಂದ ಪರಿಹಾರ ಕಾರ್ಯಾಚರಣೆ

## ಉರುಳಿದ ಮರಗಳು, ವಿದ್ಯುತ್ ಕಂಬ; ಕೆಲವೆಡೆ ಟ್ರಾನ್ಸ್‌ಫಾರ್ಮರ್‌ಗಳಿಗೂ ಹಾನಿ







ಮೈಸೂರು,ಏ.30(ಆರ್‌ಕೆ)– ಮಂಗಳವಾರ ಸುರಿದ ಗಾಳಿ, ಮಿಂಚು ಸಹಿತ ಮಳೆಗೆ ಮೈಸೂರು ನಗರದಾದ್ಯಂತ ಮರ, ರೆಂಬೆ, ವಿದ್ಯುತ್ ಕಂಬ ಉರುಳಿ ಬಿದ್ದು, ಅಲ್ಲಲ್ಲಿ ಸಂಚಾರಕ್ಕೆ ಅಡ್ಡಿಯಾಯಿತಲ್ಲದೇ, ಕೆಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಬೃಂದಾವನ ಬಡಾವಣೆ 7ನೇ ಕ್ರಾಸ್‌ನ ಪ್ರಿಯದರ್ಶಿನಿ ಆಸ್ಪತ್ರೆ ಬಳಿ ಮನೆ ಮೇಲೆ ಮರದ ರೆಂಬೆ ಉರುಳಿ ಬಿದ್ದಿತ್ತು. ಅದೇ ರೀತಿ ಬೃಂದಾವನ ಬಡಾವಣೆ 2ನೇ ಹಂತದಲ್ಲೂ ನಿಂತಿದ್ದ ಕಾರಿನ ಮೇಲೆ ಮರದ ರೆಂಬೆ ಮುರಿದು ಬಿದ್ದಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಗೋಕುಲಂ ಮೇನ್ ರೋಡ್, ಯಾದವಗಿರಿ, ಒಂಟಿಕೊಪ್ಪಲು2ನೇ ಮುಖ್ಯ ರಸ್ತೆ, 1ನೇ ಮೇನ್, ಬನ್ನಿಮಂಟಪದ ನೆಲ್ಸನ್ ಮಂಡೇಲಾ ರಸ್ತೆ, ವಿದ್ಯಾರಣ್ಯಪುರಂನ ಜಿ.ಎಸ್.ರಾಮಕೃಷ್ಣಯ್ಯ ಮುಖ್ಯ ರಸ್ತೆ, ವಿಶ್ವೇಶ್ವರನಗರ, ಕೆಆರ್‌ಎಸ್ ರಸ್ತೆ, ಇಎಸ್‌ಐ ಆಸ್ಪತ್ರೆ ಪಕ್ಕದ ರಸ್ತೆ, ರಿಂಗ್ ರಸ್ತೆ, ಬನ್ನೂರು ರಸ್ತೆ, ತಿ.ನರಸೀಪುರ ರಸ್ತೆ, ಹುಣಸೂರು ರಸ್ತೆ ಸೇರಿದಂತೆ ಸುತ್ತಲಿನ ಪ್ರದೇಶದಲ್ಲಿ ಮಳೆ–ಗಾಳಿಗೆ ಮರಗಳು ಬುಡಸಮೇತ ಹಾಗೂ ಕೆಲವೆಡೆ ರೆಂಬೆಗಳು ಮುರಿದು ಬಿದ್ದಿದ್ದವು.

ಮರ ಬಿದ್ದ ರಭಸಕ್ಕೆ ವಿದ್ಯುತ್ ತಂತಿ ಹಾಗೂ ಕಂಬಗಳು ನೆಲಕ್ಕುರುಳಿದವಲ್ಲದೇ, ಹಲವೆಡೆ ಟ್ರಾನ್ಸ್‌ಫಾರ್ಮರ್‌ಗಳಿಗೂ ಹಾನಿಯಾಗಿದೆ. ಮಳೆ ನಿಲ್ಲುತ್ತಿದ್ದಂತೆಯೇ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ಹಾಗೂ ಮೈಸೂರು ಮಹಾನಗರ ಪಾಲಿಕೆ ಅಭಯ ತಂಡದ ಸಿಬ್ಬಂದಿ ರಾತ್ರಿಯಿಡೀ ಕಾರ್ಯಾಚರಣೆ ನಡೆಸಿ ಮರದ ರೆಂಬೆಗಳನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

# ದೇಶ – ವಿದೇಶ

## ಪಾಕ್ ಸೇನೆ ತೊರೆದ 4500 ಸೈನಿಕರು, 250 ಅಧಿಕಾರಿಗಳು

**ಇಸ್ಲಾಮಾಬಾದ್:** ಭಾರತದೊಂದಿಗಿನ ಯುದ್ಧದ ಬೆದರಿಕೆಯ ಮಧ್ಯೆ ಸೇನಾ ಸಿಬ್ಬಂದಿ ಪಾಕಿಸ್ತಾನದಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಲಾಯನ ಮಾಡುತ್ತಿದ್ದಾರೆ 4500 ಸೈನಿಕರು ಮತ್ತು 250 ಅಧಿಕಾರಿಗಳು ಈಗಾಗಲೇ ತಮ್ಮ ಹುದ್ದೆಗಳಿಂದ ಪಲಾಯನ ಮಾಡಿದ್ದಾರೆ.

ಪಹಲ್ಗಾಮ್ ಭಯೋತ್ಪಾದನಾ ದಾಳಿಗೆ ಭಾರತದಿಂದ ಪ್ರತೀಕಾರದ ದಾಳಿ ನಡೆಯುವ ಭೀತಿಯಿಂದಾಗಿ ಪಾಕಿಸ್ತಾನ ಸೇನೆಯಲ್ಲಿ ರಾಜೀನಾಮೆಗಳ ಅಲೆ ಹೆಚ್ಚುತ್ತಿದೆ ಎಂದು ವರದಿಗಳು ಸೂಚಿಸುತ್ತವೆ. ಡೈಲಿ ಗಾರ್ಡಿಯನ್‌ನ ವರದಿಯ ಪ್ರಕಾರ ತಮ್ಮ ಪ್ರೀತಿಪಾತ್ರರ ಸುರಕ್ಷತೆಯ ಬಗ್ಗೆ ತೀವ್ರ ಕಾಳಜಿ ವಹಿಸುತ್ತಿರುವ ಕುಟುಂಬಗಳು, ಅವರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ ಎಂದು ವರದಿಯಾಗಿದೆ.

ಕೆಲವು ಸಿಬ್ಬಂದಿ ಈಗಾಗಲೇ ರಾಜೀನಾಮೆ ನೀಡಿದ್ದರೆ, ಇನ್ನು ಕೆಲವರು ರಾಜೀನಾಮೆ ನೀಡುವ ಪ್ರಕ್ರಿಯೆಯಲ್ಲಿದ್ದಾರೆ. ಇದು ಪಾಕಿಸ್ತಾನದ ಸಶಸ್ತ್ರ ಪಡೆಗಳಲ್ಲಿ ಬಿಕ್ಕಟ್ಟು ಹೆಚ್ಚುತ್ತಿರುವುದನ್ನು ಸೂಚಿಸುತ್ತದೆ ಇತ್ತೀಚಿನ ಘಟನೆಗಳಿಂದ ಪಾಕಿಸ್ತಾನ ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಸಂಪೂರ್ಣವಾಗಿ ಆಘಾತಕ್ಕೊಳಗಾಗಿದ್ದಾರೆ.

ಈ ಮಧ್ಯೆ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್‌ಗೆ ಅನಾರೋಗ್ಯ ಉಂಟಾಗಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ. ರಾವಲ್ಪಿಂಡಿಯ ಮಿಲಿಟರಿ ಆಸ್ಪತ್ರೆಯಲ್ಲಿ ಷರೀಫ್‌ಗೆ ಚಿಕಿತ್ಸೆ ನೀಡಲಾಗುತ್ತಿದೆ.

## ಅಮೆರಿಕದಲ್ಲಿ ವಿದೇಶಿ ವಿದ್ಯಾರ್ಥಿಗಳ ಕಾನೂನು ಮಾನ್ಯತೆ ರದ್ದು



**ವಾಷಿಂಗ್ಟನ್:** ವಿದೇಶಿ ವಿದ್ಯಾರ್ಥಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲು ಅಮೆರಿಕ ಸರ್ಕಾರ ಮುಂದಾಗಿದ್ದು, ಅವರ ಕಾನೂನು ಸ್ಥಾನಮಾನವನ್ನು ರದ್ದು ಮಾಡುತ್ತಿದೆ.

ವಲಸೆ ಮತ್ತು ಕಸ್ಟಮ್ಸ್ ಜಾರಿ ಸಂಸ್ಥೆ ನಿರ್ವಹಿಸುವ ವಿದ್ಯಾರ್ಥಿಗಳ ಡೇಟಾಬೇಸ್‌ನಿಂದ ತಮ್ಮ ದಾಖಲೆಗಳನ್ನು ತೆಗೆದುಹಾಕಲಾಗಿದೆ ಎಂದು ತಿಳಿದು ಅಮೆರಿಕದಾದ್ಯಂತ ವಿದೇಶಿ ವಿದ್ಯಾರ್ಥಿಗಳು ದಿಗ್ಭ್ರಮೆಗೊಂಡಿದ್ದಾರೆ. ಕೆಲವರು ಗಡಿಪಾರು ಭಯದಿಂದ ತಲೆಮರೆಸಿಕೊಂಡಿದ್ದರೆ ಇನ್ನು ಕೆಲವರು ತಮ್ಮ ದೇಶಕ್ಕೆ ಮರಳಲು ತಮ್ಮ ಅಧ್ಯಯನವನ್ನು ತ್ಯಜಿಸಿದ್ದಾರೆ.

ಅಮೆರಿಕ ಸರ್ಕಾರವು ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಕಾನೂನು ಸ್ಥಾನಮಾನವನ್ನು ಪುನಃಸ್ಥಾಪಿಸುತ್ತಿದೆ ಎಂದು ಫೆಡರಲ್ ಅಧಿಕಾರಿಗಳು ಹೇಳುತ್ತಾರೆ. ವೀಸಾ ರದ್ದುಗೊಂಡ ಅಥವಾ ಕಾನೂನು ಸ್ಥಾನಮಾನ ಕಳೆದುಕೊಂಡ ಅನೇಕ ವಿದ್ಯಾರ್ಥಿಗಳು ತಮ್ಮ ದಾಖಲೆಯಲ್ಲಿ ಸಂಚಾರ ಉಲ್ಲಂಘನೆ ಸೇರಿದಂತೆ ಸಣ್ಣ ಉಲ್ಲಂಘನೆಗಳನ್ನು ಮಾತ್ರ ಹೊಂದಿದ್ದಾರೆಂದು ಹೇಳಿದರು. ಕೆಲವರಿಗೆ ತಮ್ಮನ್ನು ಏಕೆ ಗುರಿಯಾಗಿಸಿಕೊಂಡಿದ್ದಾರೆಂದು ಗೊತ್ತಾಗುತ್ತಿರಲಿಲ್ಲ. ಒಟ್ಟಾರೆಯಾಗಿ, ಡೇಟಾಬೇಸ್ ಹುಡುಕಾಟದಲ್ಲಿ ಸುಮಾರು 6,400 ವಿದ್ಯಾರ್ಥಿಗಳನ್ನು ಗುರುತಿಸಲಾಗಿದೆ ಎಂದು ಅಮೆರಿಕದ ಜಿಲ್ಲಾ ನ್ಯಾಯಾಧೀಶೆ ಅನಾ ರೆಯೆಸ್ ವಿಚಾರಣೆ ವೇಳೆ ತಿಳಿಸಿದ್ದಾರೆ.

## ವಂಚನೆ ಪ್ರಕರಣ: ಮೆಹುಲ್ ಚೋಕ್ಸಿ ವಿರುದ್ಧ ಜಾಮೀನು ರಹಿತ ವಾರಂಟ್



**ಮುಂಬೈ:** ಕೆನರಾ ಬ್ಯಾಂಕ್ ಸಮೂಹದಿಂದ ಸಾಲ ಪಡೆದು ಸುಮಾರು 55 ಕೋಟಿ ರೂ. ವಂಚಿಸಿದ ಪ್ರಕರಣದಲ್ಲಿ ವಜ್ರೋದ್ಯಮಿ ಮೆಹುಲ್ ಚೋಕ್ಸಿ ವಿರುದ್ಧ ಮುಂಬಯಿ ನ್ಯಾಯಾಲಯ ಜಾಮೀನು ರಹಿತ ವಾರಂಟ್ ಹೊರಡಿಸಿದೆ. ವಾರಂಟ್ ಕುರಿತ ವರದಿಗಾಗಿ ಜೂನ್ 2ಕ್ಕೆ ಪ್ರಕರಣವನ್ನು ಮುಂದೂಡಲಾಗಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ)ನ ಬಹುಕೋಟಿ ಹಣ ವಂಚನೆ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಚೋಕ್ಸಿಯನ್ನು ಭಾರತೀಯ ತನಿಖಾ ಸಂಸ್ಥೆಗಳು ಹಸ್ತಾಂತರ ಕೋರಿದ ನಂತರ ಏ.12, ಬೆಲ್ಜಿಯಂನಲ್ಲಿ ಬಂಧಿಸಲಾಗಿತ್ತು ಹೆಚ್ಚುವರಿ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಆರ್.ಬಿ.ಠಾಕೂರ್, ಜಾಮೀನು ರಹಿತ ವಾರಂಟ್ ಹೊರಡಿಸಿದ್ದಾರೆ ಕೆನರಾ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಮಹಾರಾಷ್ಟ್ರ ಬೆಜೆಲ್ ಜ್ಯುವೆಲ್ಲರಿಗೆ ಒಕ್ಕೂಟ ಒಪ್ಪಂದದ ಅಡಿಯಲ್ಲಿ ಕಾರ್ಯ ಬಂಡವಾಳ ಸೌಲಭ್ಯಗಳಾಗಿ ಕ್ರಮವಾಗಿ 30 ಮತ್ತು 25 ಕೋಟಿ ರೂ.ಗಳನ್ನು ಮಂಜೂರು ಮಾಡಿವೆ ಎಂದು ಕೇಂದ್ರ ತನಿಖಾ ದಳ (ಸಿಬಿಐ) ಆರೋಪಿಸಿದೆ.

ಚಿನ್ನ ಮತ್ತು ವಜ್ರ–ಖಚಿತ ಆಭರಣಗಳ ತಯಾರಿಕೆ ಮತ್ತು ಮಾರಾಟಕ್ಕಾಗಿ ಸಾಲವನ್ನು ನೀಡಲಾಯಿತು, ಆದರೆ ಕಂಪನಿಯು ಅದನ್ನು ಆ ಉದ್ದೇಶಗಳಿಗಾಗಿ ಬಳಸಲಿಲ್ಲ ಎಂದು ಸಿಬಿಐ ತಿಳಿಸಿದೆ.

## ಕಂಚಿ ಕಾಮಕೋಟಿ ಪೀಠಕ್ಕೆ ಸತ್ಯ ಚಂದ್ರಶೇಖರೇಂದ್ರ ಸರಸ್ವತಿ ಉತ್ತರಾಧಿಕಾರಿ



**ಕಂಚಿ:** ಕಂಚಿ ಕಾಮಕೋಟಿ ಪೀಠದ ಶಂಕರ ವಿಜಯೇಂದ್ರ ಸರಸ್ವತಿಗಳು ಶಿಷ್ಯ ಸ್ವೀಕಾರ ಮಾಡಿದ್ದು, ತಮ್ಮ ಉತ್ತರಾಧಿಕಾರಿಗೆ ಸತ್ಯ ಚಂದ್ರಶೇಖರೇಂದ್ರ ಸರಸ್ವತಿ ಎಂಬ ಯೋಗ ಪಟ್ಟ ನೀಡಿದ್ದಾರೆ.

ಅಕ್ಷಯ ತೃತೀಯ ದಿನವಾದ ಇಂದು ಕಂಚಿ ಮಠದಲ್ಲಿ ಉತ್ತರಾಧಿಕಾರಿಯ ಸನ್ಯಾಸ ಸ್ವೀಕಾರ ಕಾರ್ಯಕ್ರಮ ನಡೆಯಿತು ಕಳೆದ 2–3 ದಿನಗಳಿಂದ ಮಠದಲ್ಲಿ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆದಿದ್ದವು.

ಆಂಧ್ರಪ್ರದೇಶದ ಅನ್ನಾವರಮ್ ಮೂಲದ ಸುಬ್ರಹ್ಮಣ್ಯ ಗಣೇಶ್ ಶರ್ಮಾ ದ್ರಾವಿಡ್‌ಗೆ ಶಂಕರ ವಿಜಯೇಂದ್ರ ಸರಸ್ವತಿಗಳು ಸನ್ಯಾಸ ದೀಕ್ಷೆ ನೀಡಿದ್ದಾರೆ. ಸತ್ಯ ಚಂದ್ರಶೇಖರೇಂದ್ರ ಸರಸ್ವತಿ ಕಂಚಿ ಪೀಠಕ್ಕೆ 71 ನೇ ಪೀಠಾಧಿಪತಿಗಳಾಗಲಿದ್ದಾರೆ.

25 ವರ್ಷದ ಗಣೇಶ ಶರ್ಮಾ ದ್ರಾವಿಡ್ (ಸತ್ಯ ಚಂದ್ರಶೇಖರೇಂದ್ರ ಸರಸ್ವತಿ) ಅವರು 2006 ರಿಂದಲೂ ವೇದ ವಿದ್ಯೆಯ ಅಧ್ಯಯನದಲ್ಲಿ ತೊಡಗಿದ್ದು ಋಗ್ವೇದ, ಯಜುರ್ವೇದ, ಸಾಮವೇದ, ದಶೋಪನಿಷತ್ತುಗಳಲ್ಲಿ ಪ್ರಾವೀಣ್ಯತೆ ಹೊಂದಿದ್ದಾರೆ. ವಿದ್ವಾಂಸರಾದ ಅವರು ಅನ್ನಾವರಂ ದೇವಸ್ಥಾನದಲ್ಲಿ ಮತ್ತು ತೆಲಂಗಾಣದ ನಿಜಾಮಾಬಾದ್ (ನಿರ್ಮಲ್ ಜಿಲ್ಲೆ)ನಲ್ಲಿರುವ ಬಸರ ಶ್ರೀ ಜ್ಞಾನ ಸರಸ್ವತಿ ದೇವಸ್ಥಾನದಲ್ಲಿ ಸೇವೆ ಸಲ್ಲಿಸಿದ್ದಾರೆ.


## ಬಾಂಗ್ಲಾದೇಶದ ಹಿಂದೂ ನಾಯಕ ಚಿನ್ಮಯ್ ಕೃಷ್ಣದಾಸ್‌ಗೆ ಕೊನೆಗೂ ಜಾಮೀನು ಮಂಜೂರು



**ಢಾಕಾ:** ಇಸ್ಕಾನ್‌ನ ಮಾಜಿ ಧರ್ಮಗುರು ಹಾಗೂ ಹಿಂದೂ ನಾಯಕ ಚಿನ್ಮಯ್ ಕೃಷ್ಣದಾಸ್ ಅವರಿಗೆ ಬಾಂಗ್ಲಾದೇಶದ ಹೈಕೋರ್ಟ್ ಕೊನೆಗೂ ಜಾಮೀನು ಮಂಜೂರು ಮಾಡಿದೆ. ಸುಮಾರು 6 ತಿಂಗಳ ಹಿಂದೆ ದೇಶದ್ರೋಹದ ಕೇಸ್‌ನಲ್ಲಿ ಅವರನ್ನು ಅಲ್ಲಿನ ಪೊಲೀಸರು ಬಂಧಿಸಿದ್ದರು. ಚಿನ್ಮಯ್ ಕೃಷ್ಣದಾಸ್ ಅವರು ಈ ಹಿಂದೆ ಇಸ್ಕಾನ್‌ನ ಧರ್ಮಗುರುವಾಗಿದ್ದರು. ಬಾಂಗ್ಲಾದೇಶ ಸಮ್ಮಿಲಿತ್ ಸನಾತನಿ ಜಾಗರಣ್ ಜೋಟೆಯ ವಕ್ತಾರರಾಗಿ ಅವರು ಕೆಲಸ ಮಾಡುತ್ತಿದ್ದರು. ಬಾಂಗ್ಲಾದೇಶದ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ ಆರೋಪದಲ್ಲಿ ಅವರ ಮೇಲೆ ದೇಶದ್ರೋಹದ ಕೇಸ್ ದಾಖಲಿಸಲಾಗಿತ್ತು.

ಅವರನ್ನು ಕಳೆದ ನವೆಂಬರ್ 25 ರಂದು ಢಾಕಾ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿತ್ತು. ಆದರೆ, ಜಾಮೀನು ಪಡೆಯುವ ಅವರ ಪ್ರಯತ್ನ ಸಫಲವಾಗಿರಲಿಲ್ಲ. ಕೆಳ ನ್ಯಾಯಾಲಯ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ ನಂತರ ಅವರು ಬೇಲ್‌ಗಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದರು. ಇದೀಗ ಬಾಂಗ್ಲಾದೇಶ ಹೈಕೋರ್ಟ್ ನ್ಯಾಯಮೂರ್ತಿಗಳಾದ ಮೊಹಮ್ಮದ್ ಅಟೋವರ್ ರೆಹಮಾನ್ ಮತ್ತು ಮೊಹಮ್ಮದ್ ಅಲಿ ರೆಝಾ ಅವರ ಪೀಠವು ಜಾಮೀನು ಮಂಜೂರು ಮಾಡಿದೆ.

## ಹೃದಯಾಘಾತಕ್ಕೆ ಬಲಿಯಾದ ಪೃಥ್ವಿಗೆ ಭಾವಪೂರ್ಣ ವಿದಾಯ




**ಮಡಿಕೇರಿ:** ಜಿಲ್ಲಾ ಪೊಲೀಸ್ ಇಲಾಖೆಯ ಶ್ವಾನ ದಳ ಘಟಕದಲ್ಲಿ 8 ವರ್ಷಗಳಿಂದ ಅತ್ಯುತ್ತಮ ಸೇವೆ ಸಲ್ಲಿಸುತ್ತಿದ್ದ ಪೃಥ್ವಿ ಎಂಬ ಸ್ಫೋಟಕ ಪತ್ತೆದಾರಿ ಶ್ವಾನ ರಾತ್ರಿ ಹೃದಯಾಘಾತ ದಿಂದ ಮೃತಪಟ್ಟಿದೆ. 6 ತಿಂಗಳ ಕಾಲ ಬೆಂಗ ಳೂರಿನಲ್ಲಿ ತರಬೇತಿ ಪಡೆದಿದ್ದ ಪೃಥ್ವಿ 2017ರಲ್ಲಿ ಕೊಡಗು ಜಿಲ್ಲಾ ಪೊಲೀಸ್ ಇಲಾಖೆಯ ಶ್ವಾನ ದಳ ಘಟಕಕ್ಕೆ ನೇಮಕವಾಗಿತ್ತು.

ಎಂ.ಆರ್.ಶಿವ ಅವರು ಪೃಥ್ವಿ ಶ್ವಾನದ ಹ್ಯಾಂಡ್ಲರ್ ಆಗಿದ್ದು, ಸ್ಫೋಟಕ ವಸ್ತುಗಳ ಪತ್ತೆದಾರಿಕೆಯಲ್ಲಿ ಪರಿಣಿತಿ ಪಡೆದಿತ್ತು. ಜಿಲ್ಲೆ ಮತ್ತು ಹೊರ ಜಿಲ್ಲೆಗಳಲ್ಲಿ ಗಣ್ಯರು ಮತ್ತು ಅತೀ ಗಣ್ಯ ವ್ಯಕ್ತಿಗಳ ಭದ್ರತೆ, ಏರ್ ಶೋ, ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ಕ್ರಿಕೆಟ್ ಪಂದ್ಯಾಟ, ರಾಷ್ಟ್ರಪತಿ ಭೇಟಿ, ಕೇಂದ್ರಾ ಡಳಿತ ಪ್ರದೇಶಗಳಾದ ಗೋವಾ, ಪಾಂಡಿಚೇರಿ, ಲಕ್ಷ ದ್ವೀಪದಲ್ಲಿ ಪ್ರಧಾನಿ ನರೇಂದ್ರ ಮೋದಿ ಭೇಟಿ ಸಂದರ್ಭ ಸೇರಿದಂತೆ ಒಟ್ಟು 500ಕ್ಕೂ ಅಧಿಕ ಭದ್ರತಾ ಕಾರ್ಯದಲ್ಲಿ ಪೃಥ್ವಿ ಪಾಲ್ಗೊಂಡು ತನ್ನ ಸೇವೆ ಸಲ್ಲಿಸಿತ್ತು. ರಾಜ್ಯ ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ 3 ಬಾರಿ ಮತ್ತು ವಲಯ ಮಟ್ಟದ ಕ್ರೀಡಾ ಕೂಟದಲ್ಲಿ 5 ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿತ್ತು.

**ಪೊಲೀಸ್ ಗೌರವಾರ್ಪಣೆ:** ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿ ಅಗಲಿದ ಪೃಥ್ವಿಗೆ ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ತೀವ್ರ ಸಂತಾಪ ಸೂಚಿಸಿದೆ. ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಪಾರ್ಥೀವ ಶರೀರಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆರಾಮ ರಾಜನ್, ಡಿವೈಎಸ್‌ಪಿ ಸೂರಜ್, ನಗರ ವೃತ್ತ ನಿರೀಕ್ಷಕ ಪಿ.ಕೆ.ರಾಜು ಸಹಿತ ಇತರ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೂ ಪುಷ್ಪ ಗುಚ್ಛ ಅರ್ಪಿಸಿ ಸೆಲ್ಯೂಟ್ ಮಾಡುವ ಮೂಲಕ ಅಂತಿಮ ಗೌರವ ನಮನ ಸಮರ್ಪಿಸಿದರು. ಇದೇ ವೇಳೆ ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ಅಗಲಿದ ಪೃಥ್ವಿಗೆ ಪೊಲೀಸ್ ಗೌರವ ರಕ್ಷೆ ನೀಡುವ ಮೂಲಕ ಅಂತಿಮ ವಂದನೆ ಸಲ್ಲಿಸಿತು. ಬಳಿಕ ಪೊಲೀಸ್ ಕವಾಯತು ಮೈದಾನದ ಅಂಚಿನಲ್ಲಿ ಪೃಥ್ವಿಯ ಅಂತ್ಯ ಸಂಸ್ಕಾರ ನಡೆಸಲಾಯಿತು. ಹ್ಯಾಂಡ್ಲರ್ ಎಂ.ಆರ್. ಶಿವ ಮತ್ತವರ ಕುಟುಂಬ, ಪೊಲೀಸ್ ಶ್ವಾನ ದಳದ ಸಿಬ್ಬಂದಿಗಳು ಅಶ್ರುತರ್ಪಣೆಯ ಮೂಲಕ ಪೃಥ್ವಿಗೆ ಭಾವಪೂರ್ಣ ವಿದಾಯ ಹೇಳಿದರು.

# ತ್ವರಿತವಾಗಿ ಸಾಗಿರುವ ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ಕಾಮಗಾರಿ

- ಪ್ರತಾಪ್ ಸಿಂಹ ಸಂಸದರಾಗಿದ್ದ ವೇಳೆ ಅನುಮೋದನೆಗೊಂಡಿದ್ದ ಯೋಜನೆ
- ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಉದ್ಘಾಟನೆ ವೇಳೆಯೇ ಇದಕ್ಕೂ ಪ್ರಧಾನಿ ಮೋದಿ ಚಾಲನೆ ನೀಡಿದ್ದರು



ಮೈಸೂರು, ಏ.30–ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ಕಾಮಗಾರಿ ಬಿರುಸಿನಿಂದ ಸಾಗಿದೆ ಒಟ್ಟು92 ಕಿ.ಮೀ. ಉದ್ದದ ಕಾಮಗಾರಿ ನಡೆಯಬೇಕಾಗಿದ್ದು, ಈಗ ಶ್ರೀರಂಗಪಟ್ಟಣದ ಅಗ್ರಹಾರ ದಿಂದ ಮೈಸೂರು ತಾಲೂಕು ಯಲಚನಹಳ್ಳಿವರೆಗಿನ 19 ಕಿ.ಮೀ. ಮತ್ತು ಹುಣಸೂರು ತಾಲೂಕಿನ ಬೆಳತ್ತೂರಿನಿಂದ ಪಿರಿಯಾಪಟ್ಟಣ ತಾಲೂಕಿನ ಹರವೆ ಮಲ್ಲಿರಾಜಪಟ್ಟಣವರೆಗಿನ 24.10 ಕಿ.ಮೀ. ಕಾಮಗಾರಿ ಬಿರುಸಿನಿಂದ ಸಾಗಿದೆ.

ಕುಶಾಲನಗರದಿಂದ ಮಡಿಕೇರಿವರೆಗಿನ 22 ಕಿ.ಮೀ. ಉದ್ದದ ಕಾಮಗಾರಿಗೆ ಪರಿಸರವಾದಿಗಳು ಆಕ್ಷೇಪ ವ್ಯಕ್ತಪಡಿಸಿ ನ್ಯಾಯಾಲಯದ ಮೊರೆ ಹೋದ ಕಾರಣ ಕಾಮಗಾರಿಯು ಕುಶಾಲನಗರದವರೆಗೆ ಮಾತ್ರ ನಡೆಯಲಿದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಪ್ರತಾಪ್ ಸಿಂಹ ಅವರು ಸಂಸದರಾಗಿದ್ದ ವೇಳೆ ಮೈಸೂರು–ಮಡಿಕೇರಿವರೆಗಿನ ಚತುಷ್ಪಥ ಹೆದ್ದಾರಿ ನಿರ್ಮಾಣಕ್ಕೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಂದ 2018ರಲ್ಲಿ ಅನುಮೋದನೆ ಪಡೆದಿದ್ದರು. ಕುಶಾಲನಗರ–ಮಡಿಕೇರಿವರೆಗಿನ ಹೆದ್ದಾರಿಗೆ ಪರಿಸರವಾದಿಗಳಿಂದ ತಡೆ ಉಂಟಾದ ಕಾರಣ ಮೈಸೂರು–ಕುಶಾಲನಗರದವರೆಗಿನ ಯೋಜನೆ ರೂಪಿಸಲಾಗಿತ್ತು. ಈ ಯೋಜನೆಗೆ 2023ರ ಮಾ.12ರಂದು ಗೆಜ್ಜಲಗೆರೆ ಬಳಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಉದ್ಘಾಟಿಸಿದ ವೇಳೆಯೇ ಪ್ರಧಾನಿ ನರೇಂದ್ರ ಮೋದಿಯವರು ಭೂಮಿ ಪೂಜೆ ಮಾಡಿದ್ದರು.

## ವಾಸ ಸ್ಥಳಗಳ ಒಕ್ಕಲೆಬ್ಬಿಸುವುದು ಖಂಡನಾರ್ಹ: ದುರ್ಗಾಪ್ರಸಾದ್

ವಿರಾಜಪೇಟೆ,ಏ.30– ಸರಕಾರಗಳು ಏಕಪಕ್ಷೀಯವಾಗಿ ಜನರ ವಾಸ ಸ್ಥಳಗಳನ್ನು ಅರಣ್ಯಕ್ಕೆ ಕೊಟ್ಟಿರುವುದಾಗಿ ವಿವೇಚನೆ ಇಲ್ಲದೆ ಘೋಷಿಸಿ ಈಗ ಅವರಿಗೆ ನೋಟಿಸ್ ಕೊಟ್ಟು ಒಕ್ಕಲೆಬ್ಬಿಸುವುದು ಖಂಡನಾರ್ಹವಾಗಿದೆ ಎಂದು ಕರ್ನಾಟಕ ಕಾಫಿ ರೈತರ ಸಂಘದ ಕೊಡಗು ಘಟಕದ ಮುಖಂಡ ಡಾ. ದುರ್ಗಾಪ್ರಸಾದ್ ಹೇಳಿದರು.

ಅನೇಕ ವರ್ಷಗಳಿಂದ ರೈತರ ವಶದಲ್ಲಿರುವ ಭೂಮಿಯನ್ನು ಅರಣ್ಯಕ್ಕೆ ವಶಪಡಿಸಿಕೊಳ್ಳುವ ಪ್ರಕ್ರಿಯೆ ಹಂತವಾಗಿ ಸೋಮವಾರಪೇಟೆಯ ಕಲ್ಕಂದೂರು ಗ್ರಾಮಕ್ಕೆ ಅರಣ್ಯ ಖಾತೆಯ ಸಿಬ್ಬಂದಿಗಳು ಸರ್ವೆ ನಡೆಸಲು ಹೋಗಿದ್ದಾಗ ರೈತರು ತಡೆದಿರುವ ಈ ಹೋರಾಟಕ್ಕೆ ನಮ್ಮ ಬೆಂಬಲ ಇದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೊಡಗಿನಲ್ಲಿರುವ ಪಸಾರಿ ಜಾಗಗಳನ್ನು ಸಮಗ್ರ ಸರ್ವೆ ನಡೆಸಿ ಒತ್ತುವರಿ ಮಾಡಿದವರ ಪಟ್ಟಿಯನ್ನು ಜಿಲ್ಲಾಡಳಿತ ತಯಾರಿಸಬೇಕು. ಕೆಲ ಪ್ರಭಾವಿ ರಾಜಕಾರಣಿಗಳು ತಮ್ಮ ಅಧಿಕಾರದ ಅವಧಿಯಲ್ಲಿ ಸರಕಾರಿ ಭೂಮಿಯನ್ನು ಕಬಳಿಸಿರುವ ಜಾಗವನ್ನು ಸರಕಾರ ವಶಕ್ಕೆ ಪಡೆದುಕೊಳ್ಳುವಂತಾಗಬೇಕು. ವಶಪಡಿಸಿಕೊಂಡಿದ್ದರಲ್ಲಿ 5 ಎಕರೆ ಜಾಗವನ್ನು ಸಣ್ಣ ಬೆಳೆಗಾರರಿಗೆ ನೀಡಬೇಕು ಎಂದು ಆಗ್ರಹಿಸಿದರು.

ಕಾಫಿ ರೈತರ ಸಂಘದ ಜಿಲ್ಲಾ ಘಟಕದ ವಸಂತ್ ಕುಮಾರ್ ವಸಮನೆ ಮಾತನಾಡಿ ಈ ಹಿಂದೆ 2019 ರಲ್ಲಿ ಧನಂಜಯ ವರ್ಸಸ್ ಕರ್ನಾಟಕ ರಾಜ್ಯ ಪ್ರಕರಣದಲ್ಲಿ ಡೀಮ್ಡ್ ಫಾರೆಸ್ಟ್ ಕುರಿತಂತೆ ಹೈಕೋರ್ಟ್‌ನ ವಿಭಾಗಿಯ ಪೀಠ ಸ್ಪಷ್ಟ ತೀರ್ಪು ನೀಡಿದೆ. ಹಿಂದಿನ ಆದೇಶದಂತೆ ಅರಣ್ಯ ಮತ್ತು ಅರಣ್ಯ ಭೂಮಿ ಎಂಬುದು ಕಾಯಿದೆಯಲ್ಲಿ ಉಲ್ಲೇಖವಿದೆಯೆ ಹೊರತು ಡೀಮ್ಡ್ ಅರಣ್ಯ ಎಂಬ ಉಲ್ಲೇಖ ಕಾಯಿದೆಯಲ್ಲಿ ಎಲ್ಲೂ ಇಲ್ಲ ಅದರಿಂದ ಇದನ್ನು ಮಾನ್ಯ ಮಾಡಲಾಗದು ಎಂದರು. ಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾ ಸದಸ್ಯ ಹಮೀದ್ ಉಪಸ್ಥಿತರಿದ್ದರು.

## ಅಡುಗೆ ಅನಿಲ ಸೋರಿಕೆ ದಂಪತಿಗೆ ಸುಟ್ಟ ಗಾಯ

ಸುಂಟಿಕೊಪ್ಪ,ಏ.30–ಅಡುಗೆ ಅನಿಲ ಸೋರಿಕೆಯಿಂದ ಉಂಟಾದ ಬೆಂಕಿಯಿಂದ ದಂಪತಿಗೆ ಸುಟ್ಟ ಗಾಯಗಳಾದ ಘಟನೆ ನಡೆದಿದೆ. ಇಲ್ಲಿನ ಒಂದನೇ ವಿಭಾಗದ ನಿವಾಸಿ ಲೋಡರ್ ವಿಜಯ ಹಾಗೂ ಪತ್ನಿ ಸಾವಿತ್ರಿ ಮನೆಯಲ್ಲಿ ಅಡುಗೆ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಅಡುಗೆ ಅನಿಲ ಸೋರಿಕೆಯಾಗಿದೆ. ಏಕಾಏಕಿ ಸಿಲಿಂಡರ್‌ನಿಂದ ಗ್ಯಾಸ್ ಹೊರ ಬಂದಿದ್ದು, ಅಡುಗೆ ಕೋಣೆಯ ಮೇಲ್ಛಾವಣಿಗೆ ಅಳವಡಿಸಲಾಗಿದ ಶೀಟ್ ಹಾನಿಗೀಡಾಗಿದೆ. ಅದೃಷ್ಟವಶಾತ್ ದಂಪತಿಗೆ ಬೆಂಕಿ ಅನಾಹುತದಲ್ಲಿ ಸಣ್ಣ ಪುಟ್ಟ ಸುಟ್ಟ ಗಾಯಗಳಾಗಿದ್ದು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

## ಸಿಎನ್‌ಸಿಯಿಂದ ವೀರ ಕೊಡವ ಯೋಧರ ಸಂಸ್ಮರಣೆ ಕಾರ್ಯಕ್ರಮ



ಮಡಿಕೇರಿ,ಏ.30– ಲಕ್ಕಡಿಕೋಟೆಯಲ್ಲಿ ಆಂಗ್ಲೋ–ಮೈಸೂರು ಯುದ್ಧದಲ್ಲಿ ಮೈಸೂರು ಸುಲ್ತಾನರ ವಿರುದ್ಧ ಹೋರಾಡಿದ ವೀರ ಕೊಡವ ಯೋಧರ ಸಂಸ್ಮರಣೆ ಕಾರ್ಯಕ್ರಮ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ನಡೆಯಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ ತಾಯ್ನಾಡನ್ನು ರಕ್ಷಿಸುವಲ್ಲಿ ಕೊಡವ ಯೋಧರ ಶೌರ್ಯ, ಸರ್ವೋಚ್ಚ ತ್ಯಾಗ ಮತ್ತು ದೇಶಭಕ್ತಿಯನ್ನು ಸ್ಮರಿಸಲಾಗಿದೆ. ಕೊಡವ ಬುಡಕಟ್ಟು ಜನಾಂಗ ಯೋಧ ಕುಲವಾಗಿದ್ದು, ಸಮರ ಮನೋಭಾವಕ್ಕೆ ಕೊಡವರು ಖ್ಯಾತರಾಗಿದ್ದಾರೆ. ಲಕ್ಕಡಿಕೋಟೆ ಹಾಗೂ ಪಾಲ್ತೋಪ್–ಪಾಲ್ತೋಡ್ ಎರಡರಲ್ಲೂ ಸಿಎನ್‌ಸಿಯ ಶ್ರದ್ಧಾಂಜಲಿ ಆಚರಣೆಗಳು ಸಮುದಾಯದ ಇತಿಹಾಸ ಮತ್ತು ಪರಂಪರೆಯನ್ನು ಗೌರವಿಸುವ ಬದ್ಧತೆಯನ್ನು ಪ್ರದರ್ಶಿಸುತ್ತದೆ ಎಂದರು.

ಸಿಕ್ಕಿಂನ ಬೌದ್ಧ ಭಿಕ್ಷುಗಳಿಗಾಗಿ 'ಸಂಘ' ಮತ ಕ್ಷೇತ್ರವನ್ನು ಮೀಸಲಿಟ್ಟಂತೆ ಸಂಸತ್ತು ಮತ್ತು ವಿಧಾನಸಭೆಯಲ್ಲಿ ಕೊಡವ ಸಮುದಾಯಕ್ಕೆ ಕೂಡ ವಿಶೇಷ ಪ್ರಾತಿನಿಧ್ಯವನ್ನು ನೀಡಬೇಕು ಎಂದು ಇದೇ ಸಂದರ್ಭ ಎನ್.ಯು.ನಾಚಪ್ಪ ಅವರು ಹಕ್ಕೊತ್ತಾಯ ಮಂಡಿಸಿದರು.

ಕಾರ್ಯಕ್ರಮದಲ್ಲಿ ಜಮ್ಮಡ ಮೋಹನ್, ಕಾಂಡೇರ ಸುರೇಶ್, ಅಜ್ಜಿಕುಟ್ಟಿರ ಲೋಕೇಶ್, ಮದ್ರಿರ ಕರುಂಬಯ್ಯ, ಕಿರಿಯಮಾಡ ಶೆರಿನ್, ಪಾರ್ವಂಗಡ ನವೀನ್, ಅಪ್ಪಂಗಡ ಮಾಲೆ, ಬೊಳ್ಳೇರ ದೀಪಕ್ ಪಾಲ್ಗೊಂಡಿದ್ದರು.

## ಕಾಂತೂರು, ಮೂರ್ನಾಡು ಗ್ರಾಮ ಪಂಚಾಯಿತಿಗೆ ಪ್ರಶಸ್ತಿ ಪ್ರದಾನ



ಕಾಂತೂರು ಮೂರ್ನಾಡು ಗ್ರಾಮ ಪಂಚಾಯಿತಿಗೆ ಸಂದ ಗ್ರಾಮ ಮಿತ್ರ ಪ್ರಶಸ್ತಿಯನ್ನು ಪಂಚಾಯತಿ ಅಧ್ಯಕ ಕುಶನ್ ರೈ ಬಿ ಎಸ್, ಉಪಾಧ್ಯಕ್ಷೆ ರೇಖಾ ಬಿ ಎಸ್ ಹಾಗೂ ಪಿಡಿಓ ಚಂದ್ರಮೌಳಿ ಪ್ರಶಸ್ತಿ ಸ್ವೀಕರಿಸಿದರು.

ನಾಪೋಕ್ಲು,ಏ.30–ತಾಲೂಕಿನ ಕಾಂತೂರು ಮೂರ್ನಾಡು ಗ್ರಾಮ ಪಂಚಾಯಿತಿಗೆ ಕನ್ನಡ ಪಾಕ್ಷಿಕ ಪತ್ರಿಕೆಯ ತನ್ನ ವಾರ್ಷಿಕೋತ್ಸವದ ಪ್ರಯುಕ್ತ ಗ್ರಾಮ ಮಿತ್ರ ಪ್ರಶಸ್ತಿ ನೀಡಿ ಗೌರವಿಸಿತು,

ಬಳ್ಳಾರಿಯ ರಾಘವ ಕಲಾಮಂದಿರದಲ್ಲಿ ನಡೆದ ಪತ್ರಿಕೆಯ 11ನೇ ವರ್ಷದ ವಾರ್ಷಿಕ ಸಮಾರಂಭದಲ್ಲಿ ಸ್ಥಳೀಯ ಶಾಸಕ ನಾಡ ಭರತ್ ರೆಡ್ಡಿ ಪ್ರಶಸ್ತಿ ಪ್ರಧಾನ ಮಾಡಿದರು. ಗ್ರಾಪಂ ಅಧ್ಯಕ್ಷ ಕುಶನ್ ರೈ ಬಿ ಎಸ್, ಪಿಡಿಓ ಚಂದ್ರಮೌಳಿ ಹಾಗೂ ಉಪಾಧ್ಯಕ್ಷೆ ರೇಖಾ ಬಿ ಎಸ್ ಪ್ರಶಸ್ತಿ ಸ್ವೀಕರಿಸಿದರು.

ರಾಜ್ಯದ ನಾನಾ ಇಲಾಖೆಯ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಗಳಿಗೆ 'ಕಾಯಕ ರತ್ನ' ಪ್ರಶಸ್ತಿ ಹಾಗೂ ಉತ್ತಮ ಆಡಳಿತ ನಿರ್ವಹಣೆಯ ಗ್ರಾಮ ಪಂಚಾಯಿತಿಗೆ ರಾಜ್ಯಮಟ್ಟದ 'ಗ್ರಾಮ ಮಿತ್ರ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಎಂದು ಪತ್ರಿಕೆ ಸಂಪಾದಕ ಯಾಲ್ಪಿ ವಾಲಿ ಭಾಷಾ ತಿಳಿಸಿದರು.

## ಕೆ.ಜಯಲಕ್ಷ್ಮಿಗೆ ಮುನಿಗಂಗಮ್ಮ ಪ್ರಶಸ್ತಿ



**ಮಡಿಕೇರಿ:** ಮಡಿಕೇರಿಯ ಬರಹಗಾರ್ತಿ ಕೆ.ಜಯಲಕ್ಷ್ಮಿ ಅವರು ರಚಿಸಿರುವ 'ಮತ್ತೆ ವಸಂತ' ಕಥಾ ಸಂಕಲನಕ್ಕೆ ಮುನಿಗಂಗಮ್ಮ ಪ್ರಶಸ್ತಿ ಲಭಿಸಿದೆ. ಬೆಂಗಳೂರಿನ ಮಲ್ಲತಹಳ್ಳಿ ಬಾಲ ಗಂಗಾಧರ ನಗರದ ವಾಸುದೇವ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ಹೆಚ್.ತುಕಾರಾಂ ಅವರು ಸಾಹಿತ್ಯ ಕ್ಷೇತ್ರಕ್ಕೆ ಮತ್ತು ಬರಹಗಾರರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ತಮ್ಮ ತಾಯಿ ದಿ.ಮುನಿಗಂಗಮ್ಮ ಅವರ ಹೆಸರಿನಲ್ಲಿ ಪ್ರಶಸ್ತಿಯನ್ನು ನೀಡುತ್ತಿದ್ದಾರೆ. ಕೆ.ಜಯಲಕ್ಷ್ಮಿ ಅವರ 'ಮತ್ತೆ ವಸಂತ' ಕಥಾ ಸಂಕಲನ 2024ರಲ್ಲಿ ಪ್ರಕಟಗೊಂಡಿತ್ತು. ಪ್ರಶಸ್ತಿ ಪ್ರದಾನ ಸಮಾರಂಭ ಇದೇ ಮೇ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ನಡೆಯಲಿದೆ. ಪ್ರಶಸ್ತಿಯು 5 ಸಾವಿರ ರೂ. ನಗದು ಮತ್ತು ಪ್ರಶಸ್ತಿ ಫಲಕವನ್ನು ಹೊಂದಿರುತ್ತದೆ.

## ನಗರದಲ್ಲಿ ಬಸವ ಜಯಂತಿ ಅದ್ದೂರಿ ಮೆರವಣಿಗೆ



**ಚಾಮರಾಜನಗರ:** ನಗರದಲ್ಲಿಂದು ಬಸವೇಶ್ವರರ ಜಯಂತಿ ಮೆರವಣಿಗೆ ಸಾಂಸ್ಕೃತಿಕ ಮತ್ತು ಜಾನಪದ ಕಲಾತಂಡಗಳೊಂದಿಗೆ ಅದ್ದೂರಿಯಾಗಿ ನಡೆಯಿತು

ಬಸವೇಶ್ವರರ ಪುತ್ಥಳಿ ಮುಂಭಾಗದಿಂದ ಹೊರಟ ಮೆರವಣಿಗೆಗೆ ಜಾನಪದ ಕಲಾ ತಂಡಗಳಾದ ನಾದಸ್ವರ, ಡೊಳ್ಳುಕುಣಿತ, ಗೊರವರ ಕುಣಿತ, ಬೀಸು ಕಂಸಾಳೆ, ಹುಲಿವೇಷ, ಗಾರುಡಿ ಗೊಂಬೆ ಕುಣಿತ, ನಂದಿಕಂಬ ಕುಣಿತ, ನಗಾರಿ, ತಮಟೆ ವಾದನ ಹಾಗೂ ಈ ಬಾರಿಯ ವಿಶೇಷ ಮಹಿಳೆಯರಿಂದ ಚಂಡೆ ವಾದನಗಳು ವೈಭವಯುತ ಮೆರುಗು ತಂದವು.

ಜಿಲ್ಲಾಡಳಿತ ಭವನದಿಂದ ಆರಂಭವಾದ ಮೆರವಣಿಗೆಯು ನಗರದ ಪಚ್ಚಪ್ಪ ವೃತ್ತ, ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ ಮೂಲಕ ಸಂತೇಮರಹಳ್ಳಿ ವೃತ್ತದ ಮೂಲಕ ವೇದಿಕೆ ಕಾರ್ಯಕ್ರಮ ಆಯೋಜಿಸಿದ್ದ ಪಟ್ಟಣದ ಸರ್ಕಾರಿ ಪೇಟೆ ಪ್ರೈಮರಿ ಶಾಲಾ ಆವರಣ ತಲುಪಿತು.

ನಗರದ ಜಿಲ್ಲಾಡಳಿತ ಭವನದ ಅವರಣದಲ್ಲಿ ವಿಶೇಷವಾಗಿ ಅಲಂಕೃತ ಬೆಳ್ಳಿರಥದಲ್ಲಿಟ್ಟಿದ್ದ ಬಸವೇಶ್ವರರ ಭಾವ ಚಿತ್ರಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ, ಗಣ್ಯರು ಪೂಜೆ ಸಲ್ಲಿಸಿ ಪುಷ್ಪಾರ್ಚನೆಗೈದರು. ಅಲ್ಲಿಯೇ ಇದ್ದ ನಂದಿಧ್ವಜ ಕಂಬಕ್ಕೂ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ ಭಕ್ತಿ–ಭಾವ ಮೆರೆದರು. ಬಳಿಕ ಅಂಬೇಡ್ಕರ್ ಪ್ರತಿಮೆಗೂ ಮಾಲಾರ್ಪಣೆ ಮಾಡಿ ಗೌರವ ಸಮರ್ಪಿಸಿದರು.

ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವಸ್ವಾಮಿಗಳು, ಮರಿಯಾಲದ ಮುರುಘರಾಜೇಂದ್ರ ಸ್ವಾಮಿ ಮಠದ ಇಮ್ಮಡಿ ಮುರುಘ ರಾಜೇಂದ್ರಸ್ವಾಮಿ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಇತರರು ಮೆರವಣಿಗೆ ವೇಳೆ ಇದ್ದರು.

# ಜನರನ್ನು ಅರಿವಿನೆಡೆಗೆ ಕೊಂಡೊಯ್ದ ವಿಶ್ವಗುರು: ಸುನಿಲ್ ಬೋಸ್



ಚಾಮರಾಜನಗರ, ಏ.30–ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವ ಸರಳ ಭಾಷೆಯಲ್ಲಿ ವಚನಗಳನ್ನು ರಚಿಸಿ ಕಾಯಕದ ಮಹತ್ವವನ್ನು ಪ್ರಸ್ತುತಪಡಿಸಿದ ಬಸವಣ್ಣನವರು ಜನರನ್ನು ಅರಿವಿನೆಡೆಗೆ ಕೊಂಡೊಯ್ದು ವಿಶ್ವಗುರುವಾಗಿದ್ದಾರೆ ಎಂದು ಲೋಕಸಭಾ ಸದಸ್ಯ ಸುನಿಲ್ ಬೋಸ್ ತಿಳಿಸಿದ್ದಾರೆ.

ನಗರದ ಸರ್ಕಾರಿ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೂಢನಂಬಿಕೆ, ಜಾತೀಯ ಅಸಮಾನತೆ, ಧರ್ಮಾಚರಣೆ ಬಹಳ ಕಠಿಣವಾಗಿದ್ದ 12ನೇ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಎಲ್ಲಾ ಶಿವಶರಣರಾದಿಯಾಗಿ ಕಾಯಕ ತತ್ವದ ಮೂಲಕ ಜನರನ್ನು ಬಡಿದೆಚ್ಚರಿಸಿದರು. ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ ಕಾಯಕವೇ ಕೈಲಾಸವೆಂದು ಸಾರಿದ ಬಸವಣ್ಣವನರನ್ನು ಒಳಗೊಂಡಂತೆ ಎಲ್ಲ ಶಿವಶರಣರು ವಚನಾಮೃತಗಳನ್ನು ಜನರಿಗೆ ಉಣಬಡಿಸಿದ್ದಾರೆ. ಎಲ್ಲರೂ ಎನಗಿಂತ ದೊಡ್ಡವರೆಂದು ಭಾವಿಸಿದ್ದ ಬಸವಣ್ಣನವರಿಗೆ ಯಾವುತ್ತೂ ಅಹಂ ಎಂಬುದು ಇರಲಿಲ್ಲ. ಸಮಾಜ ಸುಧಾರಣೆಗಾಗಿ ಜಾತೀಯತೆಯನ್ನು ಹೋಗಲಾಡಿಸಿ ಬಸವಣ್ಣನವರ ಅದರ್ಶ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅನುಸರಿಸೋಣ ಎಂದರು.

ಮೈಸೂರಿನ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಡಿ.ಎಸ್.ಸದಾಶಿವಮೂರ್ತಿ ಮಾತನಾಡಿ, ಕಾಯಕ, ದಾಸೋಹ, ಅಸಮಾನತೆ, ಸ್ತ್ರೀ ಸಮಾನತೆ ಸೇರಿದಂತೆ ಹಲವು ಕ್ಷೇತ್ರಗಳ ಪರಿವರ್ತನೆಗೆ ನಾಂದಿ ಹಾಡಿದ ಬಸವಣ್ಣನವರನ್ನು ಸಮಗ್ರ ಯುಗಪುರುಷರೆಂದರೆ ತಪ್ಪಾಗಲಾರದು. ಜಾಗತಿಕ ಸಂಸ್ಕೃತಿಗೆ ಘನತೆ ತಂದುಕೊಟ್ಟ ಬಸವಣ್ಣನವರನ್ನು ಸ್ಮರಿಸುವುದು ಇಂದಿಗೂ ಅಗತ್ಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮಿಗಳು ಆಶೀರ್ವಚನ ನೀಡಿದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಜಿಲ್ಲಾ ಉಸ್ತುವಾರಿ ಸಚಿವರ ಸಂದೇಶ ವಾಚನ ಮಾಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ ಅವರು ಸಂವಿಧಾನ ಪ್ರಸ್ತಾವನೆ ಬೋಧಿಸಿದರು.

ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ಚಂದ್ರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ (ಮುನ್ನಾ), ನಗರಸಭೆ ಸದಸ್ಯ ಎಂ. ಕಲಾವತಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ನಂಜುಂಡಯ್ಯ, ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಮುಖ್ಯಮಂತ್ರಿಗಳೇ ಒಡಕು ಧ್ವನಿ ಹಾಡುವುದು ಸರಿಯಲ್ಲ: ಎನ್.ಮಹೇಶ್



**ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಗಣ್ಯರು ಪುಷ್ಪಾರ್ಚನೆ ಮಾಡಿದರು.**

ಚಾಮರಾಜನಗರ,ಏ.30–ದೇಶದ ಸುರಕ್ಷತೆ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಡಕು ಧ್ವನಿ ಹಾಡುವುದು ಸರಿಯಲ್ಲ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಟೀಕಿಸಿದ್ದಾರೆ.

ನಗರದ ರಾಮಸಮುದ್ರ ಕುಲುಮೆ ರಸ್ತೆಯಲ್ಲಿರುವ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ದೇಶ ರಕ್ಷಣೆಗಾಗಿ ಪ್ರತಿಯೊಬ್ಬರ ಭಾರತೀಯರು ಒಗ್ಗಟ್ಟಾಗಿ ನಿಲ್ಲಬೇಕು. ಇಡೀ.. ದೇಶದ ಪ್ರಜೆಗಳು ಒಕ್ಕೊರಲಿನಿಂದ ನಮ್ಮ ಶತ್ರು ರಾಷ್ಟ್ರಗಳನ್ನು ದಿಟ್ಟವಾಗಿ ಎದುರಿಸಲು ಕೇಂದ್ರ ಸರ್ಕಾರಕ್ಕೆ ಜವಾಬ್ದಾರಿ ಕೊಟ್ಟು ಸುಮ್ಮನೆ ಇರಬೇಕಿತ್ತು ಅದು ಬಿಟ್ಟು ಕೊಂಕು ನುಡಿಯುವುದು ಸರಿಯಲ್ಲ ಎಂದು ಪ್ರತಿಕ್ರಿಯಿಸಿದರು.

12ನೇ ಶತಮಾನದಲ್ಲಿ ತಾಂಡವವಾಡುತ್ತಿದ್ದ ಸಾಮಾಜಿಕ ಅಸಮಾನತೆ, ಮೌಢ್ಯ, ಕಂದಾಚಾರಗಳನ್ನು ಕಿತ್ತೊಗೆಯುವ ನಿಟ್ಟಿನಲ್ಲಿ ಬಸವಣ್ಣ ಸೇರಿದಂತೆ ದಾಸೋಹ ಮತ್ತು ಕಾಯಕದ ಪರಿಕಲ್ಪನೆಯ ಕುರಿತು ಜಾಗೃತಿ ಮೂಡಿಸಿದರು ಎಂದು ಕಾಡಾ ಮಾಜಿ ಅಧ್ಯಕ್ಷ ನಿಜಗುಣರಾಜು ಬಣ್ಣಿಸಿದರು.ಚೂಡಾ ಮಾಜಿ ಅಧ್ಯಕ್ಷ ಕುಲಗಾಣ ಶಾಂತಮೂರ್ತಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಭೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹಾದೇವಸ್ವಾಮಿ, ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಮಾಜಿ ಜಿಲ್ಲಾಧ್ಯಕ್ಷರಾದ ಆರ್ ಸುಂದರ್, ಜಿಲ್ಲಾ ಪ್ರಕೋಷ್ಠ ಸಂಚಾಲಕರಾದ ಕಿಲಗೆರೆ ಬಸವರಾಜ್, ಚಾಮುಲ್ ಮಾಜಿ ಅಧ್ಯಕ್ಷ ವೈ.ಸಿ. ನಾಗೇಂದ್ರ, ಡಾ.ಬಾಬು,ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಸಿಎನ್ ಬಾಲರಾಜ್, ಉಪಾಧ್ಯಕ್ಷ ಶಿವುವಿರಾಟ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಸುಂದ್ರಪ್ಪ, ಜಿಲ್ಲಾ ಮಾಧ್ಯಮ ಪ್ರಮುಖ್ ರಾಮಸಮುದ್ರ ಶಿವಣ್ಣ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಮಧ್ಯಮ ಪ್ರಮುಖ ವೀರೇಂದ್ರ, ವೇಣುಗೋಪಾಲ್, ಪರಶಿವಯ್ಯ, ಎಸ್‌ಟಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಬುಲೆಟ್ ಚಂದ್ರು, ಕಾರ್ಯಾಲಯ ಕಾರ್ಯದರ್ಶಿ ಪಿ.ರಂಗಸ್ವಾಮಿ ಇತರರು ಹಾಜರಿದ್ದರು.

## ನಾಯಿಯನ್ನು ರಕ್ಷಿಸಲು ಹೋಗಿ ಪ್ರಾಣ ತೆತ್ತ



**ಚಾಮರಾಜನಗರ:** ವಿದ್ಯುತ್ ತಂತಿ ತಗುಲಿದ್ದ ನಾಯಿಯನ್ನು ರಕ್ಷಿಸಲು ಹೋದವನಿಗೂ ವಿದ್ಯುತ್ ಪ್ರವಹಿಸಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದ ಸಮೀಪದ ಜಾಲಹಳ್ಳಿ ಹುಂಡಿಯ ಹೊಸ ಬಡಾವಣೆಯಲ್ಲಿ ಬೆಳಗ್ಗೆ ನಡೆದಿದೆ.

ಗ್ರಾಮದ ನಿವಾಸಿ ಚಂದ್ರು(38) ಮೃತಪಟ್ಟವರು. ಬೆಳಗ್ಗೆ ಮನೆಯಿಂದ ಹೊರಬಂದಾಗ ಪಕ್ಕದ ಖಾಲಿ ನಿವೇಶನದಲ್ಲಿ ವಿದ್ಯುತ್ ಸ್ಪರ್ಶಗೊಂಡಿದ್ದ ತಂತಿ ಬೇಲಿಗೆ ನಾಯಿಯೊಂದು ಸಿಲುಕಿ ನರಳಾಡುತ್ತಿತ್ತು. ಇದನ್ನು ಗಮನಿಸಿದ ಚಂದ್ರು, ತಕ್ಷಣವೇ ನಾಯಿಯನ್ನು ರಕ್ಷಿಸಲು ತೆರಳಿದ್ದಾನೆ. ಆದರೆ, ಈತನಿಗೂ ವಿದ್ಯುತ್ ಪ್ರವಹಿಸಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಮೃತನಿಗೆ ಇಬ್ಬರು ಮಕ್ಕಳಿದ್ದಾರೆ. ಸ್ಥಳಕ್ಕೆ ಪಟ್ಟಣ ಠಾಣೆಯ ಪೊಲೀಸರು, ಚೆಸ್ಕ್ ನಿಗಮದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಶಾಸಕ ಸಿ. ಪುಟ್ಟರಂಗಶೆಟ್ಟಿ ಕುಟುಂಬದವರಿಗೆ ಸಾಂತ್ವನ ಹೇಳಿ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.

## ರಸ್ತೆ ಕಾಮಗಾರಿಗೆ ಶಾಸಕರಿಂದ ಭೂಮಿಪೂಜೆ

**ಚಾಮರಾಜನಗರ:** ರಾಮಸಮುದ್ರ ಪರಿಶಿಷ್ಟ ಜಾತಿ ಚಿಕ್ಕಬೀದಿ ಬಡಾವಣೆಯಲ್ಲಿ ಎಸ್‌ಇಪಿ ಯೋಜನಾಡಿಯಲ್ಲಿ 50 ಲಕ್ಷ ರೂ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು. ಪಟ್ಟಣಪ್ರದೇಶದಲ್ಲಿ ಈಗಾಗಲೇ ರಸ್ತೆಚರಂಡಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಮೂಲಕ ಸಾರ್ವಜನಿಕರಿಗೆ ಅನೂಕೂಲ ಮಾಡಿಕೊಡಲಾಗಿದೆ. ಸಾರ್ವಜನಿಕರು ಮುಂದೆ ನಿಂತು ಗುಣಮಟ್ಟದ ಕಾಮಗಾರಿ ಮಾಡಿಸಿಕೊಳ್ಳಬೇಕು, ಜನರು ತುಂಬುಹೃದಯದ ಸಹಕಾರ ನೀಡಬೇಕು ಎಂದು.

## ಹಿಂದೂ ಜಾಗೃತಿ ವೇದಿಕೆಯಿಂದ ಕುಡಿಯುವ ನೀರು ವಿತರಣೆ

**ಚಾಮರಾಜನಗರ:** ನಗರಸಭಾ ಕಚೇರಿ ಬಳಿ ಹಿಂದೂ ಜಾಗೃತಿ ವೇದಿಕೆಯಿಂದ ಬಸವಣ್ಣ ಭಾವಚಿತ್ರಕ್ಕೆ ವಿಶೇಷ ಪೂಜೆ ಮಾಡಿ ನಂತರ ಮೆರವಣಿಯಲ್ಲಿ ಬಂದವರಿಗೆ ತಂಪಾದ ನೀರನ್ನು, ವಿತರಣೆ ಮಾಡಲಾಯಿತು.

ವೇದಿಕೆ ಅಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ಬಸವಣ್ಣ ಸಮಾನತೆಯ ಹಾಗೂ ಮಾನವತೆಯ ಹರಿಕಾರರು, ಎಲ್ಲರನ್ನು ಅಪ್ಪಿಕೊಂಡು ಅನುಭವ ಮಂಟಪ ಸ್ಥಾಪಿಸಿ, ಎಲ್ಲರಿಗೂ ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಂಡು, ವಚನಗಳನ್ನು ರಚಿಸಲು ಅನುವು ಮಾಡಿಕೊಟ್ಟರು ಎಂದರು. ವೇದಿಕೆ ಸಂಚಾಲಕ ಕೃಷ್ಣಕುಮಾರ್, ಮುಖಂಡರಾದ ಬಿ.ಕೆ. ರವಿಕುಮಾರ್, ಸುರೇಶ್‌ನಾಯಕ ಕೇಶವಮೂರ್ತಿ, ಬಸಪ್ಪ, ಮಹೇಶ್ ಇತರರಿದ್ದರು.

## ಗಾಯಾಳುಗಳಿಗೆ ಸಕಾಲದಲ್ಲಿ ಚಿಕಿತ್ಸೆ ಕೊಡಿಸಿ ಮಾನವೀಯತೆ ಮೆರೆದ ಶಾಸಕ ಎಆರ್‌ಕೆ



ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ಬೈಕ್ ಅಪಘಾತದಲ್ಲಿ ಗಾಯಗೊಂಡಿದ್ದವರನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ದಾಖಲಿಸಿರುವುದು.

**ಕೊಳ್ಳೇಗಾಲ:** ತಾಲೂಕಿನ ಉತ್ತಂಬಳ್ಳಿ ಗ್ರಾಮದ ಬಳಿ 2 ಬೈಕ್ ನಡುವೆ ಅಪಘಾತ ಉಂಟಾಗಿ ಗಾಯಗೊಂಡಿದ್ದ ಇಬ್ಬರು ಬೈಕ್ ಸವಾರರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುವ ಮೂಲಕ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾನವೀಯತೆ ಮೆರೆದಿದ್ದಾರೆ.

ಯಳಂದೂರು ತಾಲೂಕಿನ ಮಾಂಬಳ್ಳಿ ಗ್ರಾಮದ ಉಲ್ಲಾಸ್, ಉತ್ತುಂಬಳ್ಳಿ ಗ್ರಾಮದ ನಿಂಗರಾಜು ಗಾಯಾಳುಗಳು. ಉತ್ತಂಬಳ್ಳಿ ಗ್ರಾಮದಲ್ಲಿ ಹಾದು ಹೋಗಿರುವ ಎನ್.ಎಚ್ ಫ್ಲೈಓವರ್ ಬಳಿ ಎರಡು ಬೈಕ್ ನಡುವೆ ಅಪಘಾತ ಏರ್ಪಟ್ಟಿತ್ತು. ಪರಿಣಾಮ ಇಬ್ಬರು ಬೈಕ್ ಸವಾರರು ಗಾಯಗೊಂಡು ನರಳುತ್ತಿದ್ದರು. ಈ ವೇಳೆ ಅದೇ ರಸ್ತೆಯಲ್ಲಿ ಕೊಳ್ಳೇಗಾಲದ ಬಸವ ಜಯಂತಿ ಕಾರ್ಯಕ್ರಮಕ್ಕೆ ಪಾಲ್ಗೊಳ್ಳಲು ಆಗಮಿಸುತ್ತಿದ್ದ ಶಾಸಕರು ಇದನ್ನು ಗಮನಿಸಿ ಕಾರು ನಿಲ್ಲಿಸಿದರು. ಗಾಯಾಳುಗಳ ಬಳಿ ತೆರಳಿ ತಮ್ಮೊಟ್ಟಿಗಿದ್ದ ಯಳಂದೂರು ಕಚೇರಿ ಸಹಾಯಕ ವಿಜಯಕುಮಾರ್, ಆಪ್ತ ಸಹಾಯಕ ಚೇತನ್, ಗನ್‌ಮ್ಯಾನ್ ಸಹಾಯದಿಂದ ಪೊಲೀಸ್ ಇಲಾಖೆ ವಾಹನದ ಮೂಲಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು. ಬಳಿಕ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ರಾಜಶೇಖರ್‌ಗೆ ಗಾಯಾಳುಗಳಿಗೆ ಚಿಕಿತ್ಸೆ ನೀಡುವಂತೆ ಸೂಚಿಸಿದರು. ತೀವ್ರವಾಗಿ ಗಾಯಗೊಂಡಿದ್ದ ಉಲ್ಲಾಸ್‌ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು.

## ಎಸ್.ಚಂದ್ರಶೇಖರ್ ಅವರಿಗೆ ಶುಭ ಕೋರಿಕೆ



ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಅಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್.ಚಂದ್ರಶೇಖರ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸೊಸೈಟಿಯ ನಿರ್ದೇಶಕ ರಾಜಶೇಖರ ಕದಂಬ, ರಾಮಾರಾಧ್ಯ, ಹನುಮಂತೇಗೌಡ, ಪ್ರವೀಣ್ ಸನ್ಮಾನಿಸಿ, ಶುಭ ಕೋರಿದರು.

## ಬಸವ ಜಯಂತಿ ಆಚರಣೆ



ಕಡಕೊಳ ಗ್ರಾಮದ ಕನ್ನಡ ಗೆಳೆಯರ ಬಳಗದ ವತಿಯಿಂದ ಶ್ರೀ ಬಸವೇಶ್ವರ ಜಯಂತಿ ಆಚರಿಸಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ಮಂಜುನಾಥ್, ಪುಟ್ಟಮಾದು, ಜವರೇಗೌಡ, ಕೆ.ಟಿ.ಶಿವಣ್ಣ, ಆಯುಬ್ ಖಾನ್, ಮಹೇಶ್, ಗೌಡಿಕೆ ಸ್ವಾಮಿ ನಾಯಕ, ಮಹಾದೇವ, ಡೈರಿ ಮಹದೇವಣ್ಣ, ಚಂದ್ರಪ್ಪ, ಶಿವಪ್ಪ, ಟಿ.ಪಿ.ಶ್ರೀಕಂಠ, ಗೋವಿಂದರಾಜು, ರಂಗಸ್ವಾಮಿ, ಯಶ್ವಂತ್, ಜವರನಾಯಕ ಮತ್ತಿತರರು ಉಪಸ್ಥಿತರಿದ್ದರು.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23




**ಮೈಸೂರು ಮಿತ್ರ 46 ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಜಾತಿ ಮತ ತಿರಸ್ಕರಿಸಿದ ಬಸವಣ್ಣರಿಂದ ಸಾಮಾಜಿಕ ಕ್ರಾಂತಿ

## ವೀರಶೈವ ಲಿಂಗಾಯಿತ ಮಹಾಸಭಾ ತಾಲೂಕು ಅಧ್ಯಕ್ಷ ಸಿ.ಎಂ.ಪ್ರಕಾಶ್





ತಿ.ನರಸೀಪುರದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಬಸವೇಶ್ವರ ಜಯಂತಿ ಆಚರಿಸಲಾಯಿತು.

ತಿ.ನರಸೀಪುರ, ಏ.30– ಜಾತಿ ಮತ ತಿರಸ್ಕರಿಸಿದ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಕಾರಣರಾದರು ಎಂದು ವೀರಶೈವ ಲಿಂಗಾಯಿತ ಮಹಾಸಭಾ ತಾಲೂಕು ಅಧ್ಯಕ್ಷ ಸಿ.ಎಂ.ಪ್ರಕಾಶ್ ತಿಳಿಸಿದರು.

ಪಟ್ಟಣದ ವಿವೇಕಾನಂದ ನಗರದಲ್ಲಿರುವ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರರ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಅವರು ಮಾತನಾಡಿದರು.

ಬಸವಣ್ಣನವರು 12ನೇ ಶತಮಾನದಲ್ಲಿ ಜನಸಾಮಾನ್ಯರ ನೋವುಗಳನ್ನು ಕಂಡು ತಮ್ಮ ಜೀವನವನ್ನು ಬಡವರ ಸೇವೆಗೆ ಹಾಗೂ ದೇವರ ಆರಾಧನೆಗೆ ಮುಡಿಪಾಗಿಟ್ಟಿದ್ದರು. ಜಾತಿ ಮತ ತಿರಸ್ಕರಿಸಿದ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಕಾರಣರಾದರು. ಕ್ರಾಂತಿಯೋಗಿ ಬಸವಣ್ಣ, ಭಕ್ತಿ ಬಂಡಾರಿ ಬಸವಣ್ಣ ಇನ್ನು ಮುಂತಾದ ಹೆಸರುಗಳನ್ನೊಳಗೊಂಡ ಬಸವಣ್ಣನವರ ಜನ್ಮದಿನವನ್ನು ಆಚರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಜನತೆ ಬಸವಣ್ಣನವರ ವಚನದಲ್ಲಿರುವ ತತ್ವ, ಸಿದ್ಧಾಂತ, ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.

ಇಷ್ಟಲಿಂಗದ ಮೂಲಕ ಮಾನವ ಕಲ್ಯಾಣ ಬಯಸಿದವರಲ್ಲಿ ಬಸವಣ್ಣ ಪ್ರಮುಖರು. ಮೌಢ್ಯ ಧಿಕ್ಕರಿಸಿ ಜನ ಸಾಮಾನ್ಯರಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸಿದವರು. ಬಸವಾದಿ ಶರಣರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಬಸವ ಅಭಿಮಾನಿಗಳಾಗುವುದಕ್ಕಿಂತ, ಅವರ ಅನುಯಾಯಿಗಳಾಗಬೇಕು. ಆಗ ಮಾತ್ರ ಶರಣರು ಕಂಡ ಜಾತಿ ರಹಿತ, ವರ್ಗ ರಹಿತ ಸಮಾಜ ನಿರ್ಮಿಸಲು ಸಾಧ್ಯ ಎಂದರು.

ವಿಶ್ವಗುರು ಬಸವಣ್ಣ ಪ್ರತಿಯೊಬ್ಬರ ಕಲ್ಯಾಣಕ್ಕಾಗಿ ವಚನಗಳನ್ನು ರಚಿಸಿ ಸುಂದರ ಸಮಾಜ ಕಟ್ಟಲು ಮುಂದಾಗಿದ್ದರು. ಬಸವ ತತ್ವ ಸಾರ್ವಕಾಲಿಕ ಸತ್ಯಗಳಾಗಿವೆ. ಬಸವಣ್ಣ ಯಾವುದೇ ಒಂದು ಸೀಮಿತ ವರ್ಗಕ್ಕೆ ಸೇರಿದವರಲ್ಲ. ಬದಲಾಗಿ ಸರ್ವ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಸಮಾಜದವರು ಬಸವ ಜಯಂತಿಯನ್ನು ವಿಭಿನ್ನವಾಗಿ ಆಚರಿಸುವ ಮೂಲಕ ತತ್ವಗಳನ್ನು ಪ್ರತಿಯೊಬ್ಬರ ಮನೆ–ಮನಕ್ಕೆ ಮುಟ್ಟಿಸುವ ಕೆಲಸ ಮಾಡಬೇಕಿದೆ ಎಂದರು.

ಸಭಾದ ಉಪಾಧ್ಯಕ್ಷ ಎಸ್.ಕೆ.ಕಿರಣ್, ಮಹಿಳಾ ಉಪಾಧ್ಯಕ್ಷೆ ಪಿ.ಎಸ್.ಅಂಬಿಕಾ, ಮಹಾಪೋಷಕ ಬಿ.ಎಂ.ಶಿವಮಲ್ಲಪ್ಪ, ಪ್ರಧಾನ ಕಾರ್ಯದರ್ಶಿ ಕೆ.ವಿ.ಶಿವಶಂಕರ್, ಮಹಿಳಾ ಕಾರ್ಯದರ್ಶಿ ಅಶ್ವಿನಿ, ಕಾರ್ಯದರ್ಶಿ ಪರಮೇಶ್ ಪಟೇಲ್, ಕೋಶಾಧ್ಯಕ್ಷ ಜಿ.ನಂಜುಂಡಸ್ವಾಮಿ, ಕಾರ್ಯದರ್ಶಿ, ಚನ್ನಮಲ್ಲಿಕಾರ್ಜುನಸ್ವಾಮಿ, ಕಾರ್ಯಕಾರಿಣಿ ಸದಸ್ಯರಾದ ಎಸ್.ಬಿ.ಸುಗಂಧರಾಜು, ತೋಂಟೇಶ್, ಓಂಕಾರಸ್ವಾಮಿ, ಎಂ. ಗುರುಸ್ವಾಮಿ, ಬಿ.ಎಂ. ವಿಜಯ್ ಕುಮಾರ್, ಕೆ.ಎಂ.ಮಲ್ಲು, ಎಂ. ಪರಶಿವಮೂರ್ತಿ, ಎಂ.ಸುರೇಶ್, ಟಿ.ಪಿ ಶಿವಕುಮಾರಸ್ವಾಮಿ, ಮಹಿಳಾ ಕಾರ್ಯಕಾರಿಣಿ ಸದಸ್ಯರಾದ ಟಿ.ಎಸ್. ರಾಜಮ್ಮಣ್ಣಿ ಜಿ.ಎಸ್.ಸುಧಾ, ಬಿ.ಎಸ್. ಜ್ಞಾನೇಶ್ವರಿ, ಕೆ.ಎಂ.ಮಲ್ಲಿಕಾ, ಸವಿತ, ಮಹಾ ಪೋಷಕರಾದ ಟಿ.ಎಸ್. ಲೋಕೇಶ್, ಮಹದೇವ್ ಪ್ರಸಾದ್, ಟಿ.ಎಂ.ರವಿ, ಪಿ.ಪರಶಿವಮೂರ್ತಿ, ಕುಮಾರ್, ಎಂ.ಮಹೇಶ್ ಸೇರಿದಂತೆ ಸಮಾಜದ ಮುಖಂಡರಿದ್ದರು.

## ಶ್ರೇಷ್ಠ ಸಮಾಜ ಸುಧಾರಕ ಜಗಜ್ಯೋತಿ ಬಸವಣ್ಣ



ಪುರಸಭೆಯಲ್ಲಿ ಶ್ರೀಬಸವೇಶ್ವರ ಜಯಂತಿ ನಡೆಯಿತು.

**ತಿ.ನರಸೀಪುರ:** ಪರಿಪೂರ್ಣ ಸಮಾನತೆಯ ಸಮಾಜ ತತ್ವವನ್ನು ಪ್ರತಿಪಾದಿಸಿದ ಕೀರ್ತಿ ಬಸವಣ್ಣ ಅವರಿಗೆ ಸಲ್ಲುತ್ತದೆ ಎಂದು ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ತಿಳಿಸಿದರು.

ಪಟ್ಟಣದ ಪುರಸಭೆಯಲ್ಲಿ ನಡೆದ ಬಸವ ಜಯಂತಿಯಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಮಾತನಾಡಿದ ಅವರು, 12ನೇ ಶತಮಾನದ ಅಂದಿನ ಸಮಾಜ ತಾರತಮ್ಯದಿಂದ ಕೂಡಿತ್ತು. ಶೋಷಿತರು, ದೀನದಲಿತರು ಹಾಗೂ ಮಹಿಳೆಯರು ಅಭಿವ್ಯಕ್ತಿ ಸ್ವಾತಂತ್ರ್ಯವಿಲ್ಲದೆ ತಮ್ಮ ದನಿಯನ್ನೇ ಕಳೆದುಕೊಂಡಿದ್ದರು. ಅಂತಹ ಸಂದರ್ಭದಲ್ಲಿ ಬಸವಣ್ಣನವರು ಅನುಭವ ಮಂಟಪದ ಮೂಲಕ ಸಮಾಜದ ಕಟ್ಟಕಡೆಯವರನ್ನು ಒಂದೆಡೆ ಕಲೆಹಾಕಿ ತಮ್ಮ ಸರಳ ವಚನ ಸಾಹಿತ್ಯದ ಮೂಲಕ ಎಲ್ಲರನ್ನು ಜಾಗೃತಗೊಳಿಸಿದರು. ಆ ಮೂಲಕ ಸಮಾನತೆಯ ತತ್ವ ವಿಚಾರಗಳಿಗೆ ಮುನ್ನುಡಿ ಬರೆದ ಬಸವಣ್ಣ ಅವರು ಶ್ರೇಷ್ಠ ಸಮಾಜ ಸುಧಾರಕರಾದರು ಎಂದರು.

ಪುರಸಭೆ ಸದಸ್ಯ ಹಾಗೂ ವೀರಶೈವ ಮಹಾಸಭಾ ತಾಲೂಕು ಉಪಾಧ್ಯಕ್ಷ ಎಸ್.ಕೆ.ಕಿರಣ್ ಮಾತನಾಡಿ, ಕಾಯಕವೇ ಕೈಲಾಸ ತತ್ವದಡಿ ಎಲ್ಲರೂ ಸಮಾನರು. ಯಾವುದೇ ಕೆಲಸದಲ್ಲಿ ಮೇಲು–ಕೀಳಿಲ್ಲ ಎಂದು ಸಾರಿದ ಬಸವಣ್ಣ ಅವರು ಸಾಮಾಜಿಕ ಕ್ರಾಂತಿಯ ಹರಿಕಾರರು ಹೌದು. ದೇಶದಲ್ಲಿ ಅನುಭವ ಮಂಟಪದ ಮೂಲಕ ಸಾಮೂಹಿಕ ಶಿಕ್ಷಣಕ್ಕೆ ಚಾಲನೆ ನೀಡಿದವರಲ್ಲಿ ಬಸವಣ್ಣ ಮೊದಲಿಗರು. ವಿದ್ಯೆಯಿಂದ ವಂಚಿರಾದವರಿಗೆ, ಮಹಿಳೆಯರಿಗೆ ಅಲ್ಲಿ ಶಿಕ್ಷಣ ಹಾಗೂ ಅಭಿಪ್ರಾಯ ವ್ಯಕ್ತಪಡಿಸಲು ಮುಕ್ತ ಅವಕಾಶ ಮಾಡಿಕೊಟ್ಟು ಸಾಮಾಜಿಕ ಬದಲಾವಣೆಗೆ ಕಾರಣರಾದರು ಎಂದರು.

ಪುರಸಭಾಧ್ಯಕ್ಷೆ ಬಿ.ವಸಂತ, ಸದಸ್ಯರಾದ ಬಾದಾಮಿ ಮಂಜು, ಸಿಸ್ಟಮ್ ಸಿದ್ದು, ಮೆಡಿಕಲ್ ನಾಗರಾಜು, ಎನ್.ಸೋಮು, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ, ವ್ಯವಸ್ಥಾಪಕ ಮಹೇಂದ್ರ, ಕಿರಿಯ ಅಭಿಯಂತರ ಸಿದ್ದಪ್ಪ ಸಮುದಾಯ ಸಂಘಟಕ ಅಧಿಕಾರಿ ಕೆ.ಮಹದೇವ್, ಹಿರಿಯ ಆರೋಗ್ಯಾಧಿಕಾರಿ ಚಂಪಾ, ಆರ್.ಐ. ಅಶೋಕ್, ರಾಮು, ತ್ರಿವೇಣಿ, ರವಿ, ಶಿವಣ್ಣ ಜಯಲಕ್ಷ್ಮಿ, ಚಂದ್ರು, ಮುಖಂಡರಾದ ಮಾದೇಶ್, ಶ್ರೀಕಂಠ ಸೇರಿದಂತೆ ನೌಕರರ ವರ್ಗ ಹಾಜರಿದ್ದರು.

# ಕಾಯಕ, ದಾಸೋಹದ ಮಹತ್ವ ಸಾರಿದ ಬಸವಣ್ಣ

## ಬಸವ ಜಯಂತಿಯಲ್ಲಿ ಶಾಸಕ ದರ್ಶನ್ ಬಣ್ಣನೆ



ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ನಂಜನಗೂಡು, ಏ.30– ವಿಶ್ವಕ್ಕೆ ಕಾಯಕ ಮತ್ತು ದಾಸೋಹದ ಮಹತ್ವ ಸಾರಿದ, 12ನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪಿಸಿ ತುಳಿತಕ್ಕೆ ಒಳಗಾದವರಿಗೆ ಸಾಮಾನತೆ ನೀಡಿದ ಮಹಾತ್ಮ ಬಸವಣ್ಣ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಆಡಳಿತಸೌಧದ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣನವರ ತತ್ವ, ಸಿದ್ಧಾಂತಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಕಾಯಕಕ್ಕೆ ನಿಷ್ಠರಾಗಿ ತಮ್ಮ ಕ್ಷೇತ್ರದಲ್ಲಿ ದುಡಿಯುವಂತಾದರೆ ಬಸವಣ್ಣನವರನ್ನು ಗೌರವಿಸಿದಂತೆ. 12ನೇ ಶತಮಾನದಲ್ಲಿ ಪಾಲಿಸಿದ ಕಾಯಕ ನಿಷ್ಠೆ, ತುಳಿತಕ್ಕೊಳಗಾದ ಸಮಾಜಗಳನ್ನು ಗುರ್ತಿಸಿ ಅವರಿಗೆ ಸಮಾನತೆ ದೊರಕಿಸಿ, ಸಮಾಜ ಸುಧಾರಣೆ ಮಾಡಿದ ಕ್ರಾಂತಿ ಪುರುಷ ಬಸವಣ್ಣನವರು. ಶಾಸಕನಾಗಿ ಜಾತ್ಯಾತೀತವಾಗಿ ಎಲ್ಲರನ್ನೂ ಒಳಗೊಂಡತೆ ನಿಸ್ವಾರ್ಥದಿಂದ ಕ್ಷೇತ್ರದ ಜನತೆ ಸೇವೆ ಮಾಡುತ್ತಿದ್ದೇನೆ. ಬುದ್ಧ, ಬಸವ, ಅಂಬೇಡ್ಕರ್ ಅವರ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪ್ರಾಮಾಣಿಕವಾಗಿ ಕ್ಷೇತ್ರದ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದ್ದೇನೆ. ಇದರಿಂದ ತೃಪ್ತಿ ದೊರಕಿದೆ ಎಂದರು.

ನಗರದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಮೇ 25ರಂದು ಅದ್ದೂರಿಯಾಗಿ ಬಸವ ಜಯಂತಿ ನಡೆಯಲಿದೆ. ಅಂದು ನಗರದಲ್ಲಿ ಅದ್ದೂರಿ ಮೆರವಣಿಗೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಇದೇ ವೇಳೆ ಶಾಸಕರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿ, ಸನ್ಮಾನಿಸಿದರು.

ಮಾಜಿ ಶಾಸಕ ಕೇಶವಮೂರ್ತಿ, ತಾಲೂಕು ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಕೆಂಪಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹೇಶ್, ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರೆಹೆನಾ ಬಾನು, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ. ಮಾರುತಿ, ಮುಖಂಡರಾದ ಎಂ.ಮಾದಪ್ಪ, ಹೆಚ್.ಕೆ.ಚೆನ್ನಪ್ಪ, ಶಿವಪ್ಪದೇವರು, ನಗರಸಭಾ ಸದಸ್ಯರಾದ ಗಾಯಿತ್ರಿ, ಶ್ವೇತಲಕ್ಷ್ಮಿ, ರವಿ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್, ನಗರಸಭೆ ಆಯುಕ್ತ ವಿಜಯ್, ಬಿಇಓ ಮಹೇಶ್ ಉಪಸ್ಥಿತರಿದ್ದರು.

# ಯುವ ಜನತೆ ಬಸವಣ್ಣನವರ ತತ್ವಾದರ್ಶ ಮೈಗೂಡಿಸಿಕೊಳ್ಳಿ

## ಶಾಸಕ ಡಿ.ರವಿಶಂಕರ್



ಬಸವ ಜಯಂತಿಯನ್ನು ಶಾಸಕ ಡಿ.ರವಿಶಂಕರ್ ಉದ್ಘಾಟಿಸಿದರು.

ಕೆ.ಆರ್.ನಗರ, ಏ.30– ಬಸವಣ್ಣನವರು ಕಾಯಕ ಸಿದ್ಧಾಂತ ಭೋದಿಸಿ ದುಡಿಯುವ ಜನರ ಸಮಾಜ ನಿರ್ಮಾಣ ಮಾಡಲು ಶ್ರಮಿಸಿದ ಮಹಾನ್ ಪುರುಷ. ಇವರ ತತ್ವಾದರ್ಶಗಳನ್ನು ಯುವ ಜನತೆ ಮೈಗೂಡಿಸಿ ಕೊಂಡಾಗ ಮಾತ್ರ ಸಮ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಬಸವೇಶ್ವರ ಬಡಾವಣೆಯಲ್ಲಿರುವ ಬಸವಣ್ಣನವರ ದೇವಾಲಯದ ಆವರಣದಲ್ಲಿ ತಾಲೂಕು ಆಡಳಿತ, ತಾಪಂ ಮತ್ತು ಪುರಸಭೆ ಸಂಯುಕ್ತಾಶ್ರಯದಲ್ಲಿ ನಡೆದ ಕರ್ನಾಟಕ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರರ ಜಯಂತಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೂಢನಂಬಿಕೆ ಅಸ್ಪೃಶ್ಯತೆ, ಜಾತಿ ವ್ಯವಸ್ಥೆ ಹಾಗೂ ಚಾತುರ್ವರ್ಣ ಸಿದ್ಧಾಂತ ವಿರೋಧಿಸಿ ಸಮಾನತೆಯ ಸಂದೇಶ ಸಾರಿದ ಬಸವಣ್ಣನವರು ವಿಶ್ವ ಗುರುವಾಗಿದ್ದು, ಅವರ ವಚನಗಳು ಮನುಕುಲಕ್ಕೆ ದಾರಿ ದೀಪವಾಗಿದ್ದು ಇದನ್ನು ಜನತೆ ಅರಿತು ನಡೆಯಬೇಕೆಂದರು.

ನಗರದ ಬಸವೇಶ್ವರ ಬಡಾವಣೆಯಲ್ಲಿರುವ ದೇವಿರಮ್ಮ ಶಿಶುವಿಹಾರ ಮೈದಾನದಲ್ಲಿ ಹಿರಿಯ ನಾಗರಿಕರು ಮತ್ತು ಸಾರ್ವಜನಿಕರು ವಾಯು ವಿಹಾರ ಮಾಡಿ ವಿಶ್ರಾಂತಿ ಪಡೆಯಲು ಅನುಕೂಲವಾಗುವಂತೆ ಅಭಿವೃದ್ಧಿ ಪಡಿಸುವ ಸಲುವಾಗಿ ಪುರಸಭೆಯಿಂದ 50 ಲಕ್ಷ ರೂ. ಅನುದಾನ ಮೀಸಲಿರಿಸಲಾಗಿದೆ ಎಂದರು.

ಬಸವೇಶ್ವರ ಮಹಿಳಾ ಸ್ವಸಹಾಯ ಸಂಘದ ಸ್ವಂತ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡುವಂತೆ ಸಂಘದವರು ಮನವಿ ಸಲ್ಲಿಸಿದ್ದು ಮೊದಲ ಹಂತದಲ್ಲಿ ಶಾಸಕರ ನಿಧಿಯಿಂದ 5 ಲಕ್ಷ ಬಿಡುಗಡೆ ಮಾಡಲಾಗಿದೆ. ಬಡಾವಣೆಯ ಸರ್ವಾಂಗೀಣ ಅಭಿವೃದ್ಧಿಗೆ ನೀಲಿ ನಕ್ಷೆ ತಯಾರು ಮಾಡಲಾಗಿದ್ದು, ಅಭಿವೃದ್ಧಿ ಕೆಲಸ ಮಾಡಲು ಸ್ಥಳೀಯರು ಸಹಕಾರ ನೀಡಬೇಕು ಎಂದರು.

ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ, ಪುರಸಭೆ ಅಧ್ಯಕ್ಷ ಶಿವುನಾಯಕ್, ವೀರಶೈವ ಮಹಾಸಭಾ ಅಧ್ಯಕ್ಷ ಕೆಂಪರಾಜು ಮಾತನಾಡಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ನಿರ್ದೇಶಕ ಸೈಯದ್ ಜಾಬೀರ್, ಎಪಿಎಂಸಿ ಮಾಜಿ ನಿರ್ದೇಶಕ ಎಲ್.ಪಿ.ರವಿಕುಮಾರ್, ಪುರಸಭೆ ಸದಸ್ಯರಾದ ಪ್ರಕಾಶ್, ಶಂಕರ್‌ಸ್ವಾಮಿ, ಮಂಜುಳ, ಮಾಜಿ ಸದಸ್ಯ ಕೆ.ವಿನಯ್, ಬಿಜೆಪಿ ಅಧ್ಯಕ್ಷ ಸಾ.ರಾ.ತಿಲಕ್, ಕಾಂಗ್ರೆಸ್ ನಗರಾಧ್ಯಕ್ಷ ಎಂ.ಜೆ. ರಮೇಶ್, ಮುಖಂಡರಾದ ತಿಮ್ಮಶೆಟ್ಟಿ, ರಾಜಶೇಖರ್, ಅರುಣ್, ಚಂದ್ರಶೇಖರ್, ರೇಖಾ, ಮನೋ ಹರಿ, ಸಣ್ಣಲಿಂಗಪ್ಪ, ಎಂ.ಜೆ.ಕುಮಾರ್, ಕೆ.ಸಿ.ಹರೀಶ್, ಕೆ.ಟಿ.ರವೀಂದ್ರ, ಕೆ.ಎನ್.ಮಾದೇಶ್, ವೃಷ ಬೇಂದ್ರ, ಬಿಇಓ ಆರ್.ಕೃಷ್ಣಪ್ಪ, ಮುಖ್ಯಾಧಿಕಾರಿ ಬಿ.ವಿ.ವೆಂಕಟೇಶ್, ಸಮಾಜ ಕಲ್ಯಾಣಾಧಿಕಾರಿ ಶಂಕರ್‌ಮೂರ್ತಿ ಮತ್ತಿತರರಿದ್ದರು.

# ಸಮಾನತೆಯ ಹರಿಕಾರ, ವಿಶ್ವಗುರು ಬಸವಣ್ಣ



ಉದ್ದೂರ್ ಕಾವಲ್ ಗ್ರಾಪಂನಲ್ಲಿ ಬಸವ ಜಯಂತಿ ನಡೆಯಿತು.

ಹುಣಸೂರು, ಏ.30– ಬಸವಣ್ಣನವರು ಸಮಾನತೆಯ ಹರಿಕಾರ, ವಿಶ್ವಗುರು ಎಂದು ಗ್ರಾಪಂ ಸದಸ್ಯ ಮನುಕುಮಾರ್ ತಿಳಿಸಿದರು.

ತಾಲೂಕಿನ ರತ್ನಪುರಿ ಗ್ರಾಮದ ಉದ್ದೂರ್ ಕಾವಲ್ ಗ್ರಾಪಂನಲ್ಲಿ ಏರ್ಪಡಿಸಿದ್ದ ಬಸವ ಜಯಂತಿಯಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಬಸವಣ್ಣನವರ ವಚನಗಳನ್ನು ಅಳವಡಿಸಿಕೊಂಡು ಪಾಲಿಸಿದ್ದೇ ಆದಲ್ಲಿ ಯಾವ ಸಮಸ್ಯೆಗಳೂ ಉದ್ಭವಿಸುವುದಿಲ್ಲ ಎಂದರು.

ಪರಿಸ್ಥಿತಿಗೆ ಹೊಂದಿಕೊಳ್ಳದೆ ಪರಿಸ್ಥಿತಿಯನ್ನೇ ತನ್ನ ಹತೋಟಿಗೆ ತಂದುಕೊಂಡ ಮಹಾ ಮೇದಾವಿ ಪುರುಷ. ಆಧುನಿಕ ಯುಗದ ಇಂದಿನ ದಿನಗಳಲ್ಲಿ ಸಾರ್ವಜನಿಕವಾಗಿ ಹೆಚ್ಚು ಚರ್ಚಿತವಾಗುತ್ತಿರುವ ವ್ಯಕ್ತಿ ಎಂದರೆ ಬಸವಣ್ಣ. ಹಿಂದೂ ಸಮಾಜಕ್ಕೆ ಅಂಟಿಕೊಂಡಿದ್ದ ಅಸ್ಪೃಶ್ಯತೆಗೆ ಕತ್ತರಿ ಪ್ರಯೋಗ ಮಾಡಿದ ಭವರೋಗ ವೈದ್ಯರಾಗಿದ್ದ ಬಸವಣ್ಣ ಇಂದಿಗೂ ಅಜರಾಮರ ಎಂದು ಬಣ್ಣಿಸಿದರು.

ಪಿಡಿಓ ಅರುಣ್, ಗ್ರಾಪಂ ಮಾಜಿ ಅಧ್ಯಕ್ಷ ನಂದೀಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಪದ್ಮಮ್ಮ, ಸದಸ್ಯರಾದ ಗೌರಮ್ಮ, ಶೋಭ, ರಾಮಬೋವಿ, ಗೋವಿಂದಶೆಟ್ಟಿ, ಗ್ರಾಮ ಲೆಕ್ಕಿಗ ಕಿರಣ್ ಕುಮಾರ್, ಗ್ರಂಥಾಲಯ ಮೇಲ್ವಿಚಾರಕಿ ಸುನೀತಾ, ಕಂಪ್ಯೂಟರ್ ಸಹಾಯಕ ರಮೇಶ್, ಅಟೆಂಡರ್ ಶೋಭಾ ಸೇರಿದಂತೆ ನೀರುಗಂಟಿಗಳು ಇನ್ನಿತರರು ಭಾಗವಹಿಸಿದ್ದರು.

# ಕಾರ್ಮಿಕರು ಸರ್ಕಾರಿ ಸೌಲಭ್ಯ ಸದ್ಬಳಕೆ ಮಾಡಿಕೊಳ್ಳಿ



ಸುದ್ದಿಗೋಷ್ಠಿಯಲ್ಲಿ ಕೆ.ರಾಚು ಮಾತನಾಡಿದರು.

ತಿ.ನರಸೀಪುರ, ಏ.30– ಕಾರ್ಮಿಕರು ಅಸಂಘಟಿತ ವಲಯಕ್ಕೆ ಸೇರಿದ್ದು, ಸರ್ಕಾರ ಅವರಿಗೆ ಹೆಚ್ಚಿನ ಸೌಲಭ್ಯ ಒದಗಿಸಬೇಕು. ಕಾರ್ಮಿಕ ಇಲಾಖೆ ಯಿಂದ ನೋಂದಣಿಯಾದ ಕಾರ್ಮಿಕರಿಗೆ ಸರ್ಕಾರ ಸಾಕಷ್ಟು ಸೌಲಭ್ಯಗಳನ್ನು ನೀಡುತ್ತಿದೆ. ಇದರ ಸದ್ಬಳಕೆ ಮಾಡಿಕೊಳ್ಳಬೇಕೆಂದು ಮೈಸೂರು ಜಿಲ್ಲಾ ಘಟಕದ ರಕ್ಷಣಾ ವೇದಿಕೆ ಕಾರ್ಮಿಕ ವಿಭಾಗದ ಉಪಾಧ್ಯಕ್ಷ ಕೆ.ರಾಚು ತಿಳಿಸಿದರು.

ಪಟ್ಟಣದ ಪಿಡಬ್ಲ್ಯುಡಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ ಒಂದರಂದು ಕಾರ್ಮಿಕ ದಿನಾಚರಣೆ ಆಚರಿಸುತ್ತಿರುವುದು ಸಂತಸ ತಂದಿದೆ. ಕಾರ್ಮಿಕ ಇಲಾಖೆ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾಗಿರುವ ಕಟ್ಟಡ ಕಾರ್ಮಿಕರಿಗಾಗಿ ಸರ್ಕಾರ ಹಲವು ಸೌಲಭ್ಯಗಳನ್ನು ನೀಡುತ್ತಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕಟ್ಟಡ ನಿರ್ಮಾಣ ಅಥವಾ ಇತರೆ ನಿರ್ಮಾಣ ಕಾರ್ಮಿಕರು, ರಾಜ್ಯ ಕಾರ್ಮಿಕ ಇಲಾಖೆಯಲ್ಲಿ ಹೆಸರು ನೋಂದಣಿ ಮಾಡಿಕೊಳ್ಳುವ ಮೂಲಕ ಬದುಕನ್ನು ಹಸನಾಗಿಸಿಕೊಳ್ಳಬೇಕು. ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕ ಇಲಾಖೆ ಹಲವು ಯೋಜನೆಗಳನ್ನು ಜಾರಿ ಮಾಡುತ್ತಿದೆ. ಈ ಯೋಜನೆಗಳ ಸದುಪಯೋಗಕ್ಕಾಗಿ ಕಾರ್ಮಿಕರೆಲ್ಲರೂ ಹೆಸರು ನೋಂದಣಿ ಮಾಡಿಸುವ ಮೂಲಕ ಸೌಲಭ್ಯಗಳ ಸದುಪಯೋಗ ಪಡೆದು ಉತ್ತಮ ಜೀವನ ನಡೆಸುವಂತೆ ತಿಳಿಸಿದರು.

ಕಾರ್ಮಿಕರು ನಮ್ಮ ದೇಶದ ಸಂಪತ್ತು. ದೇಶದ ಅಭಿವೃದ್ಧಿಗೆ ಕಾರ್ಮಿಕರ ಕೊಡುಗೆ ಅಪಾರ. ಕಾರ್ಮಿಕ ಬಂಧುಗಳು ತಮ್ಮ ಆರೋಗ್ಯದ ಕಡೆ ಗಮನಹರಿಸಿ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳುವ ಕಡೆ ಹೆಚ್ಚಿನ ಗಮನ ಹರಿಸಿ. ಬಿಸಿಲು, ಮಳೆ, ಚಳಿ ಎನ್ನದೇ ಹಗಲು ರಾತ್ರಿ ದುಡಿಯುತ್ತಿರುವ ಕಾರ್ಮಿಕ ಬಂಧುಗಳು ಕಾರ್ಮಿಕ ಇಲಾಖೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಸರ್ಕಾರದಿಂದ ದೊರಕಬಹುದಾದ ಸೌಲಭ್ಯ ಪಡೆಯಿರಿ. ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕೆಂದು ಮನವಿ ಮಾಡಿದರು.

ಕಾರ್ಮಿಕ ಘಟಕ ಕಾರ್ಮಿಕರ ಹಿತ ಕಾಯಲಿದ್ದು, ಮುಂದಿನ ದಿನಗಳಲ್ಲಿ ಯಾವುದೇ ಸಮಸ್ಯೆಯಾದರೂ ನಮ್ಮ ಗಮನಕ್ಕೆ ತನ್ನಿ. ಕಾರ್ಮಿಕ ಘಟಕ ಬೆಂಬಲಕ್ಕೆ ನಿಲ್ಲಲಿದೆ ಎಂದರು. ಗೋಷ್ಠಿಯಲ್ಲಿ ರಾಚಪ್ಪ, ನಾಗರಾಜು, ವೆಂಕಟ ರಾಜು ಇದ್ದರು.

## ನಾಗವಾಲ ಗ್ರಾಪಂನಲ್ಲಿ ಬಸವ ಜಯಂತಿ



ಬಸವ ಜಯಂತಿ ಪ್ರಯುಕ್ತ ಮೈಸೂರು ತಾಲೂಕಿನ ನಾಗವಾಲ ಗ್ರಾಪಂನಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಪುಷ್ಪಾರ್ಚನೆ ಮಾಡಿದರು. ಗ್ರಾಪಂ ಅಧ್ಯಕ್ಷೆ ಕಾಮಾಕ್ಷಮ್ಮ, ಕಾರ್ಯದರ್ಶಿ ಯಶ್ವಂತ್, ಬಿಲ್ ಕಲೆಕ್ಟರ್ ಉದಯ್, ದ್ವಿತೀಯ ದರ್ಜೆ ಸಹಾಯಕ ಶ್ರೀಧರ್, ಗ್ರಂಥಾಲಯ ಮೇಲ್ವಿಚಾರಕ ಸ್ವಾಮಿನಾಯಕ, ನಂದಿನಿ, ಪಾಪನಾಯಕ ಸೇರಿದಂತೆ ಇತರರಿದ್ದರು.

## ಗೊರಹಳ್ಳಿಯಲ್ಲಿ ಬಸವೇಶ್ವರ ಜಯಂತಿ



ಬೆಟ್ಟದಪುರ ಸಮೀಪದ ಗೊರಹಳ್ಳಿಯಲ್ಲಿ ವೀರಶೈವ ಲಿಂಗಾಯತ ಸಮಾಜದಿಂದ ಕರ್ನಾಟಕದ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಿಸಲಾಯಿತು. ಈ ವೇಳೆ ಬಸವೇಶ್ವರರ ಮೂರ್ತಿಯನ್ನು ಗ್ರಾಮದ ಪ್ರತಿ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ನಂತರ ಪ್ರಸಾದ ವಿತರಿಸಲಾಯಿತು. ಗ್ರಾಮದ ಎಲ್ಲಾ ಸಮಾಜದ ಮುಖಂಡರು ಹಾಜರಿದ್ದರು.

# ಶ್ರೀಕಂಠೇಶ್ವರನ ದರ್ಶನ ಪಡೆದ ಮಾಜಿ ಪ್ರಧಾನಿ ದೇವೇಗೌಡ



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಶ್ರೀಕಂಠೇಶ್ವರನ ದರ್ಶನ ಪಡೆದರು.

ನಂಜನಗೂಡು, ಏ.30– ಬಸವ ಜಯಂತಿ ಹಾಗೂ ಅಕ್ಷಯ ತೃತೀಯ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಶ್ರೀಕಂಠೇಶ್ವರಸ್ವಾಮಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ದೇವಸ್ಥಾನಕ್ಕೆ ಆಗಮಿಸಿದ ದೇವೇಗೌಡರನ್ನು ವಾದ್ಯಗೋಷ್ಠಿಗಳೊಂದಿಗೆ ಬರಮಾಡಿಕೊಳ್ಳಲಾಯಿತು. ಈ ವೇಳೆ ಅವರು ಶ್ರೀಕಂಠೇಶ್ವರಸ್ವಾಮಿಗೆ ಅಭಿಷೇಕ, ಅರ್ಚನೆ ಮಾಡಿಸಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಪಾರ್ವತಿ ದೇವಿ, ಗಣಪತಿ, ಚಂಡಿಕೇಶ್ವರ ಸ್ವಾಮಿಗೆ ವಿಶೇಷ ಪೂಜೆ ನೆರವೇರಿಸಿ ಮಹಾ ಮಂಗಳಾರತಿ ಪಡೆದರು. ದೇವಾಲಯದ ವತಿಯಿಂದ ಶೇಷ ವಸ್ತ್ರ ನೀಡಿ ಗೌರವಿಸಲಾಯಿತು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಕ್ಷಿಣ ಭಾರತದ ಅತೀ ಪುರಾತನ ಮತ್ತು ಶಕ್ತಿಶಾಲಿ ದೇವಾಲಯವಾಗಿರುವುದರಿಂದ ನಮ್ಮ ಕುಟುಂಬದವರು ದೇವಾಲಯಕ್ಕೆ ಆಗಾಗ್ಗೆ ಭೇಟಿ ನೀಡುತ್ತೇವೆ. ನನಗೆ ಬಾಲ್ಯದಲ್ಲಿ ಎರಡೂ ಕಿವಿಗಳು ಸೋರುತ್ತಿದ್ದವು. ಹಲವು ವೈದ್ಯರಲ್ಲಿ ತೋರಿಸಿದರೂ ಕಿವಿ ನೋವು, ಕಿವಿ ಸೋರುವುದು ನಿಲ್ಲಲಿಲ್ಲ. ನಮ್ಮ ತಾಯಿಯವರು ನಂಜುಂಡೇಶ್ವರನಲ್ಲಿ ಹರಕೆ ಹೊತ್ತ ನಂತರ ನನ್ನ ಕಿವಿಗಳು ನೋಯುವುದು, ಸೋರುವುದು ನಿಂತು ಹೋಯಿತು. ಇಂದು ಬಸವ ಜಯಂತಿ ಮತ್ತು ಅಕ್ಷಯ ತೃತೀಯ ಹಿನ್ನೆಲೆಯಲ್ಲಿ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದಿದ್ದೇನೆ. ದೇವಾಲಯಕ್ಕೆ ಭೇಟಿ ನೀಡಿರುವುದು ಮನಸ್ಸಿಗೆ ಸಮಾಧಾನ ತಂದಿದೆ. ಇಂತಹ ಪೌರಾಣಿಕ ಹಿನ್ನೆಲೆಯುಳ್ಳ ಶಕ್ತಿಶಾಲಿ ದೇವಾಲಯವು ಸರಿಯಾದ ನಿರ್ವಹಣೆಯಿಲ್ಲದೆ ಸೊರಗುತ್ತಿದೆ. ಇಲ್ಲಿನ ಆಡಳಿತ ಮಂಡಳಿ ದೇವಾಲಯದ ಅಭಿವೃದ್ಧಿ ಬಗ್ಗೆ ಗಮನ ಹರಿಸಬೇಕು. ದೇವಾಲಯದ ಅಂಗಳದಲ್ಲಿ ಬಾವಿ ತೋಡುವ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಅವರು ಈ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಏಕೆಂದರೆ ರಾಜ್ಯದಲ್ಲಿ ನಮ್ಮ ಸರ್ಕಾರವಿಲ್ಲ. ನಮ್ಮ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರ ಮಾನ್ಯ ಮಾಡುವುದಿಲ್ಲ. ಮುಂದಿನ ದಿನಗಳಲ್ಲಿ ಏನಾದರೂ ಬದಲಾವಣೆ ಕಂಡಲ್ಲಿ ಮುಂದಿನ ಸರ್ಕಾರದ ಅವಧಿಯಲ್ಲಿ ದೇವಾಲಯದ ಅಭಿವೃದ್ಧಿ ಕಡೆಗೆ ಗಮನ ಹರಿಸುವಂತೆ ಸೂಚಿಸುತ್ತೇನೆ ಎಂದರು.

ಈ ವೇಳೆ ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಎಂಎಲ್ಸಿ ಮಂಜೇಗೌಡ, ಮಾಜಿ ಶಾಸಕ ಅನ್ನದಾನಿ, ಜೆಡಿಎಸ್ ತಾಲೂಕು ಅಧ್ಯಕ್ಷ ಮಹದೇವಸ್ವಾಮಿ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ದೇವಾಲಯದ ಇಓ ಜಗದೀಶ್ ಕುಮಾರ್ ಇತರರಿದ್ದರು.

# ಬೆಳಗನಹಳ್ಳಿಯಲ್ಲಿ ಬಸವ ಜಯಂತಿ



ಬೆಳಗನಹಳ್ಳಿಯಲ್ಲಿ ಬಸವ ಜಯಂತಿ ಆಚರಿಸಲಾಯಿತು.

ಹೆಚ್.ಡಿ.ಕೋಟೆ, ಏ.30– ತಾಲೂಕಿನ ಬೆಳಗನಹಳ್ಳಿಯಲ್ಲಿ ಬಸವ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಬಸವ ಜಯಂತಿ ಅಂಗವಾಗಿ ಗ್ರಾಮದಲ್ಲಿ ಮುಂಜಾನೆಯಿಂದಲೇ ಜಾನುವಾರುಗಳನ್ನು ತೊಳೆದು ಸಿಂಗರಿಸುತ್ತಿದ್ದ ದೃಶ್ಯ ಕಂಡು ಬಂತು. ಅಲ್ಲದೇ ರೈತರು ಜಮೀನುಗಳಿಗೆ ತೆರಳಿ ಪೂಜಾ ಕೈಂಕರ್ಯ ನೆರವೇರಿಸಿದರು. ಬಳಿಕ ಗ್ರಾಮದಲ್ಲಿ ಸಂಜೆ ಬಸವೇಶ್ವರರ ಭಾವಚಿತ್ರ ಮತ್ತು ಸಿದ್ಧಗಂಗಾ ಶ್ರೀಶಿವಕುಮಾರಸ್ವಾಮೀಜಿಗಳ ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು. ನಂತರ ಪ್ರಸಾದ ವಿನಿಯೋಗ ಮಾಡಲಾಗಿತ್ತು.


ಗ್ರಾಮದ ಸಿದ್ಧಗಂಗಾ ಮಠದ ಶ್ರೀಶಿವಕುಮಾರಸ್ವಾಮೀಜಿ ಪ್ರತಿಮೆ ಬಳಿ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ಈ ವೇಳೆ ಮುಖಂಡರಾದ ಪ್ರಕಾಶ್, ಹರೀಶ್, ಸೋಮಶೇಖರ್, ಸುರೇಶ್, ಜಗದೀಶ್, ಮಹದೇವಪ್ಪ, ಗುರುಸ್ವಾಮಿ, ಮಲ್ಲಿಕಾರ್ಜುನ, ಚಲುವೇಗೌಡ, ಗೋವಿಂದೇಗೌಡ, ರಾಕಿ, ಶಿವಪ್ಪ, ನಕುಲ್, ರೋಹಿತ್ ಆರಾಧ್ಯ, ರಾಹುಲ್, ಮಂಜುನಾಥ್ ಇತರರಿದ್ದರು.

## ರತ್ನಮ್ಮ ನಿಧನ



ತಿ.ನರಸೀಪುರ, ಏ.30– ತಾಲೂಕಿನ ಹಳೆ ಕೆಂಪಯ್ಯನಹುಂಡಿ ಗ್ರಾಮದ ರಾಮಚಂದ್ರಚಾರಿ ಎಂಬುವರ ಪತ್ನಿ ರತ್ನಮ್ಮ (60) ಬುಧವಾರ ಮಧ್ಯಾಹ್ನ ನಿಧನರಾದರು. ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

## ಎಂ.ಸಂಜೀವಶೆಟ್ಟಿ



ಹುಣಸೂರು, ಏ.30– ನಗರದ ದೇವಿಪ್ರಸಾದ್ ಹೋಟೆಲ್ ಮಾಲೀಕ ಎಂ.ಸಂಜೀವಶೆಟ್ಟಿ(78) ಮಂಗಳವಾರ ರಾತ್ರಿ ನಿಧನರಾದರು. ಮೃತರು ಪತ್ನಿ, 6 ಮಂದಿ ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ತಾಲೂಕು ಕಚೇರಿ ಬಳಿಯ ಚಿರಶಾಂತಿ ಧಾಮದಲ್ಲಿ ಬುಧವಾರ ಮಧ್ಯಾಹ್ನ ನಡೆಯಿತು.

## ಸರಸ್ವತಮ್ಮ



ಹುಣಸೂರು, ಏ.30– ತಾಲೂಕಿನ ರಾಮೇನಹಳ್ಳಿ ಗ್ರಾಮದ ಲೇ.ಸೋಮಚಾರ್ ಅವರ ಪತ್ನಿ ಸರಸ್ವತಮ್ಮ(72) ಸೋಮವಾರ ರಾತ್ರಿ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ನೆರವೇರಿತು.




# ಸತತ ಸೋಲು: ಟೂರ್ನಿಯಿಂದ ಹೊರ ಬಿದ್ದ ಸಿಎಸ್‌ಕೆ



ಚೆನ್ನೈ, ಏ.30– ಯಜುವೇಂದ್ರ ಚಹಲ್ ಅವರ ಮಾರಕ ಬೌಲಿಂಗ್ ಹಾಗೂ ಶ್ರೇಯಸ್ ಅಯ್ಯರ್, ಪ್ರಭಸಿಮ್ರನ್ ಸಿಂಗ್ ಅವರ ಅರ್ಧಶತಕಗಳ ನೆರವಿನಿಂದ ಪಂಜಾಬ್ ಕಿಂಗ್ಸ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 4 ವಿಕೆಟ್‌ಗಳ ಜಯ ಗಳಿಸಿದೆ. ಇದರೊಂದಿಗೆ ಪಂಜಾಬ್ 13 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ 2ನೇ ಸ್ಥಾನಕ್ಕೇರಿದರೇ, ಚೆನ್ನೈ 4 ಅಂಕಗಳೊಂದಿಗೆ ಟೂರ್ನಿಯಿಂದಲೇ ಹೊರಬಿದ್ದಿದೆ.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ 19.2 ಓವರ್‌ಗಳಲ್ಲಿ 190 ರನ್‌ಗಳಿಗೆ ಆಲೌಟಾಯಿತು. ನಂತರ ಗುರಿ ಬೆನ್ನತ್ತಿದ ಪಂಜಾಬ್ 19.4 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 194 ರನ್ ಗಳಿಸಿ ಜಯ ಗಳಿಸಿತು.

ಪಂಜಾಬ್ ಪರ ಪ್ರಭಸಿಮ್ರನ್ ಸಿಂಗ್ 36 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ ಒಳಗೊಂಡ 54 ರನ್ ಗಳಿಸಿದರೇ, ಶ್ರೇಯಸ್ ಅಯ್ಯರ್ 41 ಎಸೆತಗಳಲ್ಲಿ 5 ಬೌಂಡರಿ, 4 ಸಿಕ್ಸರ್ ಒಳಗೊಂಡ 71 ರನ್ ಗಳಿಸಿ ಔಟಾಗುವ ಮೂಲಕ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಉಳಿದಂತೆ ಪ್ರಿಯಾಂಶ್ ಆರ್ಯ 23, ನೆಹಾಲ್ ವದೇರಾ 5, ಶಶಾಂಕ್ ಸಿಂಗ್ 23 ರನ್ ಗಳಿಸಿದರು. ಸಿಎಸ್‌ಕೆ ಪರ ಪತಿರಾಣ ಹಾಗೂ ಖಲೀಲ್ ಅಹ್ಮದ್ ತಲಾ 2, ರವೀಂದ್ರ ಜಡೇಜಾ ಹಾಗೂ ನೂರ್ ಅಹ್ಮದ್ ತಲಾ ಒಂದೊಂದು ವಿಕೆಟ್ ಕಿತ್ತರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಸಿಎಸ್‌ಕೆ ಪರ ಶೇಖ್ ರಶೀದ್ 11 ಹಾಗೂ ಆಯುಷ್ ಮ್ಹಾತ್ರೆ 7 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ರವೀಂದ್ರ ಜಡೇಜಾ ಕೂಡ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲದೇ 12 ಎಸೆತಗಳಲ್ಲಿ 17 ರನ್ ಗಳಿಸಿ ಔಟಾದರು. ಈ ವೇಳೆ ಜೊತೆಯಾದ ಸ್ಯಾಮ್ ಕರ್‍ರನ್ ಹಾಗೂ ಡೆವಾಲ್ಡ್ ಬ್ರೆವಿಸ್ 4ನೇ ವಿಕೆಟ್‌ಗೆ 78 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಡೆವಾಲ್ಡ್ ಬ್ರೆವಿಸ್ 26 ಬಾಲ್‌ಗಳಲ್ಲಿ 32 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಭರ್ಜರಿ ಆಟವಾಡಿದ ಕರ್‍ರನ್ 47 ಎಸೆತಗಳಲ್ಲಿ 9 ಬೌಂಡರಿ ಮತ್ತು 4 ಸಿಕ್ಸರ್ ಒಳಗೊಂಡ 88 ರನ್ ಬಾರಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಬಳಿಕ ಬಂದ ಬ್ಯಾಟ್ಸ್‌ಮನ್‌ಗಳಿಗೆ ಯಜುವೇಂದ್ರ ಚಹಲ್ ರನ್‌ಗಳಿಸಲು ಅವಕಾಶ ನೀಡಲಿಲ್ಲ. ಪರಿಣಾಮ 18ನೇ ಓವರ್ ಎಸೆತ ಅವರು ಹ್ಯಾಟ್ರಿಕ್ ಸೇರಿದಂತೆ ಒಂದೇ ಓವರ್‌ನಲ್ಲಿ ಒಟ್ಟು 4 ವಿಕೆಟ್ ಕಬಳಿಸಿದರು. ಉಳಿದಂತೆ ಸಿಎಸ್‌ಕೆ ಪರ ನಾಯಕ ಧೋನಿ 11, ಶಿವಂ ದುಬೆ 6, ದೀಪಕ್ ಹೂಡಾ 2 ರನ್ ಗಳಿಸಿದರು.

ಪಂಜಾಬ್ ಪರ ಯುಜುವೇಂದ್ರ ಚಹಲ್ 4, ಅರ್ಶದೀಪ್ ಸಿಂಗ್ ಹಾಗೂ ಮಾರ್ಕೋ ಜಾನ್ಸನ್ ತಲಾ 2, ಅಜ್ಮತುಲ್ಲಾ ಒಮರ್ಜಾಯ್ ಹಾಗೂ ಹರ್‌ಪ್ರೀತ್ ಬ್ರಾರ್ ತಲಾ 1 ವಿಕೆಟ್ ಗಳಿಸಿದರು. ಶ್ರೇಯಸ್ ಅಯ್ಯರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

**ತಂಡದ ಅಂಕಪಟ್ಟಿ ವಿವರ**

| ತಂಡ | ಪಂದ್ಯಗಳು | ಗೆಲುವು | ಸೋಲು | ಡ್ರಾ | ಅಂಕ |
|---|---|---|---|---|---|
| ಬೆಂಗಳೂರು | 10 | 7 | 3 | 0 | 14 |
| ಪಂಜಾಬ್ | 10 | 6 | 3 | 0 | 13 |
| ಮುಂಬೈ | 10 | 6 | 4 | 0 | 12 |
| ಗುಜರಾತ್ | 9 | 6 | 3 | 0 | 12 |
| ಡೆಲ್ಲಿ | 10 | 6 | 4 | 0 | 12 |
| ಲಕ್ನೋ | 10 | 5 | 5 | 0 | 10 |
| ಕೋಲ್ಕತ್ತಾ | 10 | 4 | 5 | 0 | 9 |
| ರಾಜಸ್ಥಾನ್ | 10 | 3 | 7 | 0 | 6 |
| ಹೈದರಾಬಾದ್ | 9 | 3 | 6 | 0 | 6 |
| ಚೆನ್ನೈ | 10 | 2 | 8 | 0 | 4 |

**ಇಂದಿನ ಪಂದ್ಯ**

ರಾಜಸ್ಥಾನ್ ರಾಯಲ್ಸ್
V/S
ಮುಂಬೈ ಇಂಡಿಯನ್ಸ್
ಸಮಯ: ಸಂಜೆ 7.30
ಸ್ಥಳ : ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣ, ಜೈಪುರ

# ಮೈಸೂರು ಕರಗ ಮಹೋತ್ಸವಕ್ಕೆ ಚಾಲನೆ

ಮೈಸೂರು, ಏ.30(ಎಂಕೆ)– ಮೈಸೂರು ಇಟ್ಟಿಗೆಗೂಡಿನ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 101ನೇ 'ಮೈಸೂರು ಕರಗ ಮಹೋತ್ಸವ'ಕ್ಕೆ ವಿಧ್ಯುಕ್ತ ಚಾಲನೆ ದೊರೆತಿದೆ. ಶ್ರೀ ರೇಣುಕಾದೇವಿ ಕರಗ ಮಹೋತ್ಸವ ಟ್ರಸ್ಟ್ ವತಿಯಿಂದ ಆಯೋಜಿಸುತ್ತಾ ಬಂದಿರುವ ಶತಮಾನದ ಇತಿಹಾಸ ಹೊಂದಿರುವ 5 ದಿನಗಳ ಕರಗ ಮಹೋತ್ಸವ ಅಪಾರ ಭಕ್ತ ಸಮೂಹದ ನಡುವೆ ಆರಂಭವಾಯಿತು.

ಇದಕ್ಕೂ ಮುನ್ನ ಚಾಮುಂಡಿಬೆಟ್ಟದ ಪಾದಕ್ಕೆ ತೆರಳಿ, ಕಲಶವಿಟ್ಟು ಅಭಿಷೇಕ ನೆರವೇರಿಸಿ, ಬೆಲ್ಲದ ಅನ್ನದ ನೈವೇದ್ಯ ಮಾಡಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗವನ್ನು ಸಾಂಪ್ರದಾಯಿಕವಾಗಿ ಅಲಂಕರಿಸಿ, ಮೆರವಣಿಗೆ ಮೂಲಕ ದೇವಸ್ಥಾನದ ಆವರಣಕ್ಕೆ ತರಲಾಯಿತು. ಹಾಗೆಯೇ ಶ್ರೀ ಕೋಟೆ ಮಾರಿಯಮ್ಮ ನವರ ದೇವಸ್ಥಾನಕ್ಕೆ ತೆರಳಿ, ಶ್ರೀ ಶಕ್ತಿ ಮತ್ತು ಶ್ರೀ ಮಾರಿಯಮ್ಮನವರ ಕರಗವನ್ನು ಸಿಂಗರಿಸಿ, ಮೆರವಣಿಗೆ ಮೂಲಕ ಶ್ರೀ ರೇಣುಕಾದೇವಿ ದೇವಸ್ಥಾನಕ್ಕೆ ತರಲಾಯಿತು.

ನಂತರ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಪ್ರಥಮ ಪೂಜೆಯನ್ನು ಮಡಿವಾಳರ ದೇವಸ್ಥಾನದಲ್ಲಿ ಸ್ವೀಕರಿಸಿ ಅಲ್ಲಿಂದ ಇಟ್ಟಿಗೆಗೂಡಿನ ಶ್ರೀಸಿದ್ದಪ್ಪ ಕಲ್ಯಾಣ ಮಂಟದ ಕಡೆಯಿಂದ ಹೊರಟು, ಪೋಸ್ಟ್ ಆಫೀಸ್ 1ನೇ ರಸ್ತೆ, ಕೆಳ ಮಾಡಲ್ ಹೌಸ್‌ನ ಬೀದಿಗಳಲ್ಲಿ ಸಾಗಿದ ಕರಗಕ್ಕೆ ಭಕ್ತಾದಿಗಳು ಪೂಜೆ ಸಲ್ಲಿಸಿದರು.

ಎರಡನೇ ದಿನವಾದ ಬುಧವಾರ ಬೆಳಗ್ಗೆ 7 ಗಂಟೆಗೆ ಅಮ್ಮನವರ ಕರಗವು ದೇವಸ್ಥಾನದಿಂದ ಹೊರಟು ಹೊಸ ಬೀದಿ 2ನೇ ಕ್ರಾಸ್(ಸರ್ಕಾರಿ ಶಾಲೆ ರಸ್ತೆ)ನಿಂದ ಪ್ರಾರಂಭವಾಗಿ, ಹೊಸ ಬೀದಿ 3, 4 ಮತ್ತು 5ನೇ ಕ್ರಾಸ್ ಮಾರ್ಗವಾಗಿ ಹಳೇ ಮಾಡಲ್ ಹೌಸ್, ಎಸ್‌ಆರ್‌ಟಿ ಗ್ಯಾರೇಜ್ ಕಡೆಯಿಂದ ನ್ಯೂ ಮಾಡೆಲ್‌ವರೆಗಿನ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬಳಿಕ ದೇವಾಲಯದ ಆವರಣದಲ್ಲಿ ಮಹಾಮಂಗಳಾರತಿ ಅರ್ಪಿಸಲಾಯಿತು.

**ಮಿನಿ ದಸರಾ:** ಮೇ 3ರಂದು ಮಿನಿ ದಸರಾ ಮಾದರಿಯಲ್ಲಿ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ನಡೆಯಲಿರುವ ಕರಗ ಮಹೋತ್ಸವದ ಮೆರವಣಿಗೆಗೆ ಸಕಲ ಸಿದ್ಧತೆ ನಡೆದಿದೆ. ಅಂದು ರಾತ್ರಿ 8 ಗಂಟೆ ಸುಮಾರಿಗೆ ಇಟ್ಟಿಗೆಗೂಡಿನಿಂದ ಮೆರವಣಿಗೆ ಆರಂಭವಾಗಲಿದ್ದು, ಸಂಸದರೂ ಆದ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಸಮ್ಮುಖದಲ್ಲಿ ಕರಗ ಮಹೋತ್ಸವದ ಮೆರವಣಿಗೆಗೆ ಚಾಲನೆ ಸಿಗಲಿದೆ.

ಬಳಿಕ ಚಾಮರಾಜ ಜೋಡಿ ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ, ಶಿವರಾಂಪೇಟೆ, ಸಯ್ಯಾಜಿರಾವ್ ರಸ್ತೆ, ಮಿಷನ್ ಆಸ್ಪತ್ರೆ ರಸ್ತೆ, ಕಬೀರ್ ರಸ್ತೆ, ಕಾಳಮ್ಮನಗುಡಿ ರಸ್ತೆ, ಕುರುಬಗೇರಿ, ಕುಂಬಾರಗೇರಿ, ಅಶೋಕ ರಸ್ತೆ, ನಜರ್‌ಬಾದ್, ಚಾಮರಾಜೇಂದ್ರ ಮೃಗಾಲಯ ರಸ್ತೆ ಮಾರ್ಗವಾಗಿ ಮೇ 4 ರಂದು ಬೆಳಗ್ಗೆ 9 ಗಂಟೆ ಸುಮಾರಿಗೆ ದೇಗುಲಕ್ಕೆ ಬಂದ ನಂತರ ಮೆರವಣಿಗೆ ಅಂತ್ಯವಾಗಲಿದೆ. ಮಧ್ಯಾಹ್ನ ಓಕುಳಿ ಆಟ, ಅಂಬಲಿ ಪೂಜೆ, ತಂಬಿಟ್ಟು ಆರತಿ, ಉಯ್ಯಾಲೋತ್ಸವ ನಡೆಯಲಿದೆ ಎಂದು ಶ್ರೀ ರೇಣುಕಾದೇವಿ ಕರಗ ಮಹೋತ್ಸವ ಟ್ರಸ್ಟ್ ಜಂಟಿ ಕಾರ್ಯದರ್ಶಿ ಜಿ.ಹರೀಶ್ ಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.



ಮೈಸೂರು ಇಟ್ಟಿಗೆಗೂಡಿನ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 101ನೇ 'ಮೈಸೂರು ಕರಗ ಮಹೋತ್ಸವ' ನಡೆಯಿತು. ಅಲ್ಲಿನ ನಿವಾಸಿಯೂ ಆದ ಉದ್ಯಮಿ ಎನ್. ಸಂದೇಶ್ ಉತ್ಸವದಲ್ಲಿ ಭಾಗವಹಿಸಿದ್ದರು.

## ಸಿ. ನಿಶಾಂತ್ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.30– ಮೈಸೂರಿನ ಜಯಚಾಮರಾಜೇಂದ್ರ ಪಿಯು ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿ ಸಿ.ನಿಶಾಂತ್ ಮರು ಮೌಲ್ಯಮಾಪನದಲ್ಲಿ ಒಟ್ಟು 600 ಅಂಕಗಳಿಗೆ 581 (ಶೇ. 96.83) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ ಕಾಲೇಜಿಗೆ 3 ನೇ ಸ್ಥಾನ ಪಡೆದಿದ್ದಾರೆ. ಮರು ಮೌಲ್ಯಮಾಪನಕ್ಕಿಂತ ಮೊದಲು ಈ ವಿದ್ಯಾರ್ಥಿಯು ಒಟ್ಟು 600 ಅಂಕಗಳಿಗೆ 575 ಪಡೆದಿದ್ದನು. ಈತ ಮೈಸೂರು ನಗರ ವಕೀಲರ ವಿವಿಧೋದ್ದೇಶ ಸಹಕಾರ ಸಂಘದ ನಿಕಟಪೂರ್ವ ಅಧ್ಯಕ್ಷರು ಹಾಗೂ ಹಿರಿಯ ವಕೀಲ ಬಿ.ಎಸ್. ಚಂದ್ರಶೇಖರ ಹಾಗೂ ಕೆ.ಆರ್.ಆಸ್ಪತ್ರೆಯ ನರ್ಸಿಂಗ್ ಅಧಿಕಾರಿ ಟಿ.ಎಂ. ಲತಾಮಣಿ ದಂಪತಿ ಪುತ್ರ.

## ಮೈಸೂರು ತಾಲೂಕಲ್ಲಿ ಬಾಲ್ಯ ವಿವಾಹಕ್ಕೆ ತಡೆ

**ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಕಾರ್ಯಾಚರಣೆ**



ಮೈಸೂರು, ಏ.30(ಪಿಎಂ)– ಮೈಸೂರು ತಾಲೂಕಿನಲ್ಲಿ ನಡೆಯುತ್ತಿದ್ದ ಬಾಲಕಿಯೊಬ್ಬಳ ವಿವಾಹ ತಡೆಗಟ್ಟಿರುವ, ಮೈಸೂರು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸದರಿ ಬಾಲಕಿಯನ್ನು ರಕ್ಷಿಸಿ, ಬಾಲ ಮಂದಿರದ ವಶಕ್ಕೆ ನೀಡಿದೆ.

ತಾಲೂಕಿನ ಗ್ರಾಮವೊಂದರಲ್ಲಿ 17 ವರ್ಷದ ಅಪ್ರಾಪ್ತೆಯ ಮದುವೆಗೆ ಪೋಷಕರು ಬುಧವಾರ ಸಿದ್ಧತೆ ನಡೆಸಿದ್ದರು. ಈ ಬಗ್ಗೆ ಮಕ್ಕಳ ಸಹಾಯ ವಾಣಿಗೆ ಸಾರ್ವಜನಿಕರೊಬ್ಬರು ದೂರು ನೀಡಿದ್ದು, ಆ ಮೇರೆಗೆ ಕಾರ್ಯಾಚರಣೆ ನಡೆಸಿದ ಘಟಕದ ಅಧಿಕಾರಿಗಳು ಮತ್ತು ಸಿಬ್ಬಂದಿ, ಬಾಲ್ಯ ವಿವಾಹವನ್ನು ತಡೆದು ಬಾಲಕಿಯನ್ನು ರಕ್ಷಿಸಿ ಬಾಲ ಮಂದಿರದ ವಶಕ್ಕೆ ನೀಡಿದ್ದಾರೆ. ಬಾಲಕಿಯ ವಿವಾಹವನ್ನು ತಡೆಯಲಾಗಿದ್ದು, ಈ ಸಂಬಂಧ ಪೋಷಕರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎನ್.ಟಿ.ಯೋಗೇಶ್ ತಿಳಿಸಿದ್ದಾರೆ.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಯುದ್ಧಕಾಂಡ (ಕ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಗುಡ್ ಬ್ಯಾಡ್ ಅಗ್ಲಿ (ತ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ರೇಡ್ –2 (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ರೆಟ್ರೋ (ತ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ವಿದ್ಯಾಪತಿ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಗ್ಯಾಂಗರ್ಸ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ರೆಟ್ರೋ (ತ) | 4 ಪ್ರದರ್ಶನಗಳು |
| **ಲಿಡೋ** | |
| ದಾಸರಹಳ್ಳಿ (ಕ) + ರಿಕ್ಷಾ ಚಾಲಕ (ಕ) | 2+2 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಭಗೀರಥ (ಕ) | 4 ಪ್ರದರ್ಶನಗಳು |
| **ಪ್ರಭಾ** | |
| ಭಗೀರಥ (ಕ) | 4 ಪ್ರದರ್ಶನಗಳು |

**ಡಿಆರ್‌ಸಿ ಸಿನಿಮಾಸ್** ದೂ : 4240422/4241800

| | |
|---|---|
| ಸ್ಕ್ರೀನ್ 1 | ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ. |
| ಸ್ಕ್ರೀನ್ 2 | ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ |
| ಸ್ಕ್ರೀನ್ 3 | ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ. |
| ಸ್ಕ್ರೀನ್ 4 | ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ. |

**ಐನಾಕ್ಸ್ ಮೂವೀಸ್** INOX LIVE THE MOVIE ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

**ಮೈಸೂರು ವಿಷನ್ ಸಿನಿಮಾ** ದೂ : 0821–2973519

| | |
|---|---|
| ಸ್ಕ್ರೀನ್ 1 | ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ. |
| ಸ್ಕ್ರೀನ್ 2 | ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ. |
| ಸ್ಕ್ರೀನ್ 3 | ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ |
| ಸ್ಕ್ರೀನ್ 4 | ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ. |

**ಪಿವಿಆರ್ ಸಿನಿಮಾಸ್** PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಬೂಕರ್ ಪ್ರಶಸ್ತಿ ಲಭಿಸುವ ವಿಶ್ವಾಸವಿದೆ: ಬಾನು ಮುಷ್ತಾಕ್



ಹಿರಿಯ ಲೇಖಕಿ ಬಾನುಮುಷ್ತಾಕ್ ರಚಿತ 'ಹಸೀನಾ' ಪರಿಷ್ಕೃತ ಕೃತಿ ಬುಧವಾರ ಬಿಡುಗಡೆಗೊಂಡಿತು.

ಮೈಸೂರು, ಏ.30(ಎಸ್‌ಪಿಎನ್)– 2025ರ ಬೂಕರ್ ಪ್ರಶಸ್ತಿಗೆ ವಿವಿಧ ಲೇಖಕರ ಆರು ಕೃತಿಗಳ ಅಂತಿಮ ಪಟ್ಟಿಯಾಗಿದೆ. ಅದರಲ್ಲಿ ನಾನು ರಚಿಸಿದ 'ಹಾರ್ಟ್ ಲ್ಯಾಂಪ್' ಕಥಾಗುಚ್ಛ ಕೂಡ ಬೂಕರ್ ಪ್ರಶಸ್ತಿಯ ಅಂತಿಮ ಪಟ್ಟಿಗೆ ಸೇರಿದೆ ಎಂದು ಹಿರಿಯ ಲೇಖಕಿ ಬಾನುಮುಷ್ತಾಕ್ ತಿಳಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರ್ ಸಂಸ್ಥೆ ಸಭಾಂಗಣದಲ್ಲಿ ಅಭಿರುಚಿ ಪ್ರಕಾಶನ ಹಾಗೂ ಮೈಸೂರು ಬುಕ್‌ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್ ಸಹಯೋಗದೊಂದಿಗೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ತಮ್ಮಿಂದ ರಚಿತವಾದ 'ಹಸೀನಾ' ಪರಿಷ್ಕೃತ ಕೃತಿಯನ್ನು ಬುಧವಾರ ಬಿಡುಗಡೆಗೊಳಿಸಿ ಮಾತನಾಡಿದರು.

2025ರ ಬೂಕರ್ ಪ್ರಶಸ್ತಿಯು ಮೇ 20 ರಂದು ಲಂಡನ್‌ನಲ್ಲಿ ಘೋಷಣೆಯಾಗುವ ಸಂಭವವಿದೆ. ಈ ಕಾರ್ಯಕ್ರಮಕ್ಕೆ ನಾನು ಮತ್ತು ನನ್ನ ಮೂವರು ಮಕ್ಕಳೊಂದಿಗೆ ಹೋಗುತ್ತಿದ್ದೇನೆ. ಹಾಗಾಗಿ ನನ್ನ ಹಿತೈಷಿಗಳು ನನಗಾಗಿ ಪ್ರಾರ್ಥಿಸಿ, ಭಾರತೀಯಳಿಗೆ, ಕನ್ನಡತಿಗೆ ಈ ಸಾಲಿನ ಬೂಕರ್ ಪ್ರಶಸ್ತಿ ಸಿಗಲೆಂದು ಪ್ರಾರ್ಥಿಸಿ ಎಂದು ಬಾನುಮುಷ್ತಾಕ್ ಮನವಿ ಮಾಡಿದರು.

ಈ ಹಿಂದೆ ಸಿನಿಮಾ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರು ಚಲನಚಿತ್ರ ಮಾಡಲು ಎರಡು ದಶಕದ ಹಿಂದೆ ಹೆಣ್ಣು ಮಕ್ಕಳ ಕಥೆಗಳನ್ನು ಹುಡುಕುತ್ತಿದ್ದರು. ಆದರೆ, ಅವರಿಗೆ ಬೇಕಾದ ಕಥೆಗಳು ಸಿಕ್ಕಿರಲಿಲ್ಲ. ಆಗ ಓದುಗರೊಬ್ಬರು ನಾನು ರಚಿಸಿದ 'ಕರಿ ನಾಗರಗಳು' ಕಥೆಯನ್ನು ಗಿರೀಶ್ ಕಾಸರವಳ್ಳಿ ಅವರಿಗೆ ಪರಿಚಯಿಸಿದ್ದರು. ಆ ವಿಷಯ ನನಗೂ ಗೊತ್ತಾಯಿತು. ಬಳಿಕ ಗಿರೀಶ್ ಕಾಸರವಳ್ಳಿ, ನನಗೆ ಕರೆ ಮಾಡುತ್ತಾರೆ ಎಂದು ಕನವರಿಸುತ್ತಿದ್ದೆ. ಅದರಂತೆ ಒಂದು ದಿನ ಮುಂಜಾನೆ ಕಾಸರವಳ್ಳಿಯವರೇ ದೂರವಾಣಿ ಕರೆ ಮಾಡಿ, ಈ ವಿಚಾರ ತಿಳಿಸಿದಾಗ ನನಗೇನು ಆಶ್ಚರ್ಯವಾಗಲಿಲ್ಲ. ಈಗಲೂ ಹಾಗೇ ಆಗುತ್ತದೆ ಎಂದುಕೊಂಡಿರುವೆ ಎಂದು ಹಾಸ್ಯ ಚಟಾಕಿ ಹಾರಿಸಿದರು.

'ಕರಿ ನಾಗರಗಳು' ಶೀರ್ಷಿಕೆಯ ಕಥೆಯು 'ಹಸೀನಾ' ಆಗಿ 2004ರಲ್ಲಿ ಬಿಡುಗಡೆಯಾಗಿತ್ತು. ಅದರ ಪ್ರೀಮಿಯರ್ ಶೋನಲ್ಲಿ ನಟಿ ತಾರಾ ನನ್ನ ಕುರ್ಚಿಯ ಪಕ್ಕ ಕೈ ಹಿಡಿದು ಕೂತು ನೋಡುತ್ತಿದ್ದರು. ಆಗ ನಾನು ಸಿನಿಮಾ ವೀಕ್ಷಣೆ ಮಾಡುತ್ತಾ, ನಿಮ್ಮ (ತಾರಾ ಅವರಿಗೆ) ಅಭಿನಯಕ್ಕೆ ಖಂಡಿತವಾಗಿ ರಾಷ್ಟ್ರ ಪಶಸ್ತಿ ಲಭಿಸುತ್ತದೆ ಎಂದಿದ್ದೆ. ಈ ವೇಳೆ ಬಾಲಿವುಡ್ ತಾರೆ ಐಶ್ವರ್ಯ ರೈ ಮತ್ತು ತಾರಾ ನಡುವೆ ರಾಷ್ಟ್ರಪ್ರಶಸ್ತಿಗಾಗಿ ಪೈಪೋಟಿ ಇತ್ತು. ಕೊನೆಗೆ ನಾನು ಹೇಳಿದಂತೆ ಕನ್ನಡತಿ ತಾರಾಗೆ ರಾಷ್ಟ್ರಪ್ರಶಸ್ತಿ ಬಂತು ಎಂದು ಆ ಸನ್ನಿವೇಶವನ್ನು ವಿವರಿಸಿದರು.

ನನ್ನ ಕಥೆಗಳನ್ನು ಯಾರಾದರೂ ಇಂಗ್ಲಿಷ್‌ಗೆ ತರ್ಜುಮೆ ಮಾಡುತ್ತಾರೆಯೇ ಎಂದು ಪರಿಚಯದ ಪತ್ರಕರ್ತರೊಬ್ಬರನ್ನು ಮೂರು ವರ್ಷದ ಹಿಂದೆ ಕೇಳಿದ್ದೆ. ಆಗ ಅವರು, ದೀಪಾ ಭಸ್ತಿ ಅವರ ಮೊಬೈಲ್ ನಂಬರ್ ಕೊಟ್ಟರು. ನಾನು, ಅವರಿಗೆ ಕರೆ ಮಾಡುವ ವೇಳೆ ಮಣಿಪಾಲ ಆಸ್ಪತ್ರೆಯಲ್ಲಿ ಹೃದಯ ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಸ್ವಲ್ಪ ದಿನಗಳ ನಂತರ ದೀಪಾ ಭಸ್ತಿ, ನನಗೆ ಕರೆ ಮಾಡಿ, ನಿಮ್ಮ ಕಥಾ ಸಂಕಲನ ಯುನೈಟೆಡ್ ಕಿಂಗ್‌ಡಮ್ (ಯುಕೆ) ನಲ್ಲಿಯೇ ಪ್ರಕಟಿಸುವುದಾಗಿ ಅನುಮತಿ ಕೋರಿ ಮನವಿ ಮಾಡಿದ್ದರು. ಬಿಡುಗಡೆಗೊಂಡ ಮೇಲೆ ಆ ಕೃತಿಗೆ 'ಪೆನ್' ಪ್ರಶಸ್ತಿ ಲಭಿಸಿತು. ಇದೀಗ ಬೂಕರ್ ಪ್ರಶಸ್ತಿಗೆ ನನ್ನ ಕಥೆ ಆಯ್ಕೆಯಾಗಿದೆ. ಅದು ಲಭಿಸಲಿ ಎಂದು ನೀವೆಲ್ಲರೂ ಹಾರೈಸುವಂತೆ ಮನವಿ ಮಾಡಿದರು.

ನಂತರ ಲೇಖಕಿ ಪ್ರೀತಿನಾಗರಾಜ್ ಅಮು ಸಂವಾದ ನಡೆಸಿಕೊಟ್ಟರು. ಸಂವಾದದಲ್ಲಿ ವಿಶ್ರಾಂತ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ, ವಿಜ್ಞಾನ ಲೇಖಕಿ ಪದ್ಮಾ ಶ್ರೀರಾಮ, 'ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್'ನ ಶುಭಾ ಸಂಜಯ ಅರಸ್, ಪ್ರಕಾಶಕ ಅಭಿರುಚಿ ಗಣೇಶ್ ಪಾಲ್ಗೊಂಡಿದ್ದರು.

# ಮೇ 3, 4 ರಂದು ಮೈಸೂರಲ್ಲಿ 'ಹಲಸು ಮೇಳ'

**ನಾನಾ ತಳಿಯ ಹಲಸು ಸವಿಯುವ ಸದವಕಾಶ**



ಮೈಸೂರು, ಏ.30(ಎಂಕೆ)– ಬಾಯಿಗಿಟ್ಟರೆ ಜೇನು ಸವಿದಂತೆನಿಸುವ ಹಲಸಿನ ಬಗೆ ಬಗೆಯ ಹಣ್ಣುಗಳು, ತಿಂಡಿ–ತಿನಿಸುಗಳ 'ಹಲಸು ಮೇಳ' ಮೇ 3 ಮತ್ತು 4 ರಂದು ಮೈಸೂರಿನ ನಂಜರಾಜ ಬಹದ್ದೂರ್ ಛತ್ರ ನಡೆಯಲಿದೆ.

ಸಹಜ ಸಮೃದ್ಧ ಕೃಷಿಕರ ಬಳಗ, ರೋಟರಿ ಮೈಸೂರು ಪಶ್ಚಿಮ ಸಹಯೋಗದೊಂದಿಗೆ ಗ್ರಾಹಕರಿಗೆ ಮತ್ತು ರೈತರಿಗೆ ಹಲಸಿನ ಮಹತ್ವವನ್ನು ತಿಳಿಸಿಕೊಡುವ ಉದ್ದೇಶದಿಂದ ಏರ್ಪಡಿಸಿರುವ ಹಲಸು ಮೇಳದಲ್ಲಿ ಕೆಂಪು, ಹಳದಿ ಮತ್ತು ಬಿಳಿ ಹಲಸಿನ ತಳಿಯ ಹಣ್ಣುಗಳು ತಿನ್ನಲು ಸಿಗಲಿವೆ. ಹಲಸಿನ ಐಸ್ ಕ್ರೀಂ, ಚಿಪ್ಸ್, ಚಾಕೋಲೇಟ್, ಹಪ್ಪಳ, ಹಲ್ವ, ಕಬಾಬ್, ಹೋಳಿಗೆ, ವಡೆ, ದೋಸೆ, ಪಲ್ಯ, ಬಿರಿಯಾನಿ ಮಳಿಗೆಗಳು ಇರಲಿದ್ದು, ಹಲಸಿನ ಮೌಲ್ಯವರ್ಧಿತ ಪದಾರ್ಥಗಳು ಹಾಗೂ ಹಲಸು ಹಚ್ಚುವ ಯಂತ್ರ ದೊರೆಯಲಿದೆ.

ಹೆಚ್.ಡಿ.ಕೋಟೆ, ಕೊಳ್ಳೇಗಾಲ, ಪಿರಿಯಾಪಟ್ಟಣ, ಕೆ.ಆರ್.ಪೇಟೆ, ತುಮಕೂರು, ಹಾವೇರಿ, ಮತ್ತು ಶಿವಮೊಗ್ಗ ಭಾಗದ ಹಲಸಿನ ಬೆಳೆಗಾರರು ಗುಣಮಟ್ಟದ ಹಲಸಿನ ಹಣ್ಣುಗಳನ್ನು ಮಾರಾಟಕ್ಕೆ ತರಲಿದ್ದಾರೆ. ಚೇಳೂರಿನ ಕೆಂಪು ಹಲಸು, ನಾಗರಹೊಳೆ ಕಾಡಿನ ಬಿಳಿ ಹಲಸು ಮತ್ತು ಕೊಡಗಿನ ರುದ್ರಾಕ್ಷಿ ಹಲಸು ಸವಿಯಬಹುದಾಗಿದೆ. ಕೇರಳ, ಮಲೇಷಿಯಾ, ವಿಯೆಟ್ನಾಂ, ಥಾಯ್ಲೆಂಡಿನ ಹೆಸರಾಂತ ಹಲಸಿನ ತಳಿಗಳ ಕಾಯಿ ಮತ್ತು ಹಣ್ಣು ಪ್ರದರ್ಶನ ಇರಲಿದೆ.




ಜೊತೆಗೆ ತಜ್ಞರಿಂದ 'ಹಲಸಿನ ಸಾಗುವಳಿ ಮತ್ತು ಮಾರುಕಟ್ಟೆ' ಕುರಿತು ತರಬೇತಿ ಕಾರ್ಯಕ್ರಮ ನಡೆಯಲಿದ್ದು, ಡೆಂಗ್ ಸೂರ್ಯ, ರುದ್ರಾಕ್ಷಿ ಬಕ್ಕೆ, ತೂಬಗೆರೆ, ಬೈರಸಂದ್ರ, ಸರ್ವ ಋತು, ಲಾಲ್ ಬಾಗ್ ಮಧುರ, ಥಾಯ್‌ರೆಡ್, ವಿಯಟ್ನಾಂ ಸೂಪರ್ ಹರ್ಲಿ, ಗಮ್ ಲೆಸ್, ನಾಗ ಚಂದ್ರ, ರಾಮಚಂದ್ರ ಮೊದಲಾದ 25ಕ್ಕೂ ಹೆಚ್ಚಿನ ಜನಪ್ರಿಯ ಹಲಸಿನ ತಳಿಯ ಗಿಡಗಳು ಹಾಗೂ ಉತ್ತರ ಭಾರತದಲ್ಲಿ ಹೆಸರುವಾಸಿಯಾದ 'ಜ್ಯೂಸ್ ಬಿಲ್ವ' ಗಿಡಗಳು ದೊರೆಯಲಿವೆ.

**ಸ್ಪರ್ಧೆ:** ಮೇ 3ರ ಸಂಜೆ ಹಲಸು ಎತ್ತುವ ಮತ್ತು ಹಲಸಿನ ತೂಕ ಊಹಿಸುವ ಸ್ಪರ್ಧೆ ಹಾಗೂ ಮೇ 4 ರಂದು ಮಧ್ಯಾಹ್ನ 2 ಘಂಟೆಗೆ 'ಹಲಸಿನ ಹಣ್ಣು ತಿನ್ನುವ ಸ್ಪರ್ಧೆ' ಏರ್ಪಡಿಸಲಾಗಿದೆ. ಜೊತೆಗೆ ಮಕ್ಕಳು ಮತ್ತು ಹಿರಿಯರು ಮನೆಯಲ್ಲೇ ಹಲಸಿನ ಚಿತ್ರ ಬರೆದು ಮೇಳಕ್ಕೆ ತಂದು ಪ್ರದರ್ಶಿಸುವ 'ಚಿತ್ರಕಲಾ ಸ್ಪರ್ಧೆ'ಯೂ ಇರಲಿದೆ.

ಹಲಸು ಮೇಳವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕವಿ ಮತ್ತು ಹಲಸು ಬೆಳೆಗಾರ ಕೃಷ್ಣಮೂರ್ತಿ ಬಿಳಿಗೆರೆ ಉದ್ಘಾಟಿಸಲಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ ವಿಜೇತ ರೈತ ಶಿವನಾಪುರದ ರಮೇಶ್, ರೋಟರಿ ಕ್ಲಬ್ ಮೈಸೂರು ಪಶ್ಚಿಮದ ಅಧ್ಯಕ್ಷ ಎಂ.ಎಲ್.ನಾಗೇಶ್, ಕಾರ್ಯದರ್ಶಿ ಎಂ.ದೇವರಾಜು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಸಹಜ ಸಮೃದ್ಧ ಕೃಷಿಕರ ಬಳಗದ ಕೃಷ್ಣಪ್ರಸಾದ್ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯ ಅಧ್ಯಕ್ಷರಾಗಿ ಅಲೋಕ್ ಜೋಶಿ ನೇಮಕ



ನವದೆಹಲಿ, ಏ.30– ಕೇಂದ್ರ ಸರ್ಕಾರವು ಭಾರತದ ಬಾಹ್ಯ ಗುಪ್ತಚರ ಸಂಸ್ಥೆ ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ ನ ಮಾಜಿ ಮುಖ್ಯಸ್ಥ ಅಲೋಕ್ ಜೋಶಿ ಅವರನ್ನು ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯ (ಎನ್‌ಎಸ್‌ಎಬಿ) ಅಧ್ಯಕ್ಷರನ್ನಾಗಿ ನೇಮಿಸಿ ಬುಧವಾರ ಆದೇಶ ಹೊರಡಿಸಿದೆ.

ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿಗೆ ಭಾರತವು ಪ್ರತೀಕಾರ ತೀರಿಸಿಕೊಳ್ಳಲು ತಯಾರಿ ನಡೆಸುತ್ತಿದೆ ಎನ್ನುವ ಊಹಾಪೋಹಗಳ ನಡುವೆ, ಅದರ ಗಡಿಯಾಚೆಗಿನ ಸಂಪರ್ಕಗಳನ್ನು ಗಮನದಲ್ಲಿಟ್ಟುಕೊಂಡು ಈ ಬದಲಾವಣೆ ಮಾಡಿದೆ.

ನೌಕಾಪಡೆಯ ಪಶ್ಚಿಮ ಕಮಾಂಡ್‌ನ ಮಾಜಿ ಏರ್ ಕಮಾಂಡರ್ ಏರ್ ಮಾರ್ಷಲ್ ಪಿ.ಎಂ. ಸಿನ್ಹಾ, ಮಾಜಿ ಸದರ್ನ್ ಆರ್ಮಿ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಎ.ಕೆ.ಸಿಂಗ್ ಮತ್ತು ನೌಕಾಪಡೆಯ ನಿವೃತ್ತ ರಿಯರ್ ಅಡ್ಮಿರಲ್ ಮಾಂಟಿ ಖನ್ನಾ ಅವರನ್ನು ನೂತನ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಇವರಲ್ಲದೆ, ಮಾಜಿ ರಾಜತಾಂತ್ರಿಕ ಅಧಿಕಾರಿ ಬಿ. ವೆಂಕಟೇಶ್ ವರ್ಮಾ ಮತ್ತು ನಿವೃತ್ತ ಐಪಿಎಸ್ ರಾಜೀವ್ ರಂಜನ್ ವರ್ಮಾ ಅವರನ್ನೂ ಮಂಡಳಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

# ಪಾಕಿಸ್ತಾನ ಪರ ಘೋಷಣೆ ಕೂಗುವುದು ದೇಶದ್ರೋಹ

## ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ನುಡಿ



ಬೆಂಗಳೂರು, ಏ. 30(ಕೆಎಂಶಿ)– ಪಾಕಿಸ್ತಾನದ ಪರ ಘೋಷಣೆ ಕೂಗುವುದು ದೇಶ ದ್ರೋಹ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಹಿಂದೂಸ್ತಾನದ ಒಗ್ಗಟ್ಟಿಗೆ ವಿರುದ್ಧವಾಗಿ ಯಾರೇ ನಡೆದುಕೊಂಡರೂ, ಮಾತನಾಡಿದರೂ ಅದು ದೇಶ ದ್ರೋಹದ ಕೆಲಸ

**ಮಂಗಳೂರು ಹತ್ಯೆ ತನಿಖೆ:** ಮಂಗಳೂರು ಸಮೀಪ ಕ್ರಿಕೆಟ್ ಆಡುವ ವೇಳೆ ಪಾಕಿಸ್ತಾನದ ಪರ ಘೋಷಣೆ ಕೂಗಿದ ವ್ಯಕ್ತಿಯನ್ನು ಗುಂಪೊಂದು ಹತ್ಯೆ ಮಾಡಿತು ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿ ಅವರು, ಈ ಬಗ್ಗೆ ತನಿಖೆ ನಡೆಯುತ್ತಿದೆ ಎಂದರು.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಾಕಿಸ್ತಾನ ಜಿಂದಾಬಾದ್ ಎಂಬ ಘೋಷಣೆ ಕೂಗಿದ ವ್ಯಕ್ತಿಯ ಹತ್ಯೆ ಪ್ರಕರಣದಲ್ಲಿ 15 ಜನರ ಮೇಲೆ ಮೊಕದ್ದಮೆ ದಾಖಲಾಗಿದ್ದು ತನಿಖೆ ನಡೆಯುತ್ತಿದೆ, ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.

ಪಾಕಿಸ್ತಾನ ಪರವಾಗಿ ಮಾತನಾಡಿದರೆ ಅದು ಮಹಾ ತಪ್ಪು, ನಮ್ಮ ದೇಶದ ಏಕತೆಗೆ ನಾವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕಾಗುತ್ತದೆ. ಕಾಶ್ಮೀರ ದಾಳಿ ನಂತರ ಪಾಕಿಸ್ತಾನದ ವಿರುದ್ಧ ಯುದ್ಧ ಮಾಡುವ ಸನ್ನಿವೇಶ ಇಲ್ಲ ಎಂಬ ಮುಖ್ಯಮಂತ್ರಿ ಹೇಳಿಕೆ ಭಾರೀ ವಿವಾದಕ್ಕೆ ಎಡೆ ಮಾಡಿತ್ತು.

ಇದನ್ನೇ ಪಾಕಿಸ್ತಾನದ ಕೆಲವು ಮಾಧ್ಯಮಗಳು ಬಿಂಬಿಸಿದ್ದವು. ಅಲ್ಲದೆ, ಭಾರತದ ರಾಷ್ಟ್ರೀಯ ಸುದ್ದಿ ವಾಹಿನಿಗಳು ಸಿದ್ದರಾಮಯ್ಯ ಹೇಳಿಕೆಯನ್ನು ಚರ್ಚೆಯ ಗ್ರಾಸವಾಗಿ ಮಾಡಿ ಕೊಂಡಿದ್ದವು. ಕೇಂದ್ರ ಸರ್ಕಾರದ ಬೆಲೆ ಏರಿಕೆ ವಿರುದ್ಧದ ಬೆಳಗಾವಿ ಸಮಾವೇಶದಲ್ಲಿ ಇದಕ್ಕೆ ಸ್ಪಷ್ಟನೆ ನೀಡಿದ ಮುಖ್ಯಮಂತ್ರಿ ಅವರು, ಬಿಜೆಪಿ ವಿರುದ್ಧ ಹರಿಹಾಯ್ದಿದ್ದಲ್ಲದೆ ರಾಷ್ಟ್ರ ಮಟ್ಟದ ಸುದ್ದಿ ವಾಹಿನಿಗಳ ಮೇಲೆ ಕಿಡಿಕಾರಿದ್ದರು. ಈ ಎಲ್ಲಾ ಬೆಳವಣಿಗೆ ನಂತರ ಮುಖ್ಯಮಂತ್ರಿ ಅವರು, ಪಾಕ್ ಪರ ಘೋಷಣೆ ಕೂಗುವವರ ವಿರುದ್ಧ ಹರಿಹಾಯ್ದಿದ್ದಾರೆ.

**ಗೃಹ ಸಚಿವರ ರಾಜೀನಾಮೆಗೆ ಎಸ್‌ಡಿಪಿಐ ಆಗ್ರಹ:** ಕುಡುಪುವಿನಲ್ಲಿ ಗುಂಪು ಹಲ್ಲೆಯಿಂದ ಅಶ್ರಫ್ ಎಂಬ ಯುವಕ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ರಾಜ್ಯ ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಮ್ಮ ಹೇಳಿಕೆಯನ್ನು ಹಿಂಪಡೆಯಬೇಕು ಹಾಗೂ ಜವಾಬ್ದಾರಿಯುತವಾದ ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಎಸ್‌ಡಿಪಿಐ ಒತ್ತಾಯಿಸಿದೆ. ನೆರೆಯ ಶತ್ರು ದೇಶದ ಪರ ಜೈಕಾರ ಹಾಕಿದ ಕಾರಣಕ್ಕೆ ಆ ಯುವಕನ ಮೇಲೆ ಹಲ್ಲೆ ನಡೆದಿದೆ ಎಂದು ಗೃಹ ಸಚಿವರು ನೀಡಿರುವ ಹೇಳಿಕೆ ರಾಜ್ಯದಲ್ಲಿ ಇರುವುದು ಕಾಂಗ್ರೆಸ್ ಸರ್ಕಾರವೇ ಅಥವಾ ಸಮ್ಮಿಶ್ರ ಸರ್ಕಾರವೇ ಎಂದು ಪ್ರಶ್ನಿಸಿದ್ದಾರೆ.

ಸಮಾಜವಾದಿ ಸಿದ್ಧಾಂತದ ಸಿದ್ದರಾಮಯ್ಯ ಇದರ ಬಗ್ಗೆ ಇನ್ನೂ ಮಾತನಾಡಿಲ್ಲ, ಇನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ಇತ್ತ ಕಡೆ ಗಮನವೇ ಇಲ್ಲ ಎಂದು ಕಿಡಿಕಾರಿದ್ದಾರೆ.

# ಜಾತಿಗಣತಿ ವರದಿಗೆ ಆಕ್ಷೇಪ ವ್ಯಕ್ತಪಡಿಸುವುದು ಸರಿಯಲ್ಲ



ಮೈಸೂರು, ಏ.30(ಜಿಎ)–ಕಾಂತರಾಜು ಆಯೋಗದ ಮತ್ತು ಜಯಪ್ರಕಾಶ್ ಆಯೋಗದ ಶಿಫಾರಸುಗಳ ಬಗ್ಗೆ ಆಡಳಿತಾ ರೂಢ ಕಾಂಗ್ರೆಸ್ ಪಕ್ಷದ ಸಚಿವರು ಹಾಗೂ ಶಾಸಕರು ಆಕ್ಷೇಪ ಎತ್ತಿರುವುದು ಸರಿಯಲ್ಲ. ಇದರಿಂದಾಗಿ ವರದಿ ಜಾರಿ ತಡವಾಗುತ್ತಿದೆ ಎಂದು ಕರ್ನಾಟಕ ದಲಿತ ಚಳವಳಿ ನವನಿರ್ಮಾಣ ವೇದಿಕೆ ಅಧ್ಯಕ್ಷ ಹರಿಹರ ಆನಂದಸ್ವಾಮಿ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತಿ ಗಣತಿಯನ್ನು ಏಕೆ ವಿರೋಧಿಸುತ್ತಿದ್ದೇವೆ ಎಂಬ ಕಾರಣವನ್ನು ಇವರು ಸಾರ್ವಜನಿಕರಿಗೆ ಸ್ಪಷ್ಟಪಡಿಸಿಲ್ಲ. ವರದಿ ಅವೈಜ್ಞಾನಿಕ ಎಂದು ಬಿಜೆಪಿ, ಜೆಡಿಎಸ್ ಹಾಗೂ ಕಾಂಗ್ರೆಸ್‌ನ ಕೆಲವರು ಆರೋಪಿಸುತ್ತಿರುವುದರಲ್ಲಿ ಯಾವುದೇ ಹುರುಳಿಲ್ಲ ಎಂದರು.

ಸ್ವಾತಂತ್ರ್ಯ ಬಂದಾಗಿನಿದ ಕೇವಲ ಮೂರು ಸಮುದಾಯಗಳು ಮಾತ್ರ ರಾಜ್ಯಾಧಿಕಾರ ವನ್ನು ಅನುಭವಿಸುವುದರಲ್ಲಿ ಸಿಂಹಪಾಲು ಹೊಂದಿವೆ. ಈಗ ಇದೇ ಸಮುದಾಯಗಳು ವರದಿ ಬಿಡುಗಡೆಗೆ ವಿರೋಧಿಸುತ್ತಿವೆ ಎಂದು ಕಿಡಿಕಾರಿದರು. ಜಾತಿಗಣತಿ ವರದಿ ಬಿಡುಗಡೆಯಿಂದ ನಿಖರವಾದ ಜಾತಿ ವಾರು ಜನಸಂಖ್ಯೆ, ವೈಜ್ಞಾನಿಕ ದತ್ತಾಂಶ ಮತ್ತು ಎಲ್ಲ ದಮನಿತ ಸಣ್ಣ–ಸಣ್ಣ ಸಮುದಾಯಗಳು ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪಡೆಯಲು ಅನುಕೂಲವಾಗುತ್ತದೆ. ಹೀಗಾಗಿ ವರದಿ ವಿರೋಧಿಸುವ ಬಲಾಢ್ಯ ಜಾತಿಯ ಮುಖಂಡರು ಹಾಗೂ ರಾಜಕೀಯ ಪಕ್ಷಗಳು ಆತ್ಮಸಾಕ್ಷಿಯಿಂದ ಪ್ರಶ್ನಿಸಿಕೊಂಡು ವರದಿ ಬಿಡುಗಡೆಗೆ ಮತ್ತು ಅದರ ಅನುಷ್ಠಾನಕ್ಕೆ ಅನುವು ಮಾಡಿಕೊಡಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಿ.ಹರಕುಮಾರ್, ಸೋಮಯ್ಯ ಮಲೆಯೂರು, ಚಂದ್ರಶೇಖರ್, ನಂಜುಂಡ ಸ್ವಾಮಿ, ಸತೀಶ್ ಉಪಸ್ಥಿತರಿದ್ದರು.



केन्द्रीय रेशम उत्पादन अनुसंधान एवं प्रशिक्षण संस्थान
Central Sericultural Research & Training Institute
[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008
[Central Silk Board - Min. of Textiles – Govt. of India] Manandavadi road, Srirampura Mysore 5780008
सं. सीएसबी/आरटीआई/एसएससी/2025-26 दि:Date: 28/04/2025

**WALK-IN-INTERVIEW FOR THE POST OF PROJECT ASSISTANT**

A Walk-in-Interview will be held on 19/05/2025 at Central Sericultural Research and Training Institute, Srirampura, Mysuru - 570 008 as shown below:

'A' 01 (One) Project Assistant (PA) purely on contract basis under CSB approved Project "Sustainability index analysis of Sericulture Based Integrated Farming System (IFS) in South India" (Project Code: SPR 01047MIC) for a period Up to September 2027 or completion of project whichever is earlier under CSB Terms and Conditions.

**Qualifications for Project Assistant (PA):**
1. Three/Four years full time B.Sc. in relevant subject (Agriculture / Life Sciences) or above, with minimum 55% marks (50% for SC/ST candidates).

**Desirable qualifications:** Candidate with experience in data collection from farmers and having higher qualification and/or work experience in data analysis.

**Walk in Interview will be held on 19/05/2025, time 10:30 AM (candidates should reach the venue by 9:30 AM for verification of documents, other recruitment procedures).**

Interested can also visit our website www.csrtimys.res.in, https://csb.gov.in/ for details.

Sd/- Director , CSR &TI, Mysuru



MYSORE RACE CLUB CHARITABLE TRUST
H-1, Vinayamarga, Siddhartha Layout, MYSORE 570 011
Tel.No.0821-2472102 | Email: administrator@mrceyehospital.in

**Mysore Race Club (MRC) Eye Hospital**
**REQUIRES**

(1) General Ophthalmologist (2) Glaucoma Specialist
(3) Cornea Specialist (4) Pediatric Ophthalmologist

Doctors having MS/DNB/DOMS & also doctors with fellowship in Glaucoma, Cornea & Pediatric ophthalmology from reputed institutions, with surgical experience in SICS and phacoemulsification preferred.
Candidates may apply within 7 days to :
mrc_eye@rediffmail.com or administrator@mrceyehospital.in
with their detailed resume.
Salary will be commensurate with qualification and surgical experience.

Sd/- Secretary
MRC Charitable Trust

kotak
Kotak Mahindra Bank

## ಪ್ರಕಟಣೆ

**ಶ್ರೀ ಎಲ್ ಕಿರಣ್ ರಾಜು** ಎಂಬುವವರು ನಂ. 44 ರಾಮಸ್ವಾಮಿ ಕಾಂಪ್ಲೆಕ್ಸ್ KRS ರಸ್ತೆ ಮೈಸೂರು-570016, ಈ ವಿಳಾಸದಲ್ಲಿರುವ ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ನ ಮಾರೇಗೌಡನಹಳ್ಳಿ ಶಾಖೆಯಲ್ಲಿ ಲಾಕರ್‌ನ್ನು ಬಾಡಿಗೆಗೆ ಪಡೆದಿದ್ದು, ಕಳೆದ ಹಣಕಾಸು ವರ್ಷಗಳು ಅಂದರೆ, 2016-17, 2017-18, 2018-19, 2019-20, 2020-21, 2021-22, 2022-23, 2023-24 ಮತ್ತು 2024-25ನೇ ಸಾಲಿನಿಂದಲೂ ಸದರಿ ಲಾಕರಿನ ಬಾಡಿಗೆ ಪಾವತಿಯು ಬಾಕಿ ಇರುತ್ತದೆ. ಲಾಕರ್ ಬಾಡಿಗೆಯನ್ನು ಪಾವತಿಸುವಂತೆ **ಶ್ರೀ ಎಲ್ ಕಿರಣ್ ರಾಜು** ಅವರಿಗೆ ಕಳುಹಿಸಲಾದ ಎಲ್ಲಾ 3 ಪತ್ರಗಳು ಬಟವಾಡೆಗೊಳ್ಳದೆ ವಾಪಸಾಗಿರುವುದನ್ನು ಒಳಗೊಂಡಂತೆ ಅವರನ್ನು ಹಲವು ಬಾರಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಹ ಸಾಧ್ಯವಾಗಿರುವುದಿಲ್ಲ ಮತ್ತು ಬಾಕಿ ಇರುವ ಹಣ ಮರುಪಾವತಿಯಾಗಿರುವುದಿಲ್ಲ. ಈ ಹಿಂದೆ ಫೆಬ್ರವರಿ 1, 2025 ರಂದು ಪ್ರಕಟಗೊಂಡಿದ್ದ ಸಾರ್ವಜನಿಕ ಪ್ರಕಟಣೆಯಲ್ಲಿ, ಏಪ್ರಿಲ್ 30, 2025 ರಂದು ಮುಕ್ತವಾಗಿ ಲಾಕರ್‌ನ್ನು ಒಡೆಯಲಾಗುವುದು ಎಂದು ಪ್ರಕಟಿಸಲಾಗಿತ್ತು. ಆದರೆ, ಏಪ್ರಿಲ್ 30 ಮತ್ತು ಮೇ 1 ರಂದು ಬ್ಯಾಂಕ್ ರಜೆ ಇರುವ ಕಾರಣದಿಂದಾಗಿ, ಈಗ ಮೇ 8 ರಂದು 2025 ರ ಬೆಳಿಗ್ಗೆ 11:00 ಗಂಟೆಗೆ ಲಾಕರ್ ಒಡೆಯುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುತ್ತದೆ ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

**ಶ್ರೀ ಎಂ ಚಂದ್ರನಾಥ್ ಮತ್ತು ಬಿ ವಿ ಸುಮಿತ್ರ** ಎಂಬುವವರು ನಂ. 44 ರಾಮಸ್ವಾಮಿ ಕಾಂಪ್ಲೆಕ್ಸ್ KRS ರಸ್ತೆ ಮೈಸೂರು-570016, ಈ ವಿಳಾಸದಲ್ಲಿರುವ ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ನ ಮಾರೇಗೌಡನಹಳ್ಳಿ ಶಾಖೆಯಲ್ಲಿ ಲಾಕರ್‌ನ್ನು ಬಾಡಿಗೆಗೆ ಪಡೆದಿದ್ದು, ಕಳೆದ ಹಣಕಾಸು ವರ್ಷಗಳು ಅಂದರೆ, 2017-18, 2018-19, 2019-20, 2020-21, 2021-22, 2022-23, 2023-24 ಮತ್ತು 2024-25ನೇ ಸಾಲಿನಿಂದಲೂ ಸದರಿ ಲಾಕರಿನ ಬಾಡಿಗೆ ಪಾವತಿಯು ಬಾಕಿ ಇರುತ್ತದೆ. ಲಾಕರ್ ಬಾಡಿಗೆಯನ್ನು ಪಾವತಿಸುವಂತೆ **ಶ್ರೀ ಎಂ ಚಂದ್ರನಾಥ್ ಮತ್ತು ಬಿ ವಿ ಸುಮಿತ್ರ** ಅವರಿಗೆ ಕಳುಹಿಸಲಾದ ಎಲ್ಲಾ 3 ಪತ್ರಗಳು ಬಟವಾಡೆಗೊಳ್ಳದೆ ವಾಪಸಾಗಿರುವುದನ್ನು ಒಳಗೊಂಡಂತೆ ಅವರನ್ನು ಹಲವು ಬಾರಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಹ ಸಾಧ್ಯವಾಗಿರುವುದಿಲ್ಲ ಮತ್ತು ಬಾಕಿ ಇರುವ ಹಣ ಮರುಪಾವತಿಯಾಗಿರುವುದಿಲ್ಲ. ಈ ಹಿಂದೆ ಫೆಬ್ರವರಿ 1, 2025 ರಂದು ಪ್ರಕಟಗೊಂಡಿದ್ದ ಸಾರ್ವಜನಿಕ ಪ್ರಕಟಣೆಯಲ್ಲಿ, ಏಪ್ರಿಲ್ 30, 2025 ರಂದು ಮುಕ್ತವಾಗಿ ಲಾಕರ್‌ನ್ನು ಒಡೆಯಲಾಗುವುದು ಎಂದು ಪ್ರಕಟಿಸಲಾಗಿತ್ತು. ಆದರೆ, ಏಪ್ರಿಲ್ 30 ಮತ್ತು ಮೇ 1 ರಂದು ಬ್ಯಾಂಕ್ ರಜೆ ಇರುವ ಕಾರಣದಿಂದಾಗಿ, ಈಗ ಮೇ 8 ರಂದು 2025 ರ ಬೆಳಿಗ್ಗೆ 11:00 ಗಂಟೆಗೆ ಲಾಕರ್ ಒಡೆಯುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುತ್ತದೆ ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

**ಶ್ರೀಮತಿ ಯಶೋದಾ ಮತ್ತು ಕಿರಣ್ ಕುಮಾರ್ ಹೆಚ್ ಎಸ್** ಎಂಬುವವರು ನಂ. 44 ರಾಮಸ್ವಾಮಿ ಕಾಂಪ್ಲೆಕ್ಸ್ KRS ರಸ್ತೆ ಮೈಸೂರು -570016, ಈ ವಿಳಾಸದಲ್ಲಿರುವ ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ನ ಮಾರೇಗೌಡನಹಳ್ಳಿ ಶಾಖೆಯಲ್ಲಿ ಲಾಕರ್‌ನ್ನು ಬಾಡಿಗೆಗೆ ಪಡೆದಿದ್ದು, ಕಳೆದ ಹಣಕಾಸು ವರ್ಷಗಳು ಅಂದರೆ, 2016-17, 2017-18, 2018-19, 2019-20, 2020-21, 2021-22, 2022-23, 2023-24 ಮತ್ತು 2024-25ನೇ ಸಾಲಿನಿಂದಲೂ ಸದರಿ ಲಾಕರಿನ ಬಾಡಿಗೆ ಪಾವತಿಯು ಬಾಕಿ ಇರುತ್ತದೆ. ಲಾಕರ್ ಬಾಡಿಗೆಯನ್ನು ಪಾವತಿಸುವಂತೆ **ಶ್ರೀಮತಿ ಯಶೋದಾ ಮತ್ತು ಕಿರಣ್ ಕುಮಾರ್ ಹೆಚ್ ಎಸ್** ಅವರಿಗೆ ಕಳುಹಿಸಲಾದ ಎಲ್ಲಾ 3 ಪತ್ರಗಳು ಬಟವಾಡೆಗೊಳ್ಳದೆ ವಾಪಸಾಗಿರುವುದನ್ನು ಒಳಗೊಂಡಂತೆ ಅವರನ್ನು ಹಲವು ಬಾರಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಹ ಸಾಧ್ಯವಾಗಿರುವುದಿಲ್ಲ ಮತ್ತು ಬಾಕಿ ಇರುವ ಹಣ ಮರುಪಾವತಿಯಾಗಿರುವುದಿಲ್ಲ. ಈ ಹಿಂದೆ ಫೆಬ್ರವರಿ 1, 2025 ರಂದು ಪ್ರಕಟಗೊಂಡಿದ್ದ ಸಾರ್ವಜನಿಕ ಪ್ರಕಟಣೆಯಲ್ಲಿ, ಏಪ್ರಿಲ್ 30, 2025 ರಂದು ಮುಕ್ತವಾಗಿ ಲಾಕರ್‌ನ್ನು ಒಡೆಯಲಾಗುವುದು ಎಂದು ಪ್ರಕಟಿಸಲಾಗಿತ್ತು. ಆದರೆ, ಏಪ್ರಿಲ್ 30 ಮತ್ತು ಮೇ 1 ರಂದು ಬ್ಯಾಂಕ್ ರಜೆ ಇರುವ ಕಾರಣದಿಂದಾಗಿ, ಈಗ ಮೇ 8 ರಂದು 2025 ರ ಬೆಳಿಗ್ಗೆ 11:00 ಗಂಟೆಗೆ ಲಾಕರ್ ಒಡೆಯುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುತ್ತದೆ ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

**ಶ್ರೀಮತಿ ನಾಗರತ್ನಮ್ಮ** ಎಂಬುವವರು ನಂ. 44 ರಾಮಸ್ವಾಮಿ ಕಾಂಪ್ಲೆಕ್ಸ್ KRS ರಸ್ತೆ ಮೈಸೂರು -570016, ಈ ವಿಳಾಸದಲ್ಲಿರುವ ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ನ ಮಾರೇಗೌಡನಹಳ್ಳಿ ಶಾಖೆಯಲ್ಲಿ ಲಾಕರ್‌ನ್ನು ಬಾಡಿಗೆಗೆ ಪಡೆದಿದ್ದು, ಕಳೆದ ಹಣಕಾಸು ವರ್ಷಗಳು ಅಂದರೆ, 2017-18, 2018-19, 2019-20, 2020-21, 2021-22, 2022-23, 2023-24 ಮತ್ತು 2024-25ನೇ ಸಾಲಿನಿಂದಲೂ ಸದರಿ ಲಾಕರಿನ ಬಾಡಿಗೆ ಪಾವತಿಯು ಬಾಕಿ ಇರುತ್ತದೆ. ಲಾಕರ್ ಬಾಡಿಗೆಯನ್ನು ಪಾವತಿಸುವಂತೆ **ಶ್ರೀಮತಿ ನಾಗರತ್ನಮ್ಮ** ಅವರಿಗೆ ಕಳುಹಿಸಲಾದ ಎಲ್ಲಾ 3 ಪತ್ರಗಳು ಬಟವಾಡೆಗೊಳ್ಳದೆ ವಾಪಸಾಗಿರುವುದನ್ನು ಒಳಗೊಂಡಂತೆ ಅವರನ್ನು ಹಲವು ಬಾರಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಹ ಸಾಧ್ಯವಾಗಿರುವುದಿಲ್ಲ ಮತ್ತು ಬಾಕಿ ಇರುವ ಹಣ ಮರುಪಾವತಿಯಾಗಿರುವುದಿಲ್ಲ. ಈ ಹಿಂದೆ ಫೆಬ್ರವರಿ 1, 2025 ರಂದು ಪ್ರಕಟಗೊಂಡಿದ್ದ ಸಾರ್ವಜನಿಕ ಪ್ರಕಟಣೆಯಲ್ಲಿ, ಏಪ್ರಿಲ್ 30, 2025 ರಂದು ಮುಕ್ತವಾಗಿ ಲಾಕರ್‌ನ್ನು ಒಡೆಯಲಾಗುವುದು ಎಂದು ಪ್ರಕಟಿಸಲಾಗಿತ್ತು. ಆದರೆ, ಏಪ್ರಿಲ್ 30 ಮತ್ತು ಮೇ 1 ರಂದು ಬ್ಯಾಂಕ್ ರಜೆ ಇರುವ ಕಾರಣದಿಂದಾಗಿ, ಈಗ ಮೇ 8 ರಂದು 2025 ರ ಬೆಳಿಗ್ಗೆ 11:00 ಗಂಟೆಗೆ ಲಾಕರ್ ಒಡೆಯುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುತ್ತದೆ ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.